ರಂಜನೆ ಬೋಧನೆ ಪ್ರಚೋದನೆ


# ಲಂಕೇಶ್

ಏಪ್ರಿಲ್ 9, 2008 ರೂ. 12/-





## ...ಿಂಗಾಯತರ ಮೇಲೆ ...ುಗಿಬಿದ್ದ ಪೇಜಾವರ



## ಟೆಕ್ಕಿಗಳಿಗೆ ಕೊಲೆ ರೋಗ!

## ಯುದ್ಧಭೂಮಿಯಾದ ಸುರಪುರ

## ಮೈಸೂರು ಟೆರರಿಸ್ಟ್ ಪೊಲೀಸ್



...ೀರಾಮುಲು

## ಮನೋಡಾ? ರೆಡ್ಡಿವಾಡಾ?

## ...ಜೆಪಿಗೆ ರೌಡಿಗಳ ಲಗ್ಗೆ




...ೇಬಲ್ ಶ್ರೀಧರ, ಕಾಲಾಪತ್ಥರ್, ಕದಿರೇಶ

...ವಳ, ಮೆಂಟಲ್ ಪ್ರಕಾಶ, ಪ್ರವೀಣ

ಸೆಕ್ಷನ್ 49-O

# ಎಲ್ಲಾ ಅಭ್ಯರ್ಥಿಗಳನ್ನು ತಿರಸ್ಕರಿಸುವ ಹಕ್ಕು



ಕರ್ನಾಟಕದಲ್ಲಿ ಇನ್ನೇನು ಚುನಾವಣಾ ಜ್ವರ ಶುರುವಾಗಲಿದೆ. ಪ್ರಜಾಪ್ರಭುತ್ವ ಸದಾ ಜೀವಂತವಾಗಿರುವ ದೇಶವೊಂದರಲ್ಲಿ ನಾಲ್ಕೈದು ವರ್ಷಕ್ಕೊಮ್ಮೆ ಬರುವ ಚುನಾವಣೆ ಪ್ರಮುಖವಾಗುತ್ತಾದರೂ ಅದೇ ಎಲ್ಲವೂ ಆಗುವುದಿಲ್ಲ. ಆದರೆ ಯಾವ ದೇಶದಲ್ಲಿ ಪ್ರಜೆಗಳ ಪಾತ್ರ ಕೇವಲ ಐದು ವರ್ಷಕ್ಕೊಮ್ಮೆ ಬರುವ ಚುನಾವಣೆಗೆ ಮಾತ್ರ ಸೀಮಿತವಾಗಿರುತ್ತದೋ ಅಂಥ ದೇಶಗಳಲ್ಲಿ ಪ್ರಜಾಪ್ರಭುತ್ವ ನಿಜವಾದ ಪ್ರಜಾಸತ್ತೆಯ ಅಣಕ ಮಾತ್ರವಾಗಿರುತ್ತದೆ. ಆ ಪ್ರಜಾತಂತ್ರ ಪ್ರಜೆಗಳನ್ನು ಪ್ರಭುಗಳನ್ನಾಗಿಸುವುದಕ್ಕಿಂತ ಪ್ರಜೆಗಳನ್ನು ನಿಷ್ಕ್ರಿಯ ಫಲಾನುಭವಿಗಳನ್ನಾಗಿ ಮಾತ್ರ ಉಳಿಸಿರುತ್ತದೆ. ಪ್ರಜೆಗಳ ಹೆಸರಿನಲ್ಲಿ ಹಳೆಯ ಮತ್ತು ಹೊಸ ಪ್ರಭುಗಳ ರಾಜ್ಯ ಮುಂದುವರೆಯುತ್ತಿರುತ್ತದೆ.

ಭಾರತದ ಕಳೆದ ಅರವತ್ತು ವರ್ಷಗಳ ಅನುಭವ ಭಾರತವನ್ನು ಒಂದು ಜೀವಂತ ಪ್ರಜಾಪ್ರಭುತ್ವಕ್ಕಿಂತ ಫಲಾನುಭವಿ ಪ್ರಜೆಗಳನ್ನು ಸೃಷ್ಟಿಸುವ ಪ್ರಜಾತಂತ್ರವಾಗಿ ಮಾತ್ರ ಉಳಿದಿದೆ. ಒಂದು ದೇಶದ ಪ್ರತಿಯೊಂದು ಆಗುಹೋಗುಗಳಲ್ಲಿ, ದೇಶದ ಆರ್ಥಿಕ, ರಾಜಕೀಯ, ಸಾಮಾಜಿಕ ನೀತಿಗಳನ್ನು ರೂಪಿಸುವಲ್ಲಿ ಮತ್ತು ಆ ದೇಶದ ಪ್ರಾಕೃತಿಕ ಮತ್ತು ಮಾನವ ಸಂಪನ್ಮೂಲಗಳನ್ನು ಹೇಗೆ ವಿನಿಯೋಗಿಸಬೇಕೆಂದು ತೀರ್ಮಾನ ಮಾಡುವಲ್ಲಿ ಪ್ರಜೆಗಳ ಸಜೀವ ಪಾತ್ರವಿದೆಯೇ ಎಂಬುದು ಒಂದು ದೇಶದ ಪ್ರಜಾತಂತ್ರ ಜೀವಂತವಾಗಿದೆಯೇ ಎಂಬುದಕ್ಕೆ ಲಿಟ್ಮಸ್ ಟೆಸ್ಟ್ ಇದ್ದ ಹಾಗೆ. ಭಾರತದಂತಹ ಪ್ರಾತಿನಿಧಿಕ ಪ್ರಜಾತಂತ್ರದಲ್ಲಿ ಜನತೆಯ ಪರವಾಗಿ ಶಾಸಕರು ಮತ್ತು ಸಂಸದರು ಜನತೆಯ ಸಾರ್ವಭೌಮತೆಯನ್ನು ರಕ್ಷಿಸಬೇಕೆಂದು ನಿರೀಕ್ಷಿಸಲಾಗುತ್ತದೆ. ಆದರೆ ಸಂಸತ್ತಿನಲ್ಲಿ ಮತ್ತು ಶಾಸನ ಸಭೆಗಳಲ್ಲಿ ಜನರ ಹಿತಾಸಕ್ತಿಯ ಪ್ರಶ್ನೆಗಳು ಚರ್ಚೆಗೆ ಬಂದಾಗ ನಡೆಯುವ ಚರ್ಚೆಗಳು ಒಂದೆರಡು ಗಂಟೆಗಳನ್ನೂ ದಾಟುವುದಿಲ್ಲ. ಅಂಥ ಚರ್ಚೆಗಳಲ್ಲಿ ಶೇ.20ಕ್ಕಿಂತ ಜಾಸ್ತಿ ಜನಪ್ರತಿನಿಧಿಗಳು ಹಾಜರೂ ಇರುವುದಿಲ್ಲ ಎಂದು ದೆಹಲಿ ಮೂಲದ ಸಂಸ್ಥೆಯೊಂದು ತನ್ನ ಅಧ್ಯಯನದಲ್ಲಿ ಪ್ರಕಟಪಡಿಸಿದೆ. ಇದು ಒಂದು ಕಡೆಯಾದರೆ ಈ ದೇಶದ ಎಲ್ಲಾ ಜನತೆಯ ಭವಿಷ್ಯವನ್ನು ತೀರ್ಮಾನ ಮಾಡುವ ವಿಶ್ವ ವಾಣಿಜ್ಯ ಸಂಸ್ಥೆಗೆ ಸಹಿ ಮಾಡುವಾಗ ಅದರ ಕರಡು ಜನರಿಗಿರಲಿ ಸಂಸದರಿಗೇ ನೀಡಿರಲಿಲ್ಲ ಎಂಬುದು ನಮ್ಮ ದೇಶದಲ್ಲಿ ಪ್ರಜಾತಂತ್ರ ಎಷ್ಟು ನೆಪ ಮಾತ್ರಕ್ಕಿದೆ ಎಂಬುದನ್ನೂ ಸ್ಪಷ್ಟವಾಗಿ ಸೂಚಿಸುತ್ತದೆ.

ಒಂದು ದೇಶದಲ್ಲಿ ಐದು ವರ್ಷಕ್ಕೊಮ್ಮೆ ಚುನಾವಣೆ ನಡೆದ ಮಾತ್ರಕ್ಕೆ ಅದನ್ನು ಜೀವಂತ ಪ್ರಜಾತಂತ್ರವೆಂದು ಹೇಳಲಾಗುವುದಿಲ್ಲ. ಚುನಾವಣೆ ಪ್ರಜಾತಂತ್ರದ ಒಂದು ಪ್ರಮುಖ ಗುಣಲಕ್ಷಣವೇ ಹೊರತು ಅದೇ ಪ್ರಜಾತಂತ್ರವಲ್ಲ. ಚುನಾವಣೆ ಅದರ ರೂಪ.

**ಚಾರ್ವಾಕ**
**ಶಿವಸುಂದರ್**

ಸಾರವಲ್ಲ. ಪ್ರಜಾತಂತ್ರದ ರೂಪ ಮಾತ್ರವಾಗಿರುವ ಚುನಾವಣೆಯನ್ನೇ ಬಳಸಿಕೊಂಡು ಸಾರದಲ್ಲಿ ಅತ್ಯಂತ ನಿರಂಕುಶವಾದಿ ಫ್ಯಾಸಿಸ್ಟ್ ಹಿಟ್ಲರ್ ಅಧಿಕಾರಕ್ಕೆ ಬಂದಿದ್ದಲ್ಲವೇ? ಹೀಗಾಗಿ ಕಾಲಕಾಲಕ್ಕೆ ಚುನಾವಣೆ ನಡೆಯುವುದನ್ನೇ ಪ್ರಜಾತಂತ್ರದ ಹೆಗ್ಗಳಿಕೆ ಎನ್ನುವುದು ಉದಾರವಾದಿ ಬುದ್ಧಿಜೀವಿಗಳ ಅತಿ ದೊಡ್ಡ ಆತ್ಮ ವಂಚನೆಯೂ ಆಗಿದೆ.

ಒಂದು ಪ್ರಜಾತಂತ್ರ ಸಾರದಲ್ಲಿ ಗಟ್ಟಿಯಾಗಿದ್ದರೆ ರೂಪದಲ್ಲೂ ಅದರ ಅಭಿವ್ಯಕ್ತಿ ಅಷ್ಟೇ ಅರ್ಥಪೂರ್ಣವಾಗಿರುತ್ತದೆ. ಅದು ಚುನಾವಣಾ ಪ್ರಕ್ರಿಯೆಯಲ್ಲೂ ಅಭಿವ್ಯಕ್ತಗೊಳ್ಳಬೇಕಿರುತ್ತದೆ, ಅಲ್ಲವೇ? ಉದಾಹರಣೆಗೆ ಒಂದು ಸಜೀವ ಪ್ರಜಾತಂತ್ರದಲ್ಲಿ ಚುನಾವಣೆ ಮಾತ್ರವೇ ಜನತೆಯ ಅಧಿಕಾರ ಚಲಾವಣೆಯ ಏಕಮಾತ್ರ ಅವಕಾಶವಾಗಿರುವುದಿಲ್ಲ. ಹಲವಾರು ಪಾಶ್ಚಿಮಾತ್ಯ ದೇಶಗಳಲ್ಲಿ ಐದು ವರ್ಷಕ್ಕೊಮ್ಮೆ ನಡೆಯುವ ಚುನಾವಣೆಗಳಲ್ಲಿ ಮಾತ್ರವಲ್ಲದೆ ಆ ದೇಶ ರಾಷ್ಟ್ರೀಯ ಹಿತಾಸಕ್ತಿಯುಳ್ಳ ಯಾವುದೇ ನಿರ್ಣಯ ತೆಗೆದುಕೊಳ್ಳಬೇಕೆಂದರೂ ಜನತೆಯ ಅಭಿಪ್ರಾಯವನ್ನು ಕೇಳುವ ರೆಫರೆಂಡಮ್ ನೀತಿಯನ್ನು ಅನುಸರಿಸುತ್ತಾರೆ. ಉದಾಹರಣೆಗೆ ಐರೋಪ್ಯ ಒಕ್ಕೂಟಕ್ಕೆ ಸೇರಬೇಕೆ ಬೇಡವೇ? ವಿಶ್ವ ವಾಣಿಜ್ಯ ಸಂಸ್ಥೆಗೆ ಸಹಿ ಮಾಡಬೇಕೆ ಬೇಡವೇ? ತಮ್ಮ ದೇಶದಲ್ಲಿ ನಿರಂಕುಶ ಭಯೋತ್ಪಾದನೆ ವಿರೋಧಿ ಕಾಯಿದೆಯನ್ನು ಜಾರಿ ಮಾಡಬೇಕೆ ಬೇಡವೇ? ಇವೇ ಇನ್ನಿತ್ಯಾದಿ ನೀತಿಗಳನ್ನು ಜಾರಿ ಮಾಡುವಾಗ ಕಡ್ಡಾಯವಾಗಿ ಕೆಲವು ದೇಶಗಳಲ್ಲಿ ಜನತೆಯ ಅಭಿಪ್ರಾಯ ತೆಗೆದುಕೊಂಡೇ ಮುಂದುವರೆಯುತ್ತಾರೆ. ಜಾಗತೀಕರಣದ ಭಾಗವಾಗಿ ಈ ಪ್ರಕ್ರಿಯೆ ಅಲ್ಲೂ ನಿಧಾನಗತಿಯಲ್ಲಿ ಇಲ್ಲವಾಗುತ್ತಿದೆ ಎಂಬುದು ನಿಜವಾದರೂ ಸಾರ ಮತ್ತು ರೂಪದಲ್ಲಿ ಅಲ್ಲಿಯ ಪ್ರಜಾತಂತ್ರ ಕೇವಲ ಚುನಾವಣೆಗೆ ಮಾತ್ರ ಸೀಮಿತವಾಗಿಲ್ಲ.

ಹಾಗೆಯೇ ಐದು ವರ್ಷಕ್ಕೊಮ್ಮೆ ನಡೆಯುವ ಚುನಾವಣೆಯಲ್ಲೂ ಪ್ರಜೆಗೆ ಆಯ್ಕೆಯ ಸಂಪೂರ್ಣ ಹಕ್ಕಿರಬೇಕಲ್ಲವೇ? ಒಂದು ಚುನಾವಣೆಯಲ್ಲಿ ಹತ್ತು ಹಲವು ಅಭ್ಯರ್ಥಿಗಳಲ್ಲಿ ತಮಗೆ ಸೂಕ್ತರಾದವರನ್ನು ಆಯ್ಕೆ ಮಾಡುವುದೇ ಮತದಾರನಿಗಿರಬೇಕಾದ ಸ್ವಾತಂತ್ರ್ಯವೇ? ಸಮ್ಮತಿ ಪೂರ್ವಕ ಆಯ್ಕೆ ಎಂದರೆ ಕೇವಲ ನೀಡಲಾದ ಆಯ್ಕೆಗಳಲ್ಲಿ ಒಂದನ್ನು ಆರಿಸುವ ಆಯ್ಕೆಯೊಂದಿಗೆ ಅವರಲ್ಲಿ ಯಾರೂ ಸೂಕ್ತರಲ್ಲ ಎಂದು ಕಂಡುಬಂದಲ್ಲಿ ಆ ಎಲ್ಲರನ್ನೂ ತಿರಸ್ಕರಿಸುವ ಆಯ್ಕೆಯೂ ಇರಬೇಕಲ್ಲವೇ? ಇಲ್ಲದಿದ್ದರೆ ಅದೂ ಸಹ ಪ್ರಜಾತಂತ್ರವೆಂದರೆ ಚುನಾವಣೆ ಎಂಬಂತೆ ಚುನಾವಣೆ ಎಂದರೆ ಕಡಿಮೆ ದುಷ್ಟರನ್ನು ಆಯ್ಕೆ ಮಾಡುವ ಸೀಮಿತ ಸ್ವಾತಂತ್ರ್ಯವಾಗುವುದಿಲ್ಲವೇ? ಪ್ರಜೆಗಳಿಗೆ ಈ ಸೀಮಿತ ಸ್ವಾತಂತ್ರ್ಯದಾಚೆ ಅಂದರೆ ಕಡಿಮೆ ದುಷ್ಟರನ್ನು ಮಾತ್ರ ಆಯ್ಕೆ ಮಾಡಬೇಕಾದ ದುಸ್ಥಿತಿಯಿಂದ ಬಚಾವು ಮಾಡಬೇಕೆಂದರೆ ನೀಡಲಾಗಿರುವ ಆಯ್ಕೆಗಳೆಲ್ಲವನ್ನೂ ತಿರಸ್ಕರಿಸುವ ಹಕ್ಕಿರಬೇಕಲ್ಲವೇ? ಇಲ್ಲದಿದ್ದರೆ ಅದು ನಿಜವಾದ ಪ್ರಜಾತಂತ್ರ ಹೇಗಾದೀತು?

ಆದರೆ ಈ ಬಗೆಯ ಆಯ್ಕೆಯನ್ನು ಜನರಿಗೆ ಒದಗಿಸಿದರೆ ಜನತೆ ತಮ್ಮನ್ನ ಸಾರಾಸಗಟು ತಿರಸ್ಕರಿಸಬಹುದೆನ್ನುವ ಭೀತಿ ಎಲ್ಲಾ ರಾಜಕೀಯ ಪಕ್ಷಗಳಿಗೂ ಇದ್ದೇ ಇರುತ್ತದೆ. ಹೀಗಾಗಿ ಅಂತಹ ಹಕ್ಕಿನ ಬಗ್ಗೆ ಮತ್ತು ಅವಕಾಶದ ಬಗ್ಗೆ ಅವೆಂದೂ ಜನರಿಗೆ ತಿಳಿಯಹೇಳಲೂ ಹೋಗುವುದೇ ಇಲ್ಲ.

ಭಾರತದಲ್ಲೂ ನಮ್ಮ ಸಂವಿಧಾನ ಮತ್ತು ಕಾನೂನು ಭಾರತೀಯ ಮತದಾರನಿಗೆ ಹುರಿಯಾಳುಗಳಾಗಿ ಕಣದಲ್ಲಿ ನಿಂತಿರುವ ಎಲ್ಲಾ ಅಭ್ಯರ್ಥಿಗಳ ಬಗ್ಗೆ ತನಗಿರುವ ತಿರಸ್ಕಾರವನ್ನು ಅಧಿಕೃತವಾಗಿ ನೊಂದಾಯಿಸುವ ಹಕ್ಕನ್ನು ನೀಡಿದೆ. ಆದರೆ ಇದರ ಬಗ್ಗೆ ಎಲ್ಲಾ ಪಕ್ಷಗಳು ಮತ್ತು ಚುನಾವಣಾ ಆಯೋಗ ಜಾಣ ಕುರುಡನ್ನು ತೋರುತ್ತಾ ಬಂದಿವೆ.

ಚುನಾವಣಾ ಪ್ರಕ್ರಿಯೆಗಳ ಬಗ್ಗೆ 1961ರಲ್ಲಿ ರೂಪಿಸಲಾಗಿರುವ ಚುನಾವಣಾ ನಡಾವಳಿ ಸಂಹಿತೆಯ (THE CONDUCT OF ELECTIONS RULES, 1961) ಸೆಕ್ಷನ್ 49-Oನಲ್ಲಿ ಈ ಬಗ್ಗೆ ಮತದಾರನಿಗೆ ಹಕ್ಕನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ. ಅದರ ಇಂಗ್ಲಿಷ್ ಮೂಲ ಪಠ್ಯ ಹೀಗೆ ಹೇಳುತ್ತದೆ:

**49-O. Elector deciding not to vote.-If an elector, after his electoral roll number has been duly entered in the register of voters in Form-17A and has put his signature or thumb impression thereon as required under sub-rule (1) of rule 49L, decided not to record his vote, a remark to**

► 18ನೇ ಪುಟಕ್ಕೆ

## No Comments




"ರಾಜ್ಯದ ಸಂಸದರು ರಾಜಕೀಯ ನಪುಂಸಕರು."

-ಎಚ್.ಡಿ.ಕುಮಾರಸ್ವಾಮಿ

"ಸಮಾಜದಲ್ಲಿ ಮಾನವ ಹಕ್ಕುಗಳ ರಕ್ಷಣೆಯನ್ನು ಮಾಡಬೇಕಾದ ನಮ್ಮ ಸ್ಥಿತಿಯೇ ಭಿಕ್ಷುಕರಂತಾಗಿದೆ."

-ನ್ಯಾಯಮೂರ್ತಿ ಎಸ್.ಆರ್. ನಾಯಕ್, ಅಧ್ಯಕ್ಷರು, ರಾಜ್ಯ ಮಾನವ ಹಕ್ಕುಗಳ ಆಯೋಗ



"ನಿಗದಿತ ವೇಳಾಪಟ್ಟಿಯಂತೆ ನೇಪಾಳದ ಸಾಂವಿಧಾನಿಕ ಸಂಸತ್ತಿಗೆ ಚುನಾವಣೆ ನಡೆಯುವ ಭರವಸೆ ನನಗಿಲ್ಲ."

-ಪ್ರಚಂಡ, ನೇಪಾಳದ ಮಾವೋವಾದಿ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ

"ಅಡ್ವಾನಿಯವರ ಆತ್ಮಕಥೆಗೆ 'My country, My life' ಎಂಬುದರ ಜೊತೆಗೆ 'My lies' ಎಂದೂ ಹೆಸರಿಸಬೇಕಿತ್ತು."

-ಕಾಂಗ್ರೆಸ್ ಪಕ್ಷದ ಹೇಳಿಕೆ

"ಕಳೆದ 15 ವರ್ಷಗಳಲ್ಲಿ ಈ ದೇಶದಲ್ಲಿ ದಿನಕ್ಕೊಂದರಂತೆ 4750 ಬ್ಯಾಂಕ್ ಶಾಖೆಗಳು ಮುಚ್ಚಿಕೊಂಡಿದ್ದರೆ ಅಷ್ಟೇ ಪ್ರಮಾಣದ ಬ್ಯಾಂಕ್ ಶಾಖೆಗಳು ನಗರ ಪ್ರದೇಶದಲ್ಲಿ ಹೆಚ್ಚಿವೆ."

-ಪಿ.ಸಾಯಿನಾಥ್, ದಿ ಹಿಂದೂ ಪತ್ರಿಕೆಯ ಗ್ರಾಮೀಣ ಸಂಪಾದಕ

"ನಮ್ಮ ಪಾಲಿಗೆ ದೇವರು ಒಂದೋ ರಜೆಯ ಮೇಲಿರಬೇಕು ಅಥವಾ ಓಡಿಹೋಗಿರಬೇಕು."

-ಶಾಂತಿಪುರದಲ್ಲಿ ಭಜರಂಗದಳದ ದಾಳಿಗೆ ತುತ್ತಾದ ಕುನ್ನಿಮಾಯ್ಯು


"ಗುಜರಾತ್ ಹತ್ಯಾಕಾಂಡ ಘಟಿಸಿದ ನಂತರ ಎನ್‌ಡಿಎ ಇಂದ ಹೊರಬರಲು ನನ್ನ ಮಗ ಒಮರ್ ಅಬ್ದುಲ್ಲಾ ಒತ್ತಾಯ ಮಾಡಿದ. ನಾನೇ ಬೇಡವೆಂದು ಹೇಳಿ ತಪ್ಪು ಮಾಡಿದೆ."

-ಫರೂಕ್ ಅಬ್ದುಲ್ಲಾ, ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಅಧ್ಯಕ್ಷ

"ಎಸ್‌ಇಜೆಡ್‌ಗಳು ಮತ್ತು ದೊಡ್ಡ ದೊಡ್ಡ ಡ್ಯಾಂಗಳಂಥ ಅಭಿವೃದ್ಧಿ ಯೋಜನೆಗಳೇ ಹೆಚ್ಚು ಹೆಚ್ಚು ಮಹಿಳೆಯರನ್ನು ವೇಶ್ಯಾವಾಟಿಕೆಗೆ ದೂಡುತ್ತಿದೆ."

-ಲೈಂಗಿಕ ಕಾರ್ಯಕರ್ತೆಯರ ಸಮಾವೇಶದಲ್ಲಿ ಒಂದು ದನಿ

### ನಂಬಿದ್ರೆನಂಬಿ ಬಿಟ್ರೆಬಿಡಿ




"ವೇಶ್ಯಾವೃತ್ತಿಯನ್ನು ನಿರ್ಮೂಲನೆ ಮಾಡುವುದರತ್ತ ಗಮನಹರಿಸದೆ ಅದನ್ನು ಗೌರವಿಸುವುದರತ್ತ ಗಮನಹರಿಸುವುದು ಒಳ್ಳೆಯದು."

-ವೆಂಕಟಸ್ವಾಮಿ

"ರಾಹುಲ್ ಗಾಂಧಿಯವರ ರಾಜ್ಯ ಪ್ರವಾಸ ಬಜೆಪಿ-ಜೆಡಿಎಸ್‌ನವರಿಗೆ ಹತಾಶೆ ಮೂಡಿಸಿದೆ."

-ಉಗ್ರಪ್ಪ, ಕಾಂಗ್ರೆಸ್ ಮುಖಂಡ



"ಟಿಬೆಟ್‌ನಲ್ಲಿ ಇತ್ತೀಚೆಗೆ ನಡೆದ ಹಿಂಸಾಚಾರವನ್ನು ಚೀನಾದ ಮಾಧ್ಯಮಗಳು ವಿರೂಪಗೊಳಿಸುತ್ತಿವೆ."

-ದಲೈ ಲಾಮಾ

"ಜನರ ಮಧ್ಯೆ ಇದ್ದು ರಾಗಿ ಮುದ್ದೆ ತಿನ್ನುತ್ತಿರುವ ದೇವೇಗೌಡ ಒರಿಜಿನಲ್. ಗಿರಿಜನರ ಹಾಡಿಯಲ್ಲಿ ರಾಗಿರೊಟ್ಟಿ, ಜೇನುತುಪ್ಪ ತಿನ್ನುವ ರಾಹುಲ್ ಡುಪ್ಲಿಕೇಟ್."

-ಮೆರಾಜುದ್ದೀನ್ ಪಟೇಲ್

### ಬಡವರಿಗೆ ಪಡಿತರ ಜಾಸ್ತಿ ಮಾಡಲು ಮಾತ್ರ ಇದು ಲಭ್ಯವಿಲ್ಲ!

"ಆರನೇ ಪೇ ಕಮಿಷನ್ ಪ್ರಸ್ತಾವಗಳಿಂದ ಸರ್ಕಾರಕ್ಕೆ ಹೆಚ್ಚು ಹೊರೆಯೇನೂ ಆಗುವುದಿಲ್ಲ. ಅಷ್ಟು ಹಣವನ್ನು ತೆರಿಗೆ ವಸೂಲಾತಿಯಿಂದ ಪಡೆದುಕೊಳ್ಳಬಹುದು."

-ಜಸ್ಟೀಸ್ ಕೃಷ್ಣ ಪೇ ಕಮಿಷನ್ ಅಧ್ಯಕ್ಷ

### ದೇಶದ ರಕ್ಷಣೆಯೆಂದರೆ ದೇಶದ ಜನತೆಯ ರಕ್ಷಣೆಯಲ್ಲವೇ?

"ಭಾರತದ ರಕ್ಷಣಾ ವೆಚ್ಚ ಕಳೆದ ಹತ್ತು ವರ್ಷಗಳಲ್ಲಿ ಮೂರು ಪಟ್ಟು ಹೆಚ್ಚಿ 1,40,000 ಕೋಟಿ ರೂ.ಗಳಷ್ಟಾಗಿದೆ. ಇದು ರೈತರ ಸಾಲ ಮನ್ನಾ ಮಾಡಲು ಈ ವರ್ಷ ನಿಗದಿಯಾಗಿರುವ ಹಣದ ಎರಡು ಪಟ್ಟು. ಕೇಂದ್ರ ಸರ್ಕಾರ ಶಿಕ್ಷಣದ ಮೇಲೆ ವೆಚ್ಚ ಮಾಡುತ್ತಿರುವ ಹಣದ 3.6 ಪಟ್ಟು. ಸಾರ್ವಜನಿಕ ಆರೋಗ್ಯದ ಮೇಲೆ ವೆಚ್ಚ ಮಾಡಲಾಗುತ್ತಿರುವ ಹಣದ 6.5ರಷ್ಟು ಹೆಚ್ಚು."


-ಪ್ರಫುಲ್ಲ ಬಿದ್ವಾಯಿ, ಅಂಕಣಕಾರ

### ಅಂತೂಇಂತೂ ಕುಂತಿ ಮಕ್ಕಳಿಗೆ ರಾಜ್ಯಭಾರ ಇಲ್ಲ!!

"ಶೀಘ್ರದಲ್ಲಿಯೇ ತೃತೀಯ ರಂಗ ಅಸ್ತಿತ್ವಕ್ಕೆ ಬರಲಾರದು."

-ಬರ್ಧನ್, ಸಿಪಿಐ ಪಕ್ಷದ ಪ್ರಧಾನ ಕಾರ್ಯದರ್ಶಿ

### Our Country and Advani's Lies!



"ಕಂದಹಾರ್‌ಗೆ ಉಗ್ರಗಾಮಿಗಳನ್ನು ಕರೆದುಕೊಂಡು ಜಸ್ವಂತ್ ಸಿಂಗ್ ಹೋಗಬೇಕೆಂಬ ನಿರ್ಣಯ ತನಗೆ ಗೊತ್ತಿರಲಿಲ್ಲವೆಂದು ಅದ್ವಾನಿಯವರು ತಮ್ಮ ಆತ್ಮಕಥೆಯಲ್ಲಿ ಬರೆದಿರುವುದು ನಿಜವಲ್ಲ. ಅದು ಕ್ಯಾಬಿನೆಟ್‌ನಲ್ಲಿ ಎಲ್ಲರೂ ಸೇರಿ ಸರ್ವಸಮ್ಮತಿಯಿಂದ ತೆಗೆದುಕೊಂಡ ನಿರ್ಣಯ."

-ಜಾರ್ಜ್ ಫರ್ನಾಂಡಿಸ್

### ಏಕೆಂದರೆ ಈಗ ಚೀನಾದ ಜನರು ಅಮೆರಿಕದ ಗ್ರಾಹಕರಲ್ಲವೇ?

"ಬೀಜಿಂಗ್ ಒಲಂಪಿಕ್ಸ್‌ನಲ್ಲಿ ಚೀನಾದ ಘನತೆಗೆ ಕುಂದುಂಟುಮಾಡುವ ಯಾವುದೂ ನಡೆಯಬಾರದು. ಚೀನಾದ ಸರ್ಕಾರಕ್ಕೆ ನಮ್ಮ ವಿರೋಧ ಇದ್ದರೂ ಚೀನಾ ಜನತೆ ನಮ್ಮ ಸ್ನೇಹಿತರು."

-ಕಾಂಡೊಲಿಸಾ ರೈಸ್

### ನಾವು ದಿನಾ ಆರು ಗಂಟೆ ಗ್ಲೋಬಲ್ ವಾರ್ಮಿಂಗ್ ವಿರೋಧಿಸುತ್ತೇವೆ!

"ಮಾರ್ಚ್ 29ರಂದು ಗ್ಲೋಬಲ್ ವಾರ್ಮಿಂಗ್ ಬಗ್ಗೆ ಎಚ್ಚರಿಸಲು ಪ್ರಪಂಚಾದ್ಯಂತ 132 ನಗರಗಳಲ್ಲಿ 9 ಗಂಟೆಯಿಂದ ಒಂದು ಗಂಟೆಯ ಕಾಲ ವಿದ್ಯುತ್ ಬಂದ್‌ಅನ್ನು ಆಚರಿಸಲಾಯಿತು"

-ಪತ್ರಿಕಾ ವರದಿ

# ನಮ್ಮ ಮುಂದಿರುವ ಆಯ್ಕೆಗಳು



## ಕಂಡಹಾಗೆ

■ ಗೌರಿ ಲಂಕೇಶ್

ಇನ್ನು ಹಲವು ವಾರಗಳಲ್ಲಿ ರಾಜ್ಯದಲ್ಲಿ ಚುನಾವಣೆಗಳು ನಡೆಯಲಿದ್ದು ಜನರ ಮುಂದೆ ಮೂರು ಪ್ರಮುಖ ಆಯ್ಕೆಗಳಿವೆ: ನಿಷ್ಕ್ರಿಯ ಕಾಂಗ್ರೆಸ್, ನಿಶ್ಶಕ್ತ ಜನತಾದಳ ಮತ್ತು ಅಪಾಯಕಾರಿ ಬಿಜೆಪಿ. ಇನ್ನುಳಿದಂತೆ ಚುನಾವಣಾ ಕಣದಲ್ಲಿ ಕೇವಲ **damage potential** ಹೊಂದಿರುವ ಬಿಎಸ್‌ಪಿ ಮತ್ತು ಎಸ್‌ಪಿ ತರಹದ ಪಕ್ಷಗಳು, ಸಂಖ್ಯಾಬಲವಿಲ್ಲದ ಎಡಪಕ್ಷಗಳು, ಲೆಕ್ಕಕ್ಕಿಲ್ಲದ ಸ್ವತಂತ್ರ ಅಭ್ಯರ್ಥಿಗಳು ಇರುತ್ತಾರಾದರೂ ಬಹಳಷ್ಟು ಕಡೆ ಪೈಪೋಟಿ ಎಂಬುದಿರುವುದು ಮೊದಲೇ ಹೆಸರಿಸಿದ ಮೂರು ಪಕ್ಷಗಳ ನಡುವೆ ಎಂಬುದು ಈಗ ಎಲ್ಲರಿಗೂ ಅರ್ಥವಾಗಿದೆ.



ಭಜರಂಗಿಗಳಿಂದ ದಲಿತರ ಮೇಲೆ ದೌರ್ಜನ್ಯ

ಇಂತಹ ಸಂದರ್ಭದಲ್ಲಿ ನಮ್ಮ, ನಿಮ್ಮ, ಈ ರಾಜ್ಯದ ಪ್ರಜ್ಞಾವಂತರ, ಜಾತ್ಯತೀತವಾದಿಗಳ ಮತ್ತು ಈ ಪತ್ರಿಕೆಯ ನಿಲುವು ಎಂತಹದ್ದಾಗಿರಬೇಕು?

ಕರ್ನಾಟಕ ಇವತ್ತು ರಾಜಕೀಯವಾಗಿ ಮಾತ್ರವಲ್ಲದೆ, ಸಾಂಸ್ಕೃತಿಕವಾಗಿಯೂ ಒಂದು ನಿರ್ಣಾಯಕ ಘಟ್ಟದಲ್ಲಿದೆ. ಈ ಘಟ್ಟದಲ್ಲಿ ನಾವು ಬಸವತತ್ವ, ಕುವೆಂಪುರವರ ಆಶಯ, ಕನಕದಾಸರಿಗಾದ ಅನ್ಯಾಯ, ಶಿಶುನಾಳ ಷರೀಫರ ಬಯಕೆ, ಇವೆಲ್ಲವುಗಳನ್ನು ಮರೆತರೆ ನಾವು ನಮ್ಮ ರಾಜ್ಯದ ಇತಿಹಾಸದಲ್ಲೇ ಯಾರೂ ಇಲ್ಲಿಯವರೆಗೂ ಬಗೆಯದೇ ಇರುವಂತಹ ದ್ರೋಹವನ್ನು ರಾಜ್ಯಕ್ಕೆ ಬಗೆಯುತ್ತೇವೆ. ಅಷ್ಟು ಮಾತ್ರವಲ್ಲ, ಈ ರಾಜ್ಯವನ್ನು ಮತ್ತೆ ಪುರೋಹಿತಶಾಹಿಗಳ ದಬ್ಬಾಳಿಕೆಗೆ ದೂಡುತ್ತೇವೆ. ಆ ಎಚ್ಚರ ಮತ್ತು ಜವಾಬ್ದಾರಿ ಇವತ್ತು ರಾಜ್ಯದ ಎಲ್ಲಾ ಮತದಾರರದ್ದಾಗಬೇಕಾಗಿದೆ.

ನಿಜ, ಸುಮಾರು ಮೂವತ್ತು ವರ್ಷಗಳ ಹಿಂದೆ ಕಾಂಗ್ರೆಸ್ ಪಕ್ಷದ ದುರಾಡಳಿತದ ವಿರುದ್ಧದ ಅಲೆಯಿತ್ತು. ಅದನ್ನು ಟೀಕಿಸುವ, ಅದರ ವಿರುದ್ಧ ಜನರನ್ನು ಎಚ್ಚರಿಸುವ ಜವಾಬ್ದಾರಿ ಎಲ್ಲಾ ಪ್ರಜ್ಞಾವಂತರದ್ದಾಗಿತ್ತು. ರಾಜ್ಯದಲ್ಲಿ ಕಾಂಗ್ರೆಸ್ ಎಂಬ ದೈತ್ಯ ಪಕ್ಷಕ್ಕೆ ಇಲ್ಲಿ ಒಂದು ಸೂಕ್ತ ಪರ್ಯಾಯವೂ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಆಗ ಕಾಂಗ್ರೆಸ್ ವಿರುದ್ಧ ಜನತಾ ಪಕ್ಷ ಸೃಷ್ಟಿಯಾಗಿತ್ತು. ಕಾಂಗ್ರೆಸ್‌ಗೆ ಸರಿಯಾದ ಪಾಠ, ಜನತಾ ಪಕ್ಷಕ್ಕೆ ಒಂದು ಹೊಸ ಅವಕಾಶವನ್ನು ಕಲ್ಪಿಸುವುದರಲ್ಲಿ ಅಂದು ಅಪ್ಪ ಹುಟ್ಟು ಹಾಕಿದ ಪತ್ರಿಕೆ ಪ್ರಮುಖ ಪಾತ್ರ ವಹಿಸಿತ್ತು.

ಆದರೆ ಈ ಮೂವತ್ತು ವರ್ಷಗಳಲ್ಲಿ ಹಲವಾರು ಬೆಳವಣಿಗೆಗಳಾಗಿವೆ. ಕಾಂಗ್ರೆಸ್‌ಗೆ ಪರ್ಯಾಯವಾಗಿ ಜನ್ಮ ತಳೆದ ಇತರೆ ಪಕ್ಷಗಳು ಅದರ ವಿರೋಧ ಪಕ್ಷವಾಗುವ ಬದಲು ಅದರ ಪ್ರತಿಬಿಂಬಗಳಾಗಿವೆ. ಕಾಂಗ್ರೆಸ್‌ನಲ್ಲಿರುವ ಭ್ರಷ್ಟಾಚಾರ, ಸ್ವಜನಪಕ್ಷಪಾತ, ವಂಶಾಡಳಿತ, ಮೃದು ಹಿಂದುತ್ವ ಇವತ್ತು ಅದರ ವಿರೋಧ ಪಕ್ಷಗಳಲ್ಲೂ ಹಾಸು ಹೊಕ್ಕಿದೆ. ಆದರೆ ಅದೆಲ್ಲಕ್ಕಿಂತ ಅಪಾಯಕಾರಿಯಾದ ಇನ್ನೊಂದು ವಿದ್ಯಮಾನ ಇವತ್ತು ಹೆಡೆ ಎತ್ತಿ ನಿಂತಿದೆ. ಕಾಂಗ್ರೆಸ್‌ಅನ್ನು ಬಗ್ಗುಬಡಿಯುವ ಉತ್ಸಾಹದಲ್ಲಿ ಕಾಂಗ್ರೆಸ್‌ಯೇತರ ಪಕ್ಷಗಳು ಅವಕಾಶವಾದಿ ರಾಜಕಾರಣವನ್ನು ಅನುಸರಿಸಿ ಇವತ್ತು ರಾಕ್ಷಸ ಪಕ್ಷವೊಂದನ್ನು ಬೆಳೆಸಿದ್ದಾರೆ. ಅದೇ ಭಾರತೀಯ ಜನತಾ ಪಕ್ಷ.



ಧರ್ಮ, ದೇಶ ಎಂದೆಲ್ಲಾ ಅಬ್ಬರಿಸುವ ಈ ಬಿಜೆಪಿ ಇತರೆ ಎಲ್ಲಾ ಪಕ್ಷಗಳಿಗಿಂತಲೂ ಜನವಿರೋಧಿ ಪಕ್ಷ, ದೇಶದ್ರೋಹಿ ಪಕ್ಷ, ಅಧರ್ಮದ ಪಕ್ಷ, ಭ್ರಷ್ಟ ಪಕ್ಷ. ಹೊರನೋಟಕ್ಕೆ ಅಲ್ಪಸಂಖ್ಯಾತರ ವಿರುದ್ಧ ದ್ವೇಷಕಾರುವ ಬಿಜೆಪಿ ತನ್ನ ಅಂತರಾಳದಲ್ಲಿ ಶೂದ್ರ, ದಲಿತ, ರೈತ, ಕಾರ್ಮಿಕ, ಮಹಿಳಾ ವಿರೋಧಿ ಪಕ್ಷವೂ ಹೌದು. ಇದೆಲ್ಲದರ ಅರ್ಥ ಬಿಜೆಪಿಯು ಕೇವಲ ಪುರೋಹಿತಶಾಹಿಗಳ ಪಕ್ಷ ಎಂಬುದು.

ಆರ್‌ಎಸ್‌ಎಸ್ ಎಂಬ ಚೆಡ್ಡಿ ಸಂಘಟನೆಯ ಅಂಗವಾಗಿರುವ ಬಿಜೆಪಿ ಈ ದೇಶದ ನಾಶಕ್ಕೆ ಪಣತೊಟ್ಟು ನಿಂತಿರುವ ಪಕ್ಷ. ಈ ಎಲ್ಲಾ ಚೆಡ್ಡಿ ಸಂಘಟನೆಗಳು ತಮ್ಮ ಸ್ವಾರ್ಥಕ್ಕಾಗಿ ಏನನ್ನು ಬೇಕಾದರೂ ಮಾಡಲು ಸಜ್ಜಾಗಿವೆ. ಹಾಗಾಗಿಯೇ ಒಂದೆಡೆ ಆರ್‌ಎಸ್‌ಎಸ್, ವಿಶ್ವಹಿಂದೂ ಪರಿಷತ್ ಮತ್ತು ಭಜರಂಗದಳದಂತಹ ಸಂಘಟನೆಗಳು ಗೋರಕ್ಷಣೆಯ ಹೆಸರಲ್ಲಿ ಅಲ್ಪಸಂಖ್ಯಾತರ ಮತ್ತು ದಲಿತರ ಕಗ್ಗೊಲೆಯಲ್ಲಿ ಪಾಲ್ಗೊಳ್ಳುತ್ತಿದ್ದರೆ ಇನ್ನೊಂದೆಡೆ ಅಟಲ್ ಬಿಹಾರಿ ವಾಜಪೇಯಿ ತರಹದ ಬಿಜೆಪಿ ನಾಯಕರು ದನದ ಮಾಂಸದ ರಫ್ತನ್ನು ಹೆಚ್ಚಿಸುವ ಯೋಜನೆಗೆ ಚಾಲ್ತಿ ನೀಡುತ್ತಾರೆ. ಹಾಗೆಯೇ ಒಂದೆಡೆ ಸುಷ್ಮಾ ಸ್ವರಾಜ್‌ಳಂತಹ ನಾಯಕಿ ಭಾರತೀಯ ನಾರಿ ಹೇಗಿರಬೇಕೆಂದು ಬೊಬ್ಬೆ ಹಾಕುತ್ತಲೇ ಇನ್ನೊಂದೆಡೆ ಅಪ್ಪಟ ಭಾರತೀಯ ನಾರಿ ಸೋನಿಯಾ ಗಾಂಧಿಯನ್ನು ವಾಚಾಳಿಯಂತೆ ಖಂಡಿಸುತ್ತಾಳೆ. ಪಕ್ಷವು ಹಿಂದುಳಿದವರ ಏಳ್ಗೆ ಬಗ್ಗೆ ಮಾತನಾಡುತ್ತಲೇ ಉಮಾಭಾರತಿಯಂತಹ ಹಿಂದುಳಿದ ವರ್ಗದ ಮಹಿಳೆಯನ್ನು ಪಕ್ಷದಿಂದಲೇ ಹೊರ ದೂಡುತ್ತದೆ. ಹಲವಾರು ವರ್ಷಗಳಿಂದ ಭ್ರಮೆಗೆ ಬಿದ್ದು ಚೆಡ್ಡಿ ಸಂಘಟನೆಗಳಿಗೆ ಕೆಲಸ ಮಾಡಿರುವ ಶೂದ್ರರನ್ನು ಮತ್ತು ದಲಿತರನ್ನು ಮೂಲೆಗುಂಪು ಮಾಡುತ್ತಾರೆ. ಮಹಾತ್ಮಾಗಾಂಧಿ ಬಗ್ಗೆ ಜಪಿಸುತ್ತಲೇ ಅವರ ಕೊಲೆಯಲ್ಲಿ ಪ್ರಮುಖ ಆರೋಪಿಯಾಗಿದ್ದ ಸಾವರ್ಕರ್ ಎಂಬ ಹೇಡಿಯ ಛಾಯಾಚಿತ್ರವನ್ನು ಸಂಸತ್ತಿನಲ್ಲಿ ಗಾಂಧಿಗೆ ಎದುರಾಬದುರಾ ಸ್ಥಾಪಿಸುತ್ತಾರೆ. ಸ್ವತಂತ್ರ ಸಂಗ್ರಾಮದಲ್ಲಿ ಎಂದೂ ಭಾಗವಹಿಸದಿದ್ದ ವಾಜಪೇಯಿಯನ್ನು ಸ್ವಾತಂತ್ರ ಹೋರಾಟಗಾರ ಎಂಬಂತೆ ಚಿತ್ರಿಸುತ್ತಾರೆ. 'ಹಿಂದೂ ಧರ್ಮ'ವನ್ನು ಖಂಡಿಸಿದ್ದ ಅಂಬೇಡ್ಕರರ ಫೋಟೋವನ್ನು ಯಾವ ಮುಜುಗರವೂ ಇಲ್ಲದೆ 'ವಿರಾಟ ಹಿಂದೂ ಸಮಾಜೋತ್ಸವ'ದಲ್ಲಿ ಬಳಸುತ್ತಾರೆ. ಇವರ ಯಾವ ಸಿದ್ಧಾಂತದೊಂದಿಗೂ ಸಮ್ಮತ ಇರದಿದ್ದ ಭಗತ್ ಸಿಂಗ್‌ನನ್ನು ತಮ್ಮ ಕಾರ್ಯಕ್ರಮಗಳಲ್ಲಿ ಉಪಯೋಗಿಸಿಕೊಳ್ಳುತ್ತಾರೆ. ತಮ್ಮ ಮೂಗಿನ ನೇರಕ್ಕೆ ಇತಿಹಾಸವನ್ನು ತಿರುಚುತ್ತಾರೆ, ಪಠ್ಯಪುಸ್ತಕಗಳನ್ನು ತಿದ್ದುತ್ತಾರೆ, ದಕ್ಷಿಣ ಭಾರತದವರನ್ನೇ ಮಂಗಗಳನ್ನಾಗಿಸುತ್ತಾರೆ. ಮನುವಾದವೇ ಈ ದೇಶದ ಸಂವಿಧಾನವಾಗಬೇಕೆನ್ನುತ್ತಾರೆ. ತಮ್ಮ ಪುರೋಹಿತಶಾಹಿ ಗುರಿಯನ್ನು ಈಡೇರಿಸಿಕೊಳ್ಳಲು ಯಾವ ಶೂದ್ರ, ದಲಿತ ಮತ್ತು ಮಹಿಳೆಯನ್ನು ಮನು ತುಚ್ಛವಾಗಿ ನೋಡಿದ್ದನೋ ಅವರನ್ನೇ ಬಳಸಿಕೊಳ್ಳುತ್ತಾರೆ.

ಇದೆಲ್ಲಕ್ಕಿಂತಲೂ ಅಪಾಯಕಾರಿಯಾದ ಆಯಾಮವೂ ಬಿಜೆಪಿಗಿದೆ. ಅದು ಬಿಜೆಪಿಯ ರಕ್ತದಾಹ. ಅದು ಎಂತಹ ತಣಿಸಲಾಗದ ದಾಹ ಎಂಬುದನ್ನು ಗುಜರಾತಿನಿಂದ ಹಿಡಿದು ನಮ್ಮ ಕರಾವಳಿ ಪ್ರದೇಶದವರೆಗೂ ನೋಡಿದ್ದೇವೆ. ಇಂತಹ ಪಕ್ಷ ರಾಜ್ಯದಲ್ಲಿ ಅಧಿಕಾರ ಹಿಡಿಯಲು ಹೊರಟದೆ.



ಬೇರೆ ಪಕ್ಷಗಳು ಅಷ್ಟೇನು ಸಾಚಾ ಅಲ್ಲದಿದ್ದರೂ ಇವತ್ತು ಈ ರಾಜ್ಯದ ಪ್ರಥಮ ಶತ್ರು ಖಂಡಿತವಾಗಿಯೂ ಬಿಜೆಪಿ ಎಂಬುದರ ಬಗ್ಗೆ ಯಾವುದೇ ಅನುಮಾನಗಳಿಲ್ಲ. ಆದ್ದರಿಂದ ಅದನ್ನು ಸೋಲಿಸಿ ಮೂಲೆಗುಂಪು ಮಾಡುವುದು ಎಲ್ಲಾ ಮತದಾರರ ಕರ್ತವ್ಯವಾಗಿದೆ.


ಆ ನಿಟ್ಟಿನಲ್ಲಿ ನಿಮ್ಮ ಈ ಪತ್ರಿಕೆ ಹೊಸ ಯೋಜನೆಯೊಂದನ್ನು ಹಾಕಿಕೊಂಡಿದೆ. ಕಳೆದ ಬಾರಿಯ ಚುನಾವಣಾ ಸಂದರ್ಭದಲ್ಲಿ 'ವಿರೋಧ ಪಕ್ಷವಾಗಿ ಜನತೆ' ಎಂಬ ಲೇಖನ ಮಾಲೆಯನ್ನು ಪ್ರಕಟಿಸಿದ್ದು ನಿಮಗೆ ನೆನಪಿರಬಹುದು. ಆದರೆ ಈ ಬಾರಿ 'ಜನರ ಪ್ರಣಾಳಿಕೆ'ಯನ್ನು ಲೇಖನ ಮಾಲೆಯ ರೂಪದಲ್ಲಿ ಪ್ರಕಟಿಸಲಿದ್ದೇವೆ.

ಈ ಲೇಖನಗಳು ಜನರ ಪ್ರಧಾನಶತ್ರುವಾದ ಬಿಜೆಪಿ ಯಾವ ಕಾರಣಗಳಿಗಾಗಿ ಅಧಿಕಾರಕ್ಕೆ ಬರಕೂಡದು; ಹಾಗಿದ್ದಲ್ಲಿ ಯಾರಿಗೆ ಜನ ಓಟು ಹಾಕಬೇಕು, ನಮ್ಮ ಈ ಓಟನ್ನು ಪಡೆಯುವ ಅಭ್ಯರ್ಥಿ ಎಂತಹ ನಿಲುವುಗಳನ್ನು ಹೊಂದಿರಬೇಕು; ಈ ಎಲ್ಲಾ ವಿಷಯಗಳನ್ನು ವಿಶ್ಲೇಷಿಸುತ್ತವೆ. ನಮ್ಮ ಸಂವಿಧಾನದಲ್ಲಿರುವ ಹಾಗೂ ಕರ್ನಾಟಕ ಸಮಾಜದಲ್ಲಿ ಅಂತರ್ಗತವಾಗಿರುವ ಜಾತ್ಯತೀತ ಮೌಲ್ಯಗಳನ್ನು ಉಳಿಸಿಕೊಳ್ಳಲು ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ರಕ್ಷಿಸಿಕೊಳ್ಳಲು ನಾವೀಗ ಶಕ್ತಿ ಮೀರಿ ಶ್ರಮಿಸಬೇಕಿದೆ. ಈ ಪತ್ರಿಕೆಯ ಪ್ರಮುಖ ಅಂಗವಾಗಿರುವ ಓದುಗರು ಕೂಡ ಈ ಮಾಲಿಕೆಗೆ ತಮ್ಮ ಅಭಿಪ್ರಾಯಗಳನ್ನು ಕಳುಹಿಸಬಹುದು. ಅಂದಹಾಗೆ ಇದೇ ವಿಷಯಗಳನ್ನು ಚರ್ಚಿಸಲು ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಕೂಡ ಎಲ್ಲಾ ಜನಪರ ಸಂಘಟನೆಗಳ, ವ್ಯಕ್ತಿಗಳ ವಿಸ್ತೃತ ಸಭೆ ಕರೆದಿದೆ. ಈ ಸಭೆ ಏಪ್ರಿಲ್ 4, ಶುಕ್ರವಾರದಂದು ಬೆಂಗಳೂರಿನ ವೈಎಂಸಿಎ ಹಾಲ್ (ರಿಸರ್ವ್ ಬ್ಯಾಂಕ್ ಪಕ್ಕ) ಬೆಳಗ್ಗೆ 10.30 ಕ್ಕೆ ನಡೆಯಲಿದೆ. ಸಭೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಅಶೋಕ್ (94482-56216) ಅಥವಾ ದೀಪು (94483-67627) ಅವರನ್ನು ಸಂಪರ್ಕಿಸಬಹುದು. ■

# ದಲಿತ ಹಂತಕನಿಗೆ ಟಿಕೆಟ್

# ಬೆಂಗಳೂರು ಬಿಜೆಪಿಗೆ ರೌಡಿಗಳ ಲಗ್ಗೆ

ಜನಾರ್ದನ ರೆಡ್ಡಿಯಂಥ ವೈಟ್‌ಕಾಲರ್ ಕ್ರಿಮಿನಲ್, ರೌಡಿ ಶ್ರೀರಾಮುಲು ಥರದದ ಹಾರ್ಡ್‌ಕೋರ್ ಕ್ರಿಮಿನಲ್‌ಗಳನ್ನು ವಿಧಾನಸೌಧಕ್ಕೆ ಕರೆತಂದ ಬಿಜೆಪಿಯ ಸುಪ್ತ ರಕ್ತದಾಹ ಈ ಬಾರಿಯ ಚುನಾವಣೆಯಲ್ಲಿ ಪೂರ್ತಿ ಬೆತ್ತಲಾಗುತ್ತಿದೆ. ಫ್ರೇಜರ್‌ಟೌನಿನ ರೌಡಿ ಷೀಟರ್ ಕೇಬಲ್ ಶ್ರೀಧರ ಏನಾದರೂ ಸರ್ವಜ್ಞನಗರದ ಅಧಿಕೃತ ಬಿಜೆಪಿ ಅಭ್ಯರ್ಥಿಯಾದನೆಂದರೆ ಮಹಾಪಾತಕಿ ಕಾಲಾಪತ್ಥರ್, ಆಂಜನಪ್ಪ ಗಾರ್ಡನ್ನಿನ ಹಂತಕರಾದ ಕುಟ್ಟಿ-ರಾಜಾ, ಡೆಡ್ಲಿ ಸೋಮನ ಬಂಟ ಕವಳ, ವಸಂತನಗರದ ವೇಣು, ಮ್ಯಾಥ್ಯೂ, ಆತನ ಅಣ್ಣನ ಮಕ್ಕಳಾದ ಅರುಣ್‌ಲಿಯೋ ಮತ್ತು ಅರುಣ್ ಪೀಟರ್ ಎಂಬಿಬ್ಬರು ಸರಣಿ ಹಂತಕರು; ಅಧಿಕೃತವಾಗೇ ಬಿಜೆಪಿ ಪಾದಾರ್ಪಣೆಗೈಯುತ್ತಾರೆ ಬಿಜೆಪಿ ಬಾವುಟ ಹಿಡಿದೇ ರಕ್ತ ಹರಿಸಲಿದ್ದಾರೆ.





ಜೆಡಿಎಸ್, ಕಾಂಗ್ರೆಸ್‌ಗಳೆಲ್ಲ ಮಾಜಿ ರೌಡಿಗಳಿಗೋ ನಿವೃತ್ತ ಪಾತಕಿಗಳಿಗೋ ಪಾರ್ಟಿ ಟಿಕೆಟ್ ಕೊಟ್ಟು ಎಲೆಕ್ಷನ್ನಿಗೆ ಇಳಿ ಬಿಟ್ಟರೆ ಸಾಕ್ಷಾತ್ ಶ್ರೀರಾಮನ ಭಕ್ತರ ಬಿಜೆಪಿ ಇನ್ನೂ ಒಂದು ಹೆಜ್ಜೆ ಮುಂದಕ್ಕಿಟ್ಟು ಹಾಲಿ ರೌಡಿಗಳನ್ನೇ ಎಮ್ಮೆಲ್ಲೆಗಳನ್ನಾಗಿಸಲು ಹೊರಟಿದೆ. ಅದೂ ಬಿಎಸ್‌ಪಿಯ ದಲಿತ ಮುಖಂಡ ಸತ್ಯವೇಲು ಕೊಲೆಯ ಮೊದಲ ಆರೋಪಿ ಕೇಬಲ್ ಶ್ರೀಧರನನ್ನು ಸರ್ವಜ್ಞ ನಗರಕ್ಕೆ ತನ್ನ ಅಧಿಕೃತ ಅಭ್ಯರ್ಥಿಯನ್ನಾಗಿ ಘೋಷಿಸುವ ಮೂಲಕ ಬಿಜೆಪಿಯ ಪಾತಕೀಕರಣವೂ ಅನಧಿಕೃತವಾಗಿ ಅನಾವರಣ ಗೊಳ್ಳುತ್ತಿದೆ.

ಇತ್ತೀಚೆಗೆ ಕಾಂಗ್ರೆಸ್ ಸೇರ್ಪಡೆಯಾದ ಜೇಡರಹಳ್ಳಿ ಕೃಷ್ಣಪ್ಪ ಯಾವುದೋ ಕಾಲಕ್ಕೆ ರೌಡಿಯಿದ್ದಿರಬಹುದು. ಆತನ ಪತ್ನಿಗೆ ಮಾಗಡಿಯಿಂದ ಈ ಹಿಂದೆಯೇ ಬಿಜೆಪಿ ಟಿಕೆಟ್ ಕೊಟ್ಟಿದ್ದೂ ಹೌದು. ಯಾವುದೋ ಕಾಲಕ್ಕೆ ಕಳ್ಳಭಟ್ಟಿ ರಾಣಿಯಾಗಿದ್ದ ಮಾರಿಮುತ್ತುವಿಗೆ ಜೆಡಿಎಸ್ ಟಿಕೆಟ್ ಕೊಡಿಸಿ ಗೆಲ್ಲಿಸಿದ್ದು ಕೂಡ ಸತ್ಯವೇ. ಬಾಂಬ್ ನಾಗನನ್ನೋ, ಬಾಂಬ್ ಕೃಷ್ಣಮೂರ್ತಿಯನ್ನೋ ಜೆಡಿಎಸ್ ಕಣಕ್ಕಿಳಿಸಿದಾಗ ಹೀನಾಮಾನ ಟೀಕಿಸಿದ ಬಿಜೆಪಿ ಸತ್ಪುರುಷರಿಗೆ ಕನಿಷ್ಠ ಟೀಕೆ ಮಾಡುವುದಕ್ಕಾದರೂ ತಾವು ನೆಟ್ಟಗಿರಬೇಕೆಂಬ ಪ್ರಜ್ಞೆ ಇರಬೇಕಿತ್ತಲ್ಲವೆ?

ಯಾವುದನ್ನು ತಾವು ವಿರೋಧಿಸಿಕೊಂಡೇ ಬಂದರೋ ಅದೇ ಪಾಪಕ್ಕೆ ತಾವೂ ಕೈಹಾಕಬಾರದೆಂಬ ವಿವೇಕ ಬಿಜೆಪಿಯಂಥ 'ಸಾಚಾ'ಗಳ ಪಾರ್ಟಿಗೆ ಏಕೆ ತೋಚುತ್ತಿಲ್ಲ ಗೊತ್ತೆ?

## ಅದು ದುಡ್ಡು ಮತ್ತು ಅಧಿಕಾರದ ಹಪಾಹಪಿ!

ಜನಾರ್ದನ ರೆಡ್ಡಿಯಂಥ ವೈಟ್ ಕಾಲರ್ ಕ್ರಿಮಿನಲ್, ರೌಡಿ ಶ್ರೀ ರಾಮುಲು ಥರದ ಹಾರ್ಡ್‌ಕೋರ್ ಕ್ರಿಮಿನಲ್‌ಗಳನ್ನು ವಿಧಾನಸೌಧಕ್ಕೆ ಕರೆತಂದ ಬಿಜೆಪಿಯ ಸುಪ್ತ ರಕ್ತದಾಹ ಈ ಬಾರಿಯ ಚುನಾವಣೆಯಲ್ಲಿ ಪೂರ್ತಿ ಬೆತ್ತಲಾಗುತ್ತಿದೆ. ಫ್ರೇಜರ್ ಟೌನಿನ ರೌಡಿ ಷೀಟರ್ ಕೇಬಲ್ ಶ್ರೀಧರ ಏನಾದರೂ ಸರ್ವಜ್ಞನಗರದ ಅಧಿಕೃತ ಬಿಜೆಪಿ ಅಭ್ಯರ್ಥಿಯಾದನೆಂದರೆ ಮಹಾಪಾತಕಿ ಕಾಲಾಪತ್ಥರ್, ಆಂಜನಪ್ಪ ಗಾರ್ಡನ್ನಿನ ಹಂತಕರಾದ ಕುಟ್ಟಿ-ರಾಜಾ, ಡೆಡ್ಲಿ ಸೋಮನ ಬಂಟ ಕವಳ, ವಸಂತನಗರದ ಡಬ್ಬಲ್ ಮರ್ಡರ್ ಪಾತಕಿ ವೇಣು, ಟ್ಯಾನರಿ ರೋಡ್ ಗಿಡ್ಡಪ್ಪ ಲೇನಿನ ಹಂತಕ ಸೆಲ್ವಾ, ಬ್ಯಾಡರಹಳ್ಳಿಯ ಸುಪಾರಿ ಕಿಲ್ಲರ್ ಮ್ಯಾಥ್ಯೂ ಆತನ ಅಣ್ಣನ ಮಕ್ಕಳಾದ ಅರುಣ್‌ಲಿಯೋ ಮತ್ತು ಅರುಣ್ ಪೀಟರ್ ಎಂಬಿಬ್ಬರು ಸರಣಿ ಹಂತಕರು; ಅಧಿಕೃತವಾಗೇ ಬಿಜೆಪಿ ಪಾದಾರ್ಪಣೆಗೈಯುತ್ತಾರೆ ಬಿಜೆಪಿ ಬಾವುಟ ಹಿಡಿದೇ ರಕ್ತ ಹರಿಸಲಿದ್ದಾರೆ.

## ಮಾಜಿ ಎಮ್ಮೆಲ್ಲೇ ರಾಜಣ್ಣ

ಸರ್ವಜ್ಞನಗರ ಅಂದರೆ ಕಾಕ್ಸ್‌ಟೌನ್ ಈ ಹಿಂದೆ ಭಾರತಿನಗರ ವಿಧಾನಸಭಾ ಕ್ಷೇತ್ರಕ್ಕೊಳಪಟ್ಟ ತಮಿಳು ಏರಿಯಾ. ಮೊದಮೊದಲು ಕಾಂಗ್ರೆಸ್ ನಾಯಕ ಕೆ.ಜೆ. ಜಾರ್ಜ್ ಗೆದ್ದು ಬರುತ್ತಿದ್ದರು. 1994 ರ ಹೊತ್ತಿಗೆ ಜಾರ್ಜ್‌ರನ್ನು ಸೋಲಿಸಿ ಎಮ್ಮೆಲ್ಲೆಯಾಗಿದ್ದು ಜನತಾದಳದ ಎನ್. ರಾಜಣ್ಣ, ಆತನಕ ಭಾರತಿನಗರ ಕಾಣರಿಯದಷ್ಟು ಸಜ್ಜನರಾಗಿದ್ದ ಎನ್. ರಾಜಣ್ಣ ಪ್ರಾರಂಭದಲ್ಲಿ ಕಾಕ್ಸ್‌ಟೌನಿಗೆ ಪಾಲಿಕೆ ಸದಸ್ಯರಾಗಿದ್ದರು. ಕನ್ನಡಿಗರಾಗಿದ್ದೂ ಅಲ್ಲಿನ ತಮಿಳರ ವಿಶ್ವಾಸ ಗಳಿಸಿದ ರಾಜಣ್ಣ ಎಮ್ಮೆಲ್ಲೆಯಾದ ನಂತರದಿಂದ ಇವತ್ತಿನ ತನಕವೂ ಪ್ರತಿ ಮುಂಜಾನೆ ಎದ್ದು ಹಸುಗಳನ್ನು ತೊಳೆದು ಕೈಯಾರೆ ಹಾಲು ಕರೆಯುತ್ತಾರೆ. ಬೆಂಗಳೂರಿನ ಯಾಂತ್ರಿಕತೆ ಮತ್ತು ಮಾಂತ್ರಿಕತೆಯಲ್ಲಿ ರಾಜಣ್ಣ ಯಾವತ್ತೂ ಕಳೆದುಹೋಗಲಿಲ್ಲ, ಭ್ರಷ್ಟಾಚಾರ, ಜನಕ್ಕೆ ಕುಡಿಸಿ-ತಿನ್ನಿಸಿ ಓಟು ಕೀಳುವ ದುರಾಚಾರಕ್ಕೆ ಕೊನೆತನಕ ಹೊರತಾಗಿಯೇ ಇದ್ದ ರಾಜಣ್ಣ 1999 ರ ಚುನಾವಣೆಯಲ್ಲಿ ಐಎಎಸ್ ಖದೀಮ ಅಲೆಕ್ಸಾಂಡರ್ ಹರಿಸಿದ ಹಣದ ಹೊಳೆಯಲ್ಲಿ ಕೊಚ್ಚಿ ಹೋದರು. ಗೆದ್ದ ಅಲೆಕ್ಸಾಂಡರ್ ತನ್ನ ಮತದಾರರನ್ನೇ ಬಿಕಾರಿಗಳಂತೆ ಕಂಡ. ರೋಸತ್ತ ಜನ 2004 ರ ಚುನಾವಣೆಯಲ್ಲಿ ಬಿಜೆಪಿಯ ನಿರ್ಮಲ್ ಸುರಾನಾ ಎಂಬ ಒಂದಂಕಿ ಲಾಟರಿ ಕೋರನನ್ನು ಗೆಲ್ಲಿಸಿದ್ದೇ ಪಾತಕಿ ಕೇಬಲ್ ಶ್ರೀಧರನ ಅಟ್ಟಹಾಸಕ್ಕೂ ಕಂಟೋನ್ಮೆಂಟ್ ಸುತ್ತಮುತ್ತಲ ಏರಿಯಾಗಳ ದುರಂತಕ್ಕೂ ಕಾರಣವಾಯಿತು.


ಅಷ್ಟಕ್ಕೂ ಕೇಬಲ್ ಶ್ರೀಧರ ಮಾಜಿ ಶಾಸಕ ಎನ್. ರಾಜಣ್ಣನ ಖಾಸಾ ತಮ್ಮ ರಾಮಚಂದ್ರನ ಮಗ. ವರಸೆಯಲ್ಲಿ ರಾಜಣ್ಣನಿಗೆ ಮಗನಾಗಬೇಕು. ಸರ್ವಜ್ಞನಗರ ಅಂದರೆ ಕಾಕ್ಸ್‌ಟೌನ್‌ನ ರಾಮಕೃಷ್ಣಪ್ಪ ರೋಡಿನಲ್ಲಿ ಈತನ ಮನೆಯಿದೆ. ರಾಜಣ್ಣ ಎಮ್ಮೆಲ್ಲೆಯಾಗಿದ್ದೇ ತನ್ನ ಕೇಬಲ್ ಜಾಲವನ್ನು ಕಾಕ್ಸ್‌ಟೌನ್‌ನಿಂದ ಅಕ್ಕಪಕ್ಕದ ಏರಿಯಾಗಳಿಗೆ ವಿಸ್ತರಿಸಲಾರಂಭಿಸಿದ ಶ್ರೀಧರ ಅದಕ್ಕೆಂದು ಬಳಸಿಕೊಂಡಿದ್ದು ದೈತ್ಯ ರೌಡಿ ಕಾಲಾಪತ್ಥರ್‌ನನ್ನು. ಆತನಕ ಶ್ರೀರಾಂಪುರ, ಮಲ್ಲೇಶ್ವರ ಸುತ್ತಮುತ್ತ ರೌಡಿಸಂ ಮಾಡಿಕೊಂಡಿದ್ದ ಕಾಲಾಪತ್ಥರ್ ಕ್ರಮೇಣ ಟ್ಯಾನರಿ ರೋಡ್, ಫ್ರೇಜರ್ ಟೌನ್, ಕಂಟೋನ್ಮೆಂಟ್ ಏರಿಯಾಗಳಿಗೆ ವಲಸೆ ಹೋಗಿದ್ದಕ್ಕೆ ಕಾರಣ ಪುರುಷನೇ ಕೇಬಲ್ ಶ್ರೀಧರ.



ಕೇಬಲ್ ಶ್ರೀಧರ

## ಕುಟ್ಟೀರಾಜಾ ಹಂತಕ ಬ್ರದರ್ಸ್

ಕಾಲಾಪತ್ಥರ್‌ನನ್ನೇ ತನ್ನ ಕೇಬಲ್ ದಂಧೆಯ ಪಾರ್ಟನರ್ ಮಾಡಿಕೊಂಡು ಆತ ಮೊದಲು ಕೈಯಿಟ್ಟಿದ್ದು ಭಾರತಿ ನಗರದ ಕುಟ್ಟಿಯ ಕೇಬಲ್ ಜಾಲಕ್ಕೆ. ಶ್ರೀಧರ್ ಮತ್ತು ಕಾಲಾಪತ್ಥರ್ ಗ್ಯಾಂಗಿನ ಹಾವಳಿ ತಾಳಲಾರದೇ ಆತ್ಮಹತ್ಯೆ ಮಾಡಿಕೊಂಡ ಕುಟ್ಟಿಯ ಇಡೀ ಕೇಬಲ್ ನೆಟ್‌ವರ್ಕ್ ಶ್ರೀಧರನ ವಶವಾಯಿತು. ಕ್ರಮೇಣ ಅಕ್ಕಪಕ್ಕದ ಮರ್ಫಿಟೌನ್, ಕುಕ್ಸ್‌ಟೌನ್, ಮಾರುತಿ ಸೇವಾನಗರ, ಲಿಂಗರಾಜಪುರ, ಕಮ್ಮನಹಳ್ಳಿ, ಕಾಚರಕನಹಳ್ಳಿ, ಬಾಣಸವಾಡಿ, ಚನ್ನಚಂದ್ರ, ಹೊರಮಾವು ನಾಗವಾರದಿಂದ ಹೆಣ್ಣೂರು ರಿಂಗ್‌ರೋಡ್‌ನ ಉದ್ದಕ್ಕೂ ಶ್ರೀಧರನ ಕೇಬಲ್ ಸಾಮ್ರಾಜ್ಯ ವಿಸ್ತರಿಸಿತು. ಆಯಾ ಏರಿಯಾಗಳ ಸಣ್ಣಪುಟ್ಟ ಕೇಬಲ್ ಆಪರೇಟರ್‌ಗಳನ್ನು ಸದೆಬಡಿಯಲೆಂದೇ ಆಯಾ ಏರಿಯಾಗಳ ಪುಡಿ ರೌಡಿಗಳನ್ನು ಎತ್ತಿಕಟ್ಟಿದ. ಇಂಥ ಪುಡಿ ರೌಡಿಗಳನ್ನು ಸಂಭಾಳಿಸಲೆಂದೇ ಕಾಟನ್‌ಪೇಟೆ ಪೊಲೀಸ್ ಠಾಣೆಯ ಖತರ್‌ನಾಕ್ ರೌಡಿ ಷೀಟರುಗಳಾದ ಕುಟ್ಟೀ-ರಾಜಾ ಎಂಬ ಹಂತಕ ಸಹೋದರರನ್ನು ಟ್ಯಾನರಿ ರೋಡ್ ಏರಿಯಾಕ್ಕೆ ಕರೆತಂದ.




ಹತನಾದ ಎಮ್ಮೆ ಚಂದ್ರ

ಅಲ್ಲಿಗೆ ಅರ್ಧ ಬೆಂಗಳೂರಿನ ರೌಡಿಗಳೆಲ್ಲ ಬೆಂಗಳೂರು ಉತ್ತರಕ್ಕೆ ಶಿಫ್ಟಾದಂತಾಗಿತ್ತು. ಗಾರ್ಡನ್ ಮಣಿ ಹಂತಕ ಚಾಮರಾಜನೂ ಆಂಜನಪ್ಪ ಗಾರ್ಡನ್ ತೊರೆದು ಬಾಣಸವಾಡಿಗೆ ವಲಸೆ ಬಂದಿದ್ದ. ಗಿಡ್ಡಪ್ಪ ಲೇನಿನ ಸೆಲ್ವಾ, ಬ್ಯಾಡರಹಳ್ಳಿ ಮ್ಯಾಥ್ಯೂ ಟ್ಯಾನರಿರೋಡಿನ ನವೀನ, ವಸಂತನಗರದ ವೇಣು, ಮ್ಯಾಥ್ಯೂ ಅಣ್ಣನ ಮಕ್ಕಳಾದ ಲಿಯೋ ಮತ್ತು ಪೀಟರ್, ಡೆಡ್ಲಿ ಸೋಮನ ಬಂಟ ಕವಳ ಉರ್ಫ್ ವಿಜಯ್‌ಕುಮಾರ್, ಪ್ರವೀಣನ ತಮ್ಮ ರಜನಿ ಹೀಗೆ ಒಂದು ಡಜನ್ ಹಂತಕರ ಪಡೆಯನ್ನೇ ಕಟ್ಟಿದ ಶ್ರೀಧರ ಈ ಬಾರಿ ಫ್ರೇಜರ್ ಟೌನಿನ ಪೂರ್ವದ ಕಾಮರಾಜರೋಡ್, ಆರ್ಮುಗಂ ಮೊದಲಿಯಾರ್ ರೋಡ್, ಶಿವಾಜಿನಗರ ಇತ್ಯಾದಿಯಾಗಿ ವೈಟ್‌ಫೀಲ್ಡ್ ಮಹದೇವಪುರದ ತನಕ ಕೇಬಲ್ ಎಳೆದು ಸಣ್ಣಪುಟ್ಟ ಕೇಬಲ್ ಆಪರೇಟರುಗಳನ್ನೆಲ್ಲ ನುಂಗಿ ಹಾಕಿದ. ಶ್ರೀಧರನ ಕೇಬಲ್ ದಾಹಕ್ಕೆ ಒತ್ತಾಸೆಯಾಗಿ ಏಟ್ರಿಯಾ ಕೇಬಲ್ ಖದೀಮ ಚಿನ್ನಸ್ವಾಮಿರಾಜು ಮತ್ತು ಆತನ ಮಗ ಸುಂದರರಾಜು ಕುಮ್ಮಕ್ಕು ಕೊಟ್ಟು ಆತನ ಜೊತೆ ಪಾಲುದಾರಿಕೆಯ ಒಪ್ಪಂದ ಮಾಡಿಕೊಂಡರು.

## ಲ್ಯಾಂಡ್ ರಾಬರಿ ಶುರು

2004 ರ ಹೊತ್ತಿಗೆ ಶ್ರೀಧರ ಅರ್ಧ ಬೆಂಗಳೂರಿಗೇ ತನ್ನ ಕೇಬಲ್ ಸಾಮ್ರಾಜ್ಯವನ್ನು ವಿಸ್ತರಿಸಿದ್ದ. ಕರ್ನಾಟಕದ ನಂಬರ್ ಒನ್ ಕೇಬಲ್ ಆಪರೇಟರಾಗಿ ತಿಂಗಳೊಂದಕ್ಕೆ ಕಮ್ಮಿಯೆಂದರೂ 50 ಲಕ್ಷ ರೂಪಾಯಿಗಳ ಉತ್ಪತ್ತಿಯನ್ನು ತನ್ನ ಕೇಬಲ್ ದಂಧೆಯಿಂದಲೇ ಗಳಿಸಲಾರಂಭಿಸಿದ್ದ.

ಇದು ಆತನ ಕೇಬಲ್ ಇತಿಹಾಸವಾದರೆ ಕ್ರಮೇಣ ಲ್ಯಾಂಡ್ ರಾಬರಿಗಿಳಿದು ಈತ ಹರಿಸಿದ ರಕ್ತಕ್ಕೆ ಲೆಕ್ಕವೇ ಇಲ್ಲ. ಎಲ್ಲೂ ನೇರವಾಗಿ ಈತ ಹೊಡೆದಾಟಕ್ಕೆ ನಿಂತವನಲ್ಲ,



## ರೌಡಿ ಕದಿರೇಶನೂ ಕಳ್ಳಭಟ್ಟಿ ರಾಣಿಯರೂ!

ಬಿಜೆಪಿ ಬತ್ತಳಿಕೆಯಲ್ಲಿರುವ ಅಂಡರ್‌ವರ್ಲ್ಡ್ ಕ್ರಿಮಿಗಳ ಭೀಕರತೆಯನ್ನು ಇನ್ನಷ್ಟು ಹೆಚ್ಚಿಸಿರುವ ಮತ್ತೊಬ್ಬ ಪಾತಕಿಯೆಂದರೆ ಆತ ಆಂಜನಪ್ಪ ಗಾರ್ಡನ್ನಿನ ಕದಿರೇಶ!


ಮೊದಲು ಗಾರ್ಡನ್‌ದಾಸ್ ಎಂಬ ರೌಡಿಯನ್ನು ನಡುರಸ್ತೆಯಲ್ಲೇ ಕತ್ತರಿಸಿ ಹಾಕಿದ. ಆನಂತರ ಝೋಪಡಿ ರಾಜೇಂದ್ರನನ್ನು ಆತನ ಹೆಂಡತಿ ಮಕ್ಕಳ ಎದುರಿಗೇ ಚುಚ್ಚಿಕೊಂದ. ಅವತ್ತು ರಾಜೇಂದ್ರನ ಜೊತೆಗಿದ್ದ ರಮೇಶನೂ ಕದಿರೇಶನ ಪಡೆಯಿಂದ ಹೆಣವಾಗಿದ್ದ. ಇಂಥಾ ರಣಪಾತಕಿಯನ್ನು ಬಿಜೆಪಿಗೆ ಕರೆತಂದು ಮುಂದಿನ ಪಾಲಿಕೆ ಚುನಾವಣೆಗೆ ನಿಲ್ಲಿಸಿ ಕೌನ್ಸಿಲರ್ ಮಾಡುವ ದುರ್ಬುದ್ಧಿ ಚಿಕ್ಕಪೇಟೆಯ ಮಾಜಿ ಎಂಎಲ್‌ಎ ಪಿ.ಸಿ. ಮೋಹನ್ ತಲೆ ಹೊಕ್ಕಿದೆ.


ಏಕೆಂದರೆ ರೌಡಿ ಕದಿರೇಶ, ಆತನ ಅಕ್ಕ ಕಳ್ಳಭಟ್ಟಿ ರಾಣಿ ಮಾಲಾ, ತಮ್ಮಂದಿರಾದ ಕುಮರೇಶ, ಸುರೇಶ ಇತ್ಯಾದಿ ಹೀನಕ್ರಿಮಿಗಳೆಲ್ಲ ಸೇರಿಕೊಂಡು ಕಳೆದ ಇಪ್ಪತ್ತು ವರ್ಷಗಳಿಂದ ಆಳುತ್ತಿರುವ ಆಂಜನಪ್ಪ ಗಾರ್ಡನ್ ಕೊಂಪೆ ಸದ್ಯಕ್ಕೆ ಚಿಕ್ಕಪೇಟೆಯಿಂದ ಗಾಂಧಿನಗರಕ್ಕೆ ಸೇರ್ಪಡೆಗೊಂಡಿದೆ. ಕ್ಷೇತ್ರ ಪುನರ್ ವಿಂಗಡಣೆಯಿಂದಾದ ಈ ಪ್ರಮಾದದಿಂದಾಗಿ ಪಿ.ಸಿ. ಮೋಹನ್ ಕೂಡ ಪಕ್ಕದ ಗಾಂಧಿನಗರಕ್ಕೆ ವಲಸೆ ಬರಬೇಕಾಗಿದೆ. ಇದರಿಂದ ಗಾಂಧಿನಗರದ ಅನಭಿಷಕ್ತ ದೊರೆಯಂತಿದ್ದ ದಿನೇಶ್ ಗುಂಡೂರಾವ್‌ಗೆ ತಲೆಶೂಲೆ ಶುರುವಾಗಿರುವುದು ಎಷ್ಟು ಸತ್ಯವೋ ಪಿ.ಸಿ. ಮೋಹನ್ ಗಾಂಧಿನಗರಕ್ಕೆ ವಲಸೆ ಬರಲು ರೌಡಿ ಕದಿರೇಶನೇ ಕಾರಣ ಎಂಬುದೂ ಅಷ್ಟೇ ಸತ್ಯ. ಆಂಜನಪ್ಪ ಗಾರ್ಡನ್‌ನ ಮೂವತ್ತು ಸಾವಿರಕ್ಕೂ ಅಧಿಕ ತಮಿಳರ ಓಟು ಬಿಜೆಪಿಗೆ ಬರಬೇಕೆಂದರೆ ಅದಕ್ಕೆ ಕದಿರೇಶನೇ ಬೇಕು. ಕದಿರೇಶನ ವಿರುದ್ಧ ತೊಡೆತಟ್ಟಿ ಪಾಲಿಕೆ ಚುನಾವಣೆಗೆ ನಿಂತವನು ಝೋಪಡಿ ರಾಜೇಂದ್ರ. ಪಕ್ಷೇತರನಾಗಿ ನಿಂತೇ ಮುನ್ನೂರು ಮತಗಳಿಂದ ಸೋತ ರಾಜೇಂದ್ರ ಇನ್ನೆಲ್ಲಿ ಬೆಳೆದುಬಿಡುತ್ತಾನೋ ಎಂದು ಸ್ಕೆಚ್ ಹಾಕಿದ ಕದಿರೇಶ ನಡುರಸ್ತೆಯಲ್ಲೇ ಆತನನ್ನು ಕತ್ತರಿಸಿ ಹಾಕಿದ.


ಹಾಗೇ ರಾಜೇಂದ್ರನನ್ನು ಮುಗಿಸಿದ ಕದಿರೇಶನನ್ನು ಕಾಟನ್‌ಪೇಟೆ ಪೊಲೀಸರಿಂದ ಬಚಾವು ಮಾಡಿದ ಪಿ.ಸಿ. ಮೋಹನ್ ಆತನನ್ನು ಮುಂದಿಟ್ಟುಕೊಂಡೇ ಆಂಜನಪ್ಪ ಗಾರ್ಡನನ್ನು ತನ್ನ ಓಟ್‌ಬ್ಯಾಂಕ್ ಮಾಡಿಕೊಂಡ. ಸದ್ಯ ಬಿಜೆಪಿಗೆ ಕದಿರೇಶ ಅಧಿಕೃತ ಪದಾಧಿಕಾರಿಯಲ್ಲದಿರಬಹುದು, ಆದರೆ ಬಿಜೆಪಿಯ ಪಕ್ಕಾ ಕಾರ್ಯಕರ್ತ, ಪಿ.ಸಿ. ಮೋಹನನ ನಂಬಿಕಸ್ತ ಬಂಟ. ಮುಂಬರುವ ಪಾಲಿಕೆ ಚುನಾವಣೆಗೆ ಆತನೇ ಕಾಟನ್‌ಪೇಟೆಯ ಬಿಜೆಪಿ ಅಭ್ಯರ್ಥಿಯಾದ್ದರಿಂದ ಸದ್ಯದ ಚುನಾವಣೆಯಲ್ಲಿ ಪಿ.ಸಿ. ಮೋಹನ್ ಪರ ಕದಿರೇಶನ ಇಡೀ ರೌಡಿ ಪಡೆಯೇ ಲಾಂಗ್ ಕೈಗೆತ್ತಿಕೊಳ್ಳುತ್ತದೆ. ಈತನ ಅಕ್ಕ ಮಾಲಾ ಮಾರಿಮುತ್ತುವಿಗಿಂತಲೂ ಅನಾಹುತಕಾರಿಯಾದ್ದರಿಂದ ಕಳ್ಳಭಟ್ಟಿಗೆ ಕೊರತೆಯಿಲ್ಲ. ಇನ್ನು ಆಂಜನಪ್ಪ ಗಾರ್ಡನ್ನಿನ ಇತರೇ ರೌಡಿಗಳಾದ ಗುಪ್ಪ, ಮತ್ತೊಬ್ಬಳು ಸಾರಾಯಿ ರಾಣಿ ತಮಿಳ್‌ಕುಡಿ. ಗುಪ್ಪ ಬಂಟರಾದ ಕಿರಣ್-ಲಿಯೋ ಮುಂತಾದ ಹಂತಕರ ಹಿಂಡೇ ಕದಿರೇಶನ ಜೊತೆ ಬಿಜೆಪಿ ಸೇರದೇ ಇರುತ್ತಾ? ಬಿಜೆಪಿಯ ವಿರುದ್ಧ ನಿಂತರೆ ಉಳಿಗಾಲವುಂಟಾ?

ಮೊದಲು ಆಯಾ ಏರಿಯಾದ ರೌಡಿಗಳನ್ನು ಮುಟ್ಟಿಗೆ ಹಾಕಿಕೊಳ್ಳುತ್ತಾನೆ. ಕ್ರಮೇಣ ಕಣ್ಣಿಟ್ಟ ಜಮೀನಿನ ಮಾಲೀಕರ ವಿರುದ್ಧ ಛೂ ಬಿಡುತ್ತಾನೆ. ಈತನ ರೌಡಿ ಬಂಟರ ಹಾವಳಿ ತಾಳಲಾರದೇ ಕಾಕ್ಸ್‌ಟೌನಿನ ರಾಮಕೃಷ್ಣಪ್ಪ ರೋಡಿನ ಒಂದೆಕರೆ ಜಮೀನನ್ನು ಆಂಗ್ಲೋ ಇಂಡಿಯನ್ ಒಬ್ಬಾತ ರಾತ್ರೋರಾತ್ರಿ ಖಾಲಿ ಮಾಡಿ ನಾಪತ್ತೆಯಾದ. ಸದ್ಯಕ್ಕೆ ಅದು ಕಮ್ಮಿಯೆಂದರೂ ನೂರು ಕೋಟಿಯ ಸ್ವತ್ತು. ಅಲ್ಲೀಗ ಶ್ರೀಧರ ಐಷಾರಾಮಿ ಅಪಾರ್ಟ್‌ಮೆಂಟಿಗೆ ಪಾಯ ಹಾಕುತ್ತಿದ್ದಾನೆ. ಬಾಣಸವಾಡಿ, ಹೊರಮಾವು, ಹೆಣ್ಣೂರು, ಮುಲಹಂಕ ಸೇರಿದಂತೆ ಈ ಸುತ್ತಮುತ್ತ ಶ್ರೀಧರ್ ಒಬ್ಬನೇ ಹತ್ತು ಖಾಸಗಿ ಲೇಔಟ್‌ಗಳನ್ನು ಸ್ಥಾಪಿಸಿದ್ದಾನೆ. ನಾರಾಯಣಪುರದಲ್ಲಿ ತನ್ನ ತಂದೆ ಯಾವುದೋ ಕಾಲಕ್ಕೆ ಮಾರಿ ಹಾಕಿದ್ದ ಜಮೀನಿನ ಮೇಲೆ ಅನಾಮತ್ತಾಗಿ ಮುನ್ನೂರು ಮಂದಿ ರೌಡಿಗಳ ಸಮೇತ ದಾಳಿ ನಡೆಸಿದ್ದ. ಅಲ್ಲಿ ಮನೆ ಕಟ್ಟಿಕೊಂಡಿದ್ದ ನೂರಕ್ಕೂ ಹೆಚ್ಚು ಕುಟುಂಬಗಳನ್ನು ಹಾಡುಹಗಲೇ ಬೀದಿಗೆ ದಬ್ಬಿದ್ದ. 2004 ರ ಹೊತ್ತಿಗೆ ಬಾಣಸವಾಡಿ, ಹೆಣ್ಣೂರು, ಕೆ.ಜೆ. ಹಳ್ಳಿ, ಡಿ.ಜೆ. ಹಳ್ಳಿ, ಫ್ರೇಜರ್‌ಟೌನ್ ಸೇರಿದಂತೆ ಭಾರತಿನಗರದ ಸುತ್ತಮುತ್ತಲ ಪೊಲೀಸ್ ಠಾಣೆಗಳಲ್ಲಿ ಕೇಬಲ್ ಶ್ರೀಧರನ ವಿರುದ್ಧ ಡಜನ್ನಿಗೂ ಅಧಿಕ ಕ್ರಿಮಿನಲ್ ಕೇಸುಗಳಿದ್ದವು.


ಕವಳ


ಮೆಂಟಲ್ ಪ್ರಕಾಶ್


ಮ್ಯಾಥ್ಯೂ


ತಿರುಮಾರನ್

ಆಗ ಭಾರತೀನಗರಕ್ಕೆ ಎಸಿಪಿಯಾಗಿದ್ದ ಜನಾನುರಾಗಿ ಪೊಲೀಸ್ ಅಧಿಕಾರಿ ಬಿ.ಕೆ. ಗಣಪತಿ ಈತನ ವಿರುದ್ಧ ರೌಡಿ ಶೀಟ್ ತೆರೆಯದೇ ಹೋಗಿದ್ದರೆ ಬಹುಶಃ ಬೇರಾವುದೇ ಪೊಲೀಸ್ ಅಧಿಕಾರಿಗೆ ಈತನನ್ನು ಮುಟ್ಟಲಾಗುತ್ತಿರಲಿಲ್ಲ. ಆ ಹೊತ್ತಿಗೆ ಭಾರತೀನಗರಕ್ಕೆ ಎಮ್ಮೆಲ್ಲೆಯಾಗಿದ್ದ ಮಾರ್ವಾಡಿ ನಿರ್ಮಲ್ ಸುರಾನಾ ಪ್ರತಿ ಬೆಳಿಗ್ಗೆ ಶ್ರೀಧರನ ಅಡ್ಡೆಗೆ ಭೇಟಿ ಕೊಟ್ಟೇ ಮುಂದಿನ ಕೆಲಸಕ್ಕೆ ಹೊರಡುತ್ತಿದ್ದ. ತನ್ನ ದೊಡ್ಡಪ್ಪ ರಾಜಣ್ಣನ ವಿರುದ್ಧವೇ ಬಿಜೆಪಿಯ ಸುರಾನಾನನ್ನು ಬೆಂಬಲಿಸಿ ಗೆಲ್ಲಿಸಿದ್ದ ಶ್ರೀಧರ, ಚುನಾವಣೆಯ ದಿನ ಸರಿಸುಮಾರು ಮುನ್ನೂರು ಮಂದಿ ರೌಡಿಗಳೊಂದಿಗೆ ಕಾಕ್ಸ್‌ಟೌನಿನ ಮುತಗಟ್ಟೆಯ ಮೇಲೆ ದಾಳಿ ನಡೆಸಿದ್ದ. ಪ್ರಶ್ನಿಸಿದ ದೊಡ್ಡಪ್ಪನನ್ನೇ ಹಿಡಿದು ಬಡಿದಿದ್ದ!

### ದಲಿತ ನಾಯಕನ ಕಗ್ಗೊಲೆ

ಹೀಗೆ ಮುಂದುವರೆದ ಕೇಬಲ್ ಶ್ರೀಧರನ ಅಟ್ಟಹಾಸದ ಪರಮಾವಧಿಯೆಂಬಂತೆ 2006 ರ ಜೂನ್ 1 ರಂದು ಬಿಎಸ್‌ಪಿ ನಾಯಕ ಸತ್ಯವೇಲು ಕೊಲೆಯಾದ. ಮರುದಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಬಿಎಸ್‌ಪಿ ಸ್ಥಾಪ್ತನಾಯಕಿ ಮಾಯಾವತಿಯ ಸಭೆಯಿತ್ತು. ಅದಕ್ಕೆಂದು ಹಿಂದಿನ ರಾತ್ರಿ ಬ್ಯಾನರ್ ಕಟ್ಟಿಸುತ್ತಿದ್ದ ಸತ್ಯವೇಲುವಿನ ಮೇಲೆ ಬ್ಯಾಡರಹಳ್ಳಿ ಮ್ಯಾಥ್ಯೂ, ಗಿಡ್ಡಪ್ಪ ಲೇನಿನ ಸೆಲ್ವಾ, ಟಿಯೋ ಪೀಟರ್, ನವೀನ, ವೇಣು ಮುಂತಾದ ರೌಡಿಗಳೆಲ್ಲ ಸೇರಿದ್ದೇ ಮಾರಕ ಅಟ್ಯಾಕ್ ನಡೆಸಿದ್ದರು. ಕತ್ತರಿಸಿದ ಏಟಿಗೆ ಸತ್ಯವೇಲು ನಡುರಸ್ತೆಯಲ್ಲೇ ಹೆಣವಾಗಿದ್ದ.


ಸದರಿ ಕಗ್ಗೊಲೆಯ ಮೊದಲ ಆರೋಪಿಯೇ ಕೇಬಲ್ ಶ್ರೀಧರ. ಆತನ ಗೂಂಡಾಗಿರಿಗೆ ಮಣಿಯದೇ ಆತನ ವಿರುದ್ಧ ಕ್ರಮಕೈಗೊಳ್ಳುವಂತೆ ಒತ್ತಾಯಿಸಿ ಬಿಎಸ್‌ಪಿ ಪದೇಪದೇ ಪ್ರತಿಭಟಿಸಿತ್ತು. ಪೊಲೀಸ್ ಕಮೀಷನರ್ ಕಚೇರಿಯ ಎದುರು ಸಾವಿರಾರು ಜನ ಬಿಎಸ್‌ಪಿ ಕಾರ್ಯಕರ್ತರು ಧರಣಿ ನಡೆಸಿದ್ದರು. ಇಷ್ಟೆಲ್ಲ ಪ್ರತಿಭಟನೆಗಳಾಗಿಯೂ ಪೊಲೀಸರು ಶ್ರೀಧರನನ್ನು ಬಂಧಿಸಲಿಲ್ಲ. ಬದಲಿಗೆ ತನ್ನ ಪಾತಕ ಬಂಟರನ್ನು ಛೂಬಿಟ್ಟು ಬಿಎಸ್‌ಪಿ ನಾಯಕ ಸತ್ಯವೇಲುವನ್ನೇ ಶ್ರೀಧರ ಮುಗಿಸಿ ಹಾಕಿದ. ಜೈಲಿಗೂ ಹೋಗಿಬಂದ. ಇವತ್ತಲ್ಲಾ ನಾಳೆ ಆತ ಸತ್ಯವೇಲು ಕೊಂದ ಪಾಪಕ್ಕೆ ಶಿಕ್ಷೆ ಉಣ್ಣಲೇಬೇಕು.

ಆದರೆ ಭಾರತೀನಗರದಿಂದ ಬೇರ್ಪಟ್ಟು ಸರ್ವಜ್ಞನಗರ ಎಂಬ ಹೊಸ ಕ್ಷೇತ್ರ ಉದ್ಭವಿಸಿದ್ದೇ ತಡ, ಕೇಬಲ್ ಶ್ರೀಧರನ ಆರ್ಭಟ ಏಕಾಏಕಿ ಉಲ್ಬಣಿಸಿದೆ. ಬಿಜೆಪಿ ತನಗೆ ಟಿಕೆಟ್ ಕೊಡದೇ ಹೋದರೂ ಕತ್ತೆಬಾಲ, ತನ್ನ ಗಾಡ್‌ಫಾದರ್ ಶ್ರೀಧರನಿಗೆ ಮಾತ್ರ ಟಿಕೆಟ್ ತಪ್ಪಿಸಕೂಡದೆಂದು ಭಾರತಿನಗರದ ಮಾಜಿ ಶಾಸಕ ಸುರಾನಾ ಹಠಕ್ಕೆ ಬಿದ್ದಿದ್ದಾನೆ. ಐದು ಕೋಟಿ ಕೊಟ್ಟಾದರೂ ಬಿಜೆಪಿ ಟಿಕೆಟ್ ತರುತ್ತೇನೆಂದು ಕಂಡಕಂಡಲ್ಲಿ ಹೂಂಕರಿಸುತ್ತಿರುವ ಶ್ರೀಧರ ಸುರಾನಾನ ಜೊತೆ ದೆಹಲಿಗೆ ಹೋಗಿ ಅಡ್ವಾಣಿಯನ್ನು ಕಂಡುಬಂದಿದ್ದಾನೆ. ಒಂದು ಮೂಲದ ಪ್ರಕಾರ ಭೂಕಂಟಕ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಶ್ರೀಧರನನ್ನು ಕರೆದೊಯ್ದು ವೆಂಕಯ್ಯನಾಯ್ಡುಗೆ ಪರಿಚಯಿಸಿ ಅಡ್ವಾನ್ಸಾಗಿ ಒಂದುಕೋಟಿ ಕಾಣಿಕೆ ಕೊಡಿಸಿದ್ದಾನೆ. ರೊಕ್ಕ ಕೊಟ್ಟರೆ ಕೊಚ್ಚೆಗೂ ನಾಲಿಗೆ ಹಾಕುವ ದುರುಳ ವೆಂಕಯ್ಯನಾಯ್ಡು ಈ ಬಾರಿ ಶ್ರೀಧರನನ್ನೇ ಸರ್ವಜ್ಞ ನಗರಕ್ಕೆ ಬಿಜೆಪಿ ಅಭ್ಯರ್ಥಿಯನ್ನಾಗಿ ಮಾಡುವಂತೆ ಯಡ್ಡಿಗೆ ಸೂಚನೆ ಕೊಟ್ಟಾಗಿದೆ. ಹಾಗೊಮ್ಮೆ ಶ್ರೀಧರ ಬಿಜೆಪಿ ಅಭ್ಯರ್ಥಿಯಾದನೆಂದರೆ ಆತನ ವಿರುದ್ಧ ಸೆಣಸಲು ಕಾಂಗ್ರೆಸ್-ಜೆಡಿಎಸ್‌ಗಳಿಗೆ ಗಂಡೇ ಗತಿಯಿಲ್ಲ. ಮಾಜಿ ಉಪಮೇಯರ್ ಶಂಕರ್ ಕಾಂಗ್ರೆಸ್ ಅಭ್ಯರ್ಥಿಯಾದರೂ ಜೆಡಿಎಸ್‌ನಿಂದ ಮತ್ತೊಬ್ಬ ಮಾಜಿ ಉಪಮೇಯರ್ ಪದ್ಮನಾಭರೆಡ್ಡಿ ನಿಂತರೂ ಶ್ರೀಧರನ ಕೇಬಲ್ ಜಾಲ, ದುಡ್ಡಿನ ತಾಕತ್ತು ಮತ್ತು ಹಂತಕರ ಹಿಂದಿನ ಮುಂದೆ ಯಾವ ಲೆಕ್ಕ?

ಒಂದಂತೂ ಸತ್ಯ ಹಾಗೊಮ್ಮೆ ಬಿಜೆಪಿ ಈತನಿಗೆ ಟಿಕೆಟ್ ಕೊಟ್ಟದ್ದೇ ಆದರೆ ಬಿಎಸ್‌ಪಿ ನಾಯಕ ಸತ್ಯವೇಲು ಕೊಲೆ ಕೇಸಿನಲ್ಲಿ ಇವತ್ತಲ್ಲ ನಾಳೆ ಖಂಡಿತಾ ಜೈಲು ಪಾಲುಗುತ್ತಾನೆ. ತನ್ನ ಎಮ್ಮೆಲ್ಲೆಯೊಬ್ಬ ಕೊಲೆ ಕೇಸಿನಲ್ಲಿ ಜೈಲು ಪಾಲುಗುವ ಸುವರ್ಣಾವಕಾಶವೊಂದು ಕರ್ನಾಟಕದ ಬಿಜೆಪಿಗೆ ಶ್ರೀಧರನ ಮೂಲಕವೇ ಬರಬೇಕೇ?

**ರಾ. ಸೋಮನಾಥ್**

# ಚೀನಾ ರಾಮು ಬ್ಯಾಂಕಾಕ್ ಮಾಮು


ಚಿ.ನಾ. ರಾಮು


ದಲಿತರ ಮಾನ ಕಳೆಯುವುದಕ್ಕೆಂದೇ ಹುಟ್ಟಿಕೊಂಡ ರೋಲ್‌ಕಾಲ್ ಲೀಡರುಗಳ ಪೈಕಿ ಮೊದಲನೇ ರ್‍ಯಾಂಕ್ ಅಂತ ಕೊಡಬಹುದಾದರೆ ಅದಕ್ಕೆ ಚೀನಾ ರಾಮು ಎಂಬ ಉಂಡಾಡಿಗಿಂತ ಸೂಕ್ತ ಅಭ್ಯರ್ಥಿ ಸಿಗಲಿಕ್ಕಿಲ್ಲ. ನಿನ್ನೆಮೊನ್ನೆಯ ತನಕ ಕುಮಾರಸ್ವಾಮಿಯ ಪರವಹಿಸಿ ದಿನಕ್ಕೊಂದು ರೋಡ್ ಷೋ ಮಾಡಿಕೊಂಡಿದ್ದ ಚೀನಾ ರಾಮು ತನ್ನ ಲಕ್ಷಾಂತರ(!) ಮಂದಿ ದಲಿತಾನುಯಾಯಿಗಳ ಜೊತೆ ಇದೇ ಮಾರ್ಚ್ 28 ರ ಶುಕ್ರವಾರದಂದು ಬಿಜೆಪಿ ಸೇರುತ್ತೇನೆಂದು ಟೀವಿಗಳಲ್ಲಿ ಕೊಟ್ಟ ಲಕ್ಷಾಂತರ ರೂಪಾಯಿಗಳ ಜಾಹೀರಾತೇ ವಿಚಿತ್ರವಾಗಿತ್ತು.

ಅದೂ ಅಂಬೇಡ್ಕರ್ ಭವನದಲ್ಲಿ ಲಕ್ಷಗಟ್ಟಲೇ ಜನ ಹಿಡಿಯುವುದಾದರೂ ಹೇಗೆ? ಬಹುಶಃ ಚೀನಾ ರಾಮನ ಅಸಂಖ್ಯಾತ ಬೆಂಬಲಿಗರಿಗೆ ಅಂಬೇಡ್ಕರ್ ಭವನ ಸಾಲದೇ ಇಡೀ ವಸಂತನಗರ ಏರಿಯಾನೇ ಜನಸಾಗರದಲ್ಲಿ ಮುಳುಗುತ್ತದೇ ಎಂದು ಕುತೂಹಲದಿಂದ ಬಂದವರಿಗೆ ಎಂಥಾ ತಮಾಷೆ ಕಾದಿತ್ತೆಂದರೆ; ಅಂಬೇಡ್ಕರ್ ಭವನ ತುಂಬುವುದಿರಲಿ ಬಂದಿದ್ದೇ ಮೂರು ಮುಕ್ಕಾಲು ಮಂದಿ!

ಹೊಸಕೋಟೆಯ ದೈತ್ಯ ಬಿ.ಎನ್. ಬಚ್ಚೇಗೌಡನ ಜೊತೆಗೆ ಬಂದಿದ್ದ ಕೆಲ ಪುಡಿ ಲೀಡರುಗಳು ಹೊರತಾಗಿ ರಾಮು ಕರೆತಂದಿದ್ದ ಬಾಡಿಗೆ ದಲಿತರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಕಾಂಗ್ರೆಸ್ಸು, ದಲಿತರಿಗೆ ಟೋಪಿ ಹಾಕಿದ್ದಕ್ಕೇ ಬೇಸತ್ತು ಚೀನಾ ರಾಮು ಥರದ ದಲಿತ ಲೀಡರುಗಳು ಬಿಜೆಪಿಗೆ ಬರುತ್ತಿದ್ದಾರೆಂದು ರೈಲು ಬಿಟ್ಟ ಬಿಜೆಪಿ ನಾಯಕ ಯಡ್ಡಿಗೆ ರಾಮು ಹಿಂದಿದ್ದದ್ದು ಕಾಂಗ್ರೆಸ್ಸಿನಲ್ಲಲ್ಲ ಜೆಡಿಎಸ್‌ನಲ್ಲಿ ಎಂಬ ಕಾಮನ್‌ಸೆನ್ಸ್ ಕೂಡ ಇರಲಿಲ್ಲ. ವೇದಿಕೆಯಲ್ಲಿ ರಾಮಚಂದ್ರೇಗೌಡ, ಆರ್. ಅಶೋಕ್, ಎಮ್ಮೆಲ್ಸಿ ವೀರಯ್ಯ ಇತ್ಯಾದಿಗಳಿಗೆ ಈ ಚೀನಾ ರಾಮು ಯಾರು? ಈತನ ಪೂರ್ವಿಕರು ಚೀನಾ ದೇಶದಿಂದ ವಲಸೆ ಬಂದವರಾ? ಚೀನಾಕ್ಕೂ ಈತನಿಗೂ ಏನು ಸಂಬಂಧ ಇತ್ಯಾದಿ ಏನೊಂದೂ ಗೊತ್ತಾಗದೇ ತಲೆ ಕೆರೆಯುತ್ತಿದ್ದದ್ದು ತಮಾಷೆಯಾಗಿತ್ತು. ಈತ ಬಿಜೆಪಿಗೆ ಸೇರಿದರೆಷ್ಟು? ಯಡ್ಡಿ ಕೊಟ್ಟ ಚೆಡ್ಡಿ ತೊಟ್ಟು ಕುಣಿದರೆಷ್ಟು?

ದಲಿತರಂತೂ ಯಾವತ್ತೋ ಈತನನ್ನು ಉಗಿದು ಹೊರಗಿಟ್ಟದ್ದಾಗಿದೆ. ಅಷ್ಟಕ್ಕೂ ನಿನ್ನೆಮೊನ್ನೆಯ ತನಕ ಜೆಡಿಎಸ್‌ನ ರಕ್ತಸಂಬಂಧಿಯಂತಿದ್ದು ಕುಮಾರಸ್ವಾಮಿ ವಿರುದ್ಧ ಯಾರೇ ಕೆಮ್ಮಿದರೂ ಅಂಥವರ ಭೂತ ಸುಟ್ಟು ಬೀದಿರಂಪ ಮಾಡಿಕೊಂಡಿದ್ದ ಚೀನಾ ರಾಮು ಏಕಾಏಕಿ ಬಿಜೆಪಿಗೆ ನೆಗೆದಿದ್ದಾರೂ ಏಕೆ?

ಈ ಪ್ರಶ್ನೆಗೆ ಈತನ ನಟೋರಿಟಿಗಿಂತ ಉತ್ತರ ಬೇಕಿಲ್ಲ. ಹುಟ್ಟಾ ವಂಚಕ ಎಂಬುದನ್ನು ಬಿಟ್ಟರೆ ಅಂಬೇಡ್ಕರ್, ದಲಿತ ಕಾಳಜಿ, ಸಿದ್ಧಾಂತ ಇತ್ಯಾದಿಗಳ ತಲೆಬುಡ ಗೊತ್ತಿಲ್ಲ. ಪ್ರಾರಂಭದಲ್ಲಿ ತನ್ನ ಕಾರಿಗೆ ಮಂತ್ರಿಗಳಂತೆ ಕೆಂಪು ದೀಪ ಹಾಕ್ಕೊಂಡು ಅಂಬೇಡ್ಕರ್ ಪ್ರಚಾರ ಸಮಿತಿ ಎಂದು ಬೋರ್ಡು ಬರೆಸಿಕೊಂಡಿದ್ದ. ಕ್ರಮೇಣ ಹೊಸಕೋಟೆ ಸುತ್ತಮುತ್ತ ಲ್ಯಾಂಡ್ ಗ್ಯಾಬಿಂಗ್ ಶುರು ಹಚ್ಚಿಕೊಂಡ. ಹೊಸಕೋಟೆಯ ಪಾಳೇಗಾರ ಬಿ.ಎನ್. ಬಚ್ಚೇಗೌಡ ಎಲ್ಲಿ ತನ್ನನ್ನು ಕೊಲ್ಲಿಸಿಬಿಡುತ್ತಾನೋ ಎಂದು ತಾನೇ ಮೇಲೆ ಬಿದ್ದು ಬಚ್ಚೇಗೌಡನಿಗೆ ಮಸ್ಕಾ ತಿಕ್ಕಲಾರಂಭಿಸಿದ. ಲ್ಯಾಂಡ್ ಲೂಟಿಯಿಂದ ದುಡ್ಡು ಸೇರುತ್ತಿದ್ದಂತೆ ಚೀನಾ ಕಾರ್ಲ್‌ಮಾರ್ಕ್ಸ್ ಸೆಕ್ಯೂರಿಟಿ ಏಜೆನ್ಸಿ ಆರಂಭಿಸಿ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್ಲುಗಳು, ಸರ್ಕಾರಿ ಕಟ್ಟಡಗಳ ಕಾವಲಿಗೆಂದು ಸೆಕ್ಯೂರಿಟಿ ಗಾರ್ಡುಗಳನ್ನು ಸರಬರಾಜು ಮಾಡುವ ದಂಧೆಗೆ ಕೈಯಿಟ್ಟ.



ಸ್ವತಃ ತಾನು ದಲಿತನಾಯಕನೆಂದು ಹೇಳಿಕೊಳ್ಳುತ್ತಲೇ ನೂರಾರು ದಲಿತ ನಿರುದ್ಯೋಗಿಗಳನ್ನು ಸೆಕ್ಯೂರಿಟಿ ಗಾರ್ಡುಗಳನ್ನಾಗಿ ನೇಮಿಸಿಕೊಂಡು ಅವರ ದುಡಿಮೆಯ ಅರ್ಧ ಲಪಟಾಯಿಸಿದ. ಪುಡಿ ಸಂಬಳ ಕೊಟ್ಟು ವಂಚಿಸಿದ. ಇವತ್ತಿಗೂ ನೂರಾರು ಮಂದಿ ಸೆಕ್ಯೂರಿಟಿ ಗಾರ್ಡುಗಳು ತಮ್ಮ ಸಂಬಳಕ್ಕಾಗಿ ಪ್ರತಿನಿತ್ಯ ಈತನ ಅಡ್ಡೆ ಮುಂದೆ ನಿಂತು ಹಿಡಿಶಾಪ ಹಾಕುತ್ತಾರೆ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗುತ್ತಿದ್ದಂತೆ ಜೆಡಿಎಸ್ ಕಾರ್ಯಕರ್ತರಿಗಿಂತಲೂ ಅಸಹ್ಯವಾಗಿ ಕುಮಾರಣ್ಣನನ್ನು ಓಲೈಸತೊಡಗಿದ. ರಾಮು ವೈಟ್‌ಫೀಲ್ಡ್, ಮಹದೇವಪುರ ಸುತ್ತಮುತ್ತ ಲ್ಯಾಂಡ್ ಡೀಲ್ ಮಾಡಿಯೇ ದುಂಡಗಾದ. ಜೊತೆಗೆ ವಾಟಾಳ್ ಬೀದಿ ನಾಟಕ ಮಂಡಳಿಯಲ್ಲೂ ಗುರುತಿಸಿಕೊಂಡ. ದಿನಂಪ್ರತಿ ಒಂದಲ್ಲಾ ಒಂದು ಸಂಜೆ ಪತ್ರಿಕೆಗೆ ತನ್ನ ಬಗ್ಗೆ ತಾನೇ ಜಾಹೀರಾತು ಕೊಡುತ್ತಿದ್ದ. ಬೌದ್ಧ ಧರ್ಮದ ಅಧ್ಯಯನಕ್ಕೆ ಫಾರಿನ್ ಟೂರ್ ಮಾಡ್ತೀನಿ ಎಂದು ಸೆಕ್ಸ್ ಟೂರಿಜಂನ ಸ್ವರ್ಗವಾದ ಬ್ಯಾಂಕಾಕ್ ಸುತ್ತಾಡಿಕೊಂಡು ಬಂದ!

ಈತ ಬ್ಯಾಂಕಾಕ್‌ಗೆ ಹೋಗಿ ಬಂದದ್ದಕ್ಕೆ ಯಾರೋ ದಲಿತ ಲೀಡರ್ ಒಬ್ಬರು 'ಏನಪ್ಪಾ ಆಸೆಯೇ ಸುಖಕ್ಕೆ ಮೂಲ(!) ಅನ್ನೋದು ಈಗಲಾದರೂ ಗೊತ್ತಾಯ್ತಾ?' ಎಂದು ಕೇಳಿದ್ದಕ್ಕೆ ರಾಮು, 'ಅದೇ ಅಲ್ವೇನ್ರೀ ಬೌದ್ಧ ಧರ್ಮದ ಮೂಲ ತತ್ವ?' ಎಂದು ಹಲ್ಲು ಕಿರಿದಿದ್ದ!

ನಿಷ್ಠೆ ಏನಿದ್ದರೂ ಅದು ಹೊಸಕೋಟೆ ಬಚ್ಚೇಗೌಡನಿಗಷ್ಟೇ ಎಂಬುದು ಕೂಡ ಗುಟ್ಟೇನಲ್ಲ. ಬಚ್ಚೇಗೌಡ ಬಿಜೆಪಿಯಲ್ಲಿದಷ್ಟೂ ದಿನ ಚೀನಾ ರಾಮು ಚೆಡ್ಡಿ ತೊಟ್ಟಿರುತ್ತಾನೆ. ಬಚ್ಚೇಗೌಡ ಹೊರಬಂದಿದ್ದೇ ಲದ್ದಿ ಹಾಕಿ ಟಾಟಾ ಹೇಳುತ್ತಾನೆ. ಅಲ್ಲಿಯತನಕ ದಲಿತ ಕ್ರಿಯಾ ಸಮಿತಿ ಎಂಬ ಲೆಟರ್‌ಹೆಡ್ ಸಂಘಟನೆಯ ರೋಡ್ ಷೋ ನಿರಾಂತಕ!

# ಕಟ್ಟಾ ಮಗನೇ ಅಸಲೀ ಡಾನ್



ಹಂತಕ ಕೇಬಲ್ ಶ್ರೀಧರನಿಗೆ ಸರ್ವಜ್ಞ ನಗರದ ಬಿಜೆಪಿ ಟಿಕೆಟ್ ಗ್ಯಾರಂಟಿಯಾಗುತ್ತಿದ್ದಂತೆ ಟ್ಯಾನರಿ ರೋಡ್‌ನ ಬಿಎಸ್‌ಪಿ ಕಾರ್ಯಕರ್ತರಾದ ವೇಲು, ಮಣಿವಣ್ಣನ್, ಏಳುಮಲೈ ಮುಂತಾದವರಿಗೆ ಪ್ರಾಣಾಪಾಯವೂ ಹೆಚ್ಚುತ್ತಿದೆ. ಕೇಬಲ್ ಶ್ರೀಧರನ ಪಡೆಯಿಂದ ಕೊಲೆಯಾದ ಸತ್ಯವೇಲು ಅಣ್ಣನೇ ರಾಜ್ಯ ಬಿಎಸ್‌ಪಿ ಕಾರ್ಯದರ್ಶಿ ವೇಲು. ಸದ್ಯ ಜೈಲಿಂದ ಹೊರಬದ್ದ ಕೇಬಲ್ ಶ್ರೀಧರನ ಬಂಟರಾದ ಕುಟ್ಟೀರಾಜಾ ಎಂಬಿಬ್ಬರು ರೌಡಿ ಸಹೋದರರೇ ವೇಲು ಮತ್ತು ಏಳುಮಲೈಗೆ ಕೊಲೆಬೆದರಿಕೆ ಹಾಕುತ್ತಿರುವುದು. ಕೇಬಲ್ ಶ್ರೀಧರನ ವಿರುದ್ಧ ಸಾಕ್ಷಿ ಹೇಳಬಾರದು ಎಂಬುದು ಒಂದಾದರೆ ಬಿಎಸ್‌ಪಿ ತೊರೆದು ಬಿಜೆಪಿಗೆ ಬರಬೇಕೆಂಬುದು ಮತ್ತೊಂದು.

ಅದಕ್ಕೆಂದು ಕೇಬಲ್ ಶ್ರೀಧರನಿಂದ ಸುಪಾರಿ ಪಡೆದ ಮತ್ತೊಬ್ಬ ರೌಡಿ ಬಾಗಲೂರು ಲೇಔಟಿನ ಡೇನಿಯಲ್. ಈತ ರೇಪಿಸ್ಟ್ ಅಲ್ಲಿಮಣಿಯ ಸಹಚರನಾಗಿದ್ದ. ಕುಟ್ಟೀರಾಜಾ ಕೂಡ ಬಿಎಸ್‌ಪಿ ಕಾರ್ಯಕರ್ತರ ವಿರುದ್ಧ ಈತನನ್ನೇ ಬೆಂಬಲಿಸುತ್ತಿದ್ದಾರೆ. ಇವರೆಲ್ಲರ ಬೆನ್ನಿಗೆ ಕೇವಲ ಮಾಜಿ ಎಮ್ಮೆಲ್ಲೇ ಸುರಾನಾ ಮಾತ್ರವೇ ನಿಂತಿದ್ದರೆ ಯಾರೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಕೇಬಲ್ ಶ್ರೀಧರನನ್ನು ಎಮ್ಮೆಲ್ಲೇ ಮಾಡಿಯೇ ತೀರುತ್ತೇನೆಂದು ಹಠಕ್ಕೆ ಬಿದ್ದ ಮತ್ತೊಬ್ಬ ಪಾತಕಿಯಿದ್ದಾನೆ. ಆತ ಕಟ್ಟಾಸುಬ್ರಹ್ಮಣ್ಯ ನಾಯ್ಡು ಕುಲಪುತ್ರ ಕಟ್ಟಾ ಜಗದೀಶ!

ಕೇಬಲ್ ಶ್ರೀಧರನ ರೌಡಿ ಪಡೆ ಕಟ್ಟಿಕೊಂಡು ಕಂಡಕಂಡ ಸರ್ಕಾರಿ ಭೂಮಿ ನುಂಗಿ ಹಾಕಿದ ಕಟ್ಟಾ ಪುತ್ರ ಜಗದೀಶನೇ ಸದ್ಯ ಶ್ರೀಧರನ ಅಸಲಿ ಗಾಡ್‌ಫಾದರ್. ಕಾಂಗ್ರೆಸ್-ಜೆಡಿಎಸ್‌ಗಿಂತಲೂ ಪಾತಕೀಕರಣಗೊಳ್ಳುತ್ತಿರುವ ಬಿಜೆಪಿಗೇನಾದರೂ ಅಧಿಕಾರ ಸಿಕ್ಕರೆ ಏನು ಗತಿ?

# ಗರುಡನ ಮುಂದೆ ತಿರುಡಾ ತಿರುಡಾ!

ಬೆಂಗಳೂರು ಭೂಗತಲೋಕ ಕಂಡ ಖತರ್‌ನಾಕ್ ರೌಡಿಗಳ ಪೈಕಿ ವಿವೇಕನಗರದ ಪಾತಕಿ ಪ್ರವೀಣನ ನಟೋರಿಟಿಯೇ ಬೇರೆ. ನಿನ್ನೆಮೊನ್ನೆಯ ತನಕ ಮಾರ್ಕೆಟ್ ದೇವಿಯ ಭಟ್ಟಂಗಿಯಾಗಿದ್ದ ಪ್ರವೀಣನನ್ನು ಸದ್ಯ ಬಿಜೆಪಿಗೆ ಕರೆತಂದವನು ಉದಯ್ ಗರುಡಾಚಾರ್!

ಅದೂ ಸುಮ್ಮನೇನಲ್ಲ. ಯಾವತ್ತು ಚಿಕ್ಕಪೇಟೆಯ ಬಿಜೆಪಿ ಟಿಕೆಟ್ಟು ಗರುಡಾಮಾಲ್ ಖದೀಮ ಉದಯ ಗರುಡಾಚಾರ್‌ಗೆ ಗ್ಯಾರಂಟಿಯಾಯಿತೋ ನಟ ಅಂಬಿ ಮನೆಯಿಂದ ಹೊರಬಿದ್ದ ಗರುಡಾ ಉದಯ ಸೀದಾ ಸಂಪಂಗಿರಾಮನಗರ ಪೊಲೀಸ್ ಠಾಣೆ ವ್ಯಾಪ್ತಿಯ ರಾಮಣ್ಣ ಗಾರ್ಡನ್ ಕೊಂಪೆಗೆ ಬಂದಿದ್ದಾನೆ. ಅಲ್ಲಿಂದ ರೌಡಿ ಪ್ರವೀಣನ ಅಡ್ಡೆ ಹೊಕ್ಕಿದ್ದಾನೆ. ಅದೇನು ಡೀಲು ಕುದುರಿತೋ, ಅದಾಗಿ ಅರ್ಧಗಂಟೆಗೆ ರೌಡಿ ಪ್ರವೀಣ ಮತ್ತು ಗರುಡಾ ಉದಯ ಒಂದೇ ಕಾರಲ್ಲಿ ಚಿಕ್ಕಪೇಟೆಗೆ ಬಂದು ರೋಡ್ ಷೋ ಕೊಟ್ಟಿದ್ದಾರೆ.


ಇದೀಗ ಬಂದ ಸುದ್ದಿಯ ಪ್ರಕಾರ ಇಷ್ಟರಲ್ಲೇ ರೌಡಿ ಪ್ರವೀಣನ ಇಡೀ ಗ್ಯಾಂಗ್ ಬಿಜೆಪಿ ಸೇರಲಿದೆ. ಅದಕ್ಕೆಂದೇ ಮಿತ್ರಾಲಯ ಸ್ಕೂಲ್ ಗ್ರೌಂಡಿನಲ್ಲಿ ಮುಂದಿನ ವಾರ ತನ್ನ ಹತ್ತು ಸಾವಿರ ಬೆಂಬಲಿಗರನ್ನು ಕಲೆ ಹಾಕಿ ಆರ್ಕೆಸ್ಟ್ರಾ ಇಟ್ಟು ಅದ್ದೂರಿಯ ಕಾರ್ಯಕ್ರಮ ಮಾಡಲು ಗರುಡಾ ಮಾಲ್ ಧಣಿಯಿಂದ ಪ್ರವೀಣನಿಗೆ 50 ಲಕ್ಷ ರೂಪಾಯಿ ಸಂದಾಯವಾಗಿದೆ. ಹೊಡೆದ ಕೊಳ್ಳೆಯ ಲೆಕ್ಕಕ್ಕೆ ಹೋಲಿಸಿದರೆ ಗರುಡನಿಗೆ ರೌಡಿಯೊಬ್ಬನಿಗೆ ಐವತ್ತು ಲಕ್ಷ ಕೊಡುವುದು ಏನೇನೂ ಅಲ್ಲ. ತನ್ನ ಭೂಕೊಳ್ಳೆಯನ್ನು ಮುಚ್ಚಿಕೊಳ್ಳಲು ಆತನಿಗೆ ಅಧಿಕಾರ ಬೇಕು. ಅದಕ್ಕೆ ಪ್ರವೀಣನಂಥ ಪಾತಕಿಗಳನ್ನು ಬಿಜೆಪಿಗೆ ಕರೆತಂದು ಮಾಡುವ ಅನಾಹುತವಿದೆಯಲ್ಲ ಬಹುಶಃ ಮಾರ್ಕೆಟ್ ದೇವಿ ಕೂಡ ಯಾವತ್ತೂ ಈ ಮಟ್ಟಕ್ಕಿಳಿದಿರಲಿಲ್ಲ.

ಪ್ರಾರಂಭದಲ್ಲಿ ವಿವೇಕ್‌ನಗರದ ದೀಡಿ ರವಿ ಜೊತೆ ಬ್ಯಾಂಕ್‌ಗಳಿಗೆ ವಂಚಿಸಿಕೊಂಡಿದ್ದ ಪ್ರವೀಣ 2002 ರ ಹೊತ್ತಿಗೆ ಮೂರು ಅನಾಹುತಕಾರಿ ರಾಬರಿಗಳನ್ನು ಮಾಡಿಸಿದ್ದ. ದೀಡಿ ರವಿಯ ತಮ್ಮ ಉಮಾಶಂಕರನ ಜೊತೆ ಸೇರಿ ನಾಲ್ಕು ಕಿಡ್ನಾಪ್ ಪ್ರಕರಣಗಳಲ್ಲಿ ಭಾಗಿಯಾದ. ಗೌರಿಬಿದನೂರು ರಸ್ತೆಯಲ್ಲಿ ರಾಬರಿ ಮಾಡಿ ಕಾರಿನಲ್ಲಿ ಪರಾರಿಯಾಗುತ್ತಿದ್ದ ಪ್ರವೀಣನ ಮೇಲೆ ಇನ್ಸ್‌ಪೆಕ್ಟರ್ ಅಶೋಕ್‌ಕುಮಾರ್ ಗುಂಡು ಹಾರಿಸಿದ್ದರು. ತಲೆ ಮರೆಸಿಕೊಂಡಿದ್ದ ಈತನನ್ನು ಇನ್ಸ್‌ಪೆಕ್ಟರ್ ಸುಬ್ಬಣ್ಣ ರಿವಾಲ್ವರ್ ಸಮೇತ ಹಿಡಿದು ಜೈಲಿಗೆ ಸಾಗಿಸಿದರೆ ಈತನ ತಮ್ಮ ರಜನಿ ಪೊಲೀಸರ ಗುಂಡೇಟು ತಿಂದೂ ಬದುಕುಳಿದ. ಬಹುಶಃ ಮಾರ್ಕೆಟ್ ದೇವಿಯ ನೆರಳಿಲ್ಲದೇ ಹೋಗಿದ್ದರೆ ಯಾವತ್ತೋ ಎನ್‌ಕೌಂಟರಾಗಿ ಹೋಗುತ್ತಿದ್ದ. ಇಂಥವನನ್ನು ಲಚ್ಚೆಗಿಟ್ಟು ಬಿಜೆಪಿಗೆ ಕರೆತರುತ್ತಿರುವ ಉದಯ ಗರುಡಾಚಾರ್‌ನಿಗೆ ಕುಷ್ಠ ಮಾರ್ಕೆಟ್ ದೇವಿಗಿದ್ದಷ್ಟೂ ತಿಳುವಳಿಕೆ ಇದ್ದರೆ ಹೀಗಾಗುತ್ತಿತ್ತಾ?

ಹಾಗೊಮ್ಮೆ ಉದಯ ಚಿಕ್ಕಪೇಟೆಯಿಂದ ಗೆದ್ದುಬಿಟ್ಟರೆ ಪ್ರವೀಣ ಕೌನ್ಸಿಲರ್ ಆಗದೇ ಇರುತ್ತಾನಾ? ಬೆಂಗಳೂರಿಗೆ ಏನು ದುರ್ಗತಿ ಕಾದಿದೆಯೊ?

# ಶ್ರೀರಾಮುಲು ಮನೋಡಾ? ರೆಡ್ಡಿವಾಡಾ?

ಚಿತ್ರದುರ್ಗ, ಬಳ್ಳಾರಿ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ವಾಲ್ಮೀಕಿ ಜನಾಂಗದವರನ್ನ ಬಿಜೆಪಿ ಗಣಿ ರೆಡ್ಡಿಗಳು ದುರುಪಯೋಗ ಪಡಿಸಿಕೊಳ್ಳುತ್ತಿರುವ ಕತೆ ಇದು. ರೆಡ್ಡಿಗಳ ಭಂಟ ಶ್ರೀರಾಮಲು ಇದರ ಸೂತ್ರಧಾರ. ಹೇಳಿಕೊಳ್ಳುವಂತಹ ರಾಜಕೀಯ ಹಿನ್ನೆಲೆಯೇನೂ ಇಲ್ಲದಿದ್ದ ಈ ರೆಡ್ಡಿ ಸಹೋದರರು ಬೆಳೆಯುತ್ತಾ ಬೆಳೆಯುತ್ತಾ ನುರಿತ ರಾಜಕೀಯ ಪಾಠಗಳನ್ನೇ ಕಲಿತಿದ್ದಾರೆ. ಮತ್ತದನ್ನು ಯಶಸ್ವಿಯಾಗಿ ಪ್ರಯೋಗಿಸುತ್ತಾ ಬಂದಿದ್ದಾರೆ. ತಮಗೆ ಬೇಕಾದವರನ್ನು ವೈಭವೀಕರಿಸುವ, ತಮಗಾಗದವರನ್ನು ಬಳಸಿ ಬಿಸಾಕುವ ಕಲೆಯನ್ನು ಚೆನ್ನಾಗಿ ರೂಢಿಸಿಕೊಂಡಿದ್ದಾರೆ.



## ರಾಮ್‌ಪ್ರಸಾದ್ ಎಂಬ ಸಜ್ಜನ

ಇವತ್ತು ಬಳ್ಳಾರಿಯಲ್ಲಿ ಬಹುಸಂಖ್ಯಾತರಾಗಿರುವ ವಾಲ್ಮೀಕಿ ನಾಯಕರಿಗೆ ಶ್ರೀರಾಮುಲು 'ರೋಲ್ ಮಾಡೆಲ್' ಎಂಬಂತೆ ಬಿಂಬಿಸಲ್ಪಡುತ್ತಿದ್ದಾನೆ. ಸ್ವತಃ ಶ್ರೀರಾಮುಲು ಕೂಡಾ ಸ್ವಂತಿಕೆಯಿಂದ ನಾಯಕನಾಗಿ ಬೆಳೆದಾತನಲ್ಲ. ಆತನ ಇತಿಹಾಸ ಗೊತ್ತಿರುವಂತೆ ಅವರಿವರ ನೆರಳಲ್ಲೇ ಬೆಳೆದಾತ. ಇವತ್ತಿಗೂ ಆತನದು ರೆಡ್ಡಿಗಳ ಕೈಗೊಂಬೆ ರಾಜಕೀಯ.

ರಾಜಕೀಯವಾಗಿ ಯಾವುದೇ ರೀತಿಯಲ್ಲಿ ಸ್ವಂತ ತೀರ್ಮಾನಗಳನ್ನು ಕೈಗೊಂಡು ಮುನ್ನಡೆಯುವ ಸ್ವತಂತ್ರ ಆತನಿಗಿಲ್ಲ. ರೆಡ್ಡಿ ಸಹೋದರರು ರೂಪಿಸುವ ರಾಜಕೀಯ ತಂತ್ರಗಾರಿಕೆಗೆ ತಕ್ಕಂತೆ ನಟಿಸುವುದಷ್ಟೇ ಈತನ ಕೆಲಸ. ವಾಲ್ಮೀಕಿ ಜನಾಂಗದ ನಡುವೆ ತನಗಿರುವ ಪ್ರಭಾವವನ್ನು ಬಳಸಿಕೊಂಡು ತಮ್ಮದೇ ಜನಾಂಗದ ಮುಖಂಡರುಗಳನ್ನು ಖರೀದಿಸಿ ರೆಡ್ಡಿ ಸಹೋದರರ ಪ್ರಭಾವ ವಲಯವನ್ನು ವಿಸ್ತರಿಸುವುದಷ್ಟೇ ಈತನ ರಾಜಕೀಯ ಚಟುವಟಿಕೆ.


ಜಾತಿ ರಾಜಕಾರಣವೇ ಪ್ರಾಧಾನ್ಯತೆ ಪಡೆದು ಕೊಂಡಿರುವ ಈ ದಿನಗಳಲ್ಲಿ ಜಿಲ್ಲೆಯ ನಾಯಕ ಜನಾಂಗ ತಮ್ಮನ್ನು ಸಾರ್ವಜನಿಕವಾಗಿ ಪ್ರತಿನಿಧಿಸಲಿಕ್ಕೊಬ್ಬ ನಾಯಕಬೇಕೆಂದು ಬಯಸುವುದು ತಪ್ಪೇನಲ್ಲ. ಆದರೆ ಅಂತಹ ಆಯ್ಕೆ ಶ್ರೀರಾಮುಲು ಮಾತ್ರ ಆಗಿರಬೇಕೆಂದೇನೂ ಇಲ್ಲ.

ಸಕ್ರಿಯ ರಾಜಕಾರಣದಲ್ಲಿದ್ದೂ ಒಂದು ಘನತೆಯನ್ನು ಉಳಿಸಿಕೊಂಡಿರುವ ಎಂ. ರಾಮಪ್ರಸಾದ್‌ರಂತವರನ್ನು ನಾಯಕ ಜನಾಂಗ ಗುರುತಿಸುವ ಅಗತ್ಯವಿದೆ. ಕಾಂಗ್ರೆಸ್‌ನಲ್ಲಿ ಪರಿಶುದ್ಧ ಇಮೇಜನ್ನು ಹೊಂದಿರುವ ರಾಮ್‌ಪ್ರಸಾದ್ ಉತ್ತಮ ಅವಕಾಶ, ಜನಾಂಗದ ಬೆಂಬಲ ದೊರೆತಲ್ಲಿ ಉತ್ತಮ ನಾಯಕನಾಗಿ ಹೊರಹೊಮ್ಮಬಲ್ಲ ಸಾಮರ್ಥ್ಯವಿರುವಾತ. ಒಂದು ದುರ್ಬಲ ಸಂದರ್ಭದಲ್ಲಿ ಜಾತಿಯ ಮುಲಾಜಿಗೊಳಗಾಗಿ ಬಿಜೆಪಿಯ ಅಂಗಳದಲ್ಲಿ ಬೆರಳೆಣಿಕೆಯ ದಿನ ಸುಳಿದಾಡಿ ತತ್‌ಕ್ಷಣವೇ ಜ್ಞಾನೋದಯವಾದಂತಾಗಿ ಮರಳಿ ಕಾಂಗ್ರೆ ಗೂಡಿಗೆ ಸೇರಿದವರು.

ಎಲ್ಲ ಜಾತಿ, ಜನಾಂಗದವರೊಂದಿಗೆ ಉತ್ತಮ ಬಾಂಧವ್ಯವನ್ನಿರಿಸಿಕೊಂಡು ಸಾರ್ವಜನಿಕ ಬದುಕಿನ ಸೂಕ್ಷ್ಮತೆ-ಸಭ್ಯತೆ ಎರಡನ್ನೂ ಕಾಪಾಡಿಕೊಂಡಿರುವಾತ. ಈತನ ಒಂದೇ ಡ್ರಾ ಬ್ಯಾಕ್ ಎಂದರೆ ಈತನ ಬಳಿ ಹಣವಿಲ್ಲದಿರುವುದು. ಗಣಿ ಧೂಳನ್ನೆಲ್ಲ ಕೋಟಿಗಳನ್ನಾಗಿ ಪರಿವರ್ತಿಸಿಕೊಂಡಿರುವ ಬಳ್ಳಾರಿಯಲ್ಲೀಗ ಕೋಟಿ ಲೆಕ್ಕದ ಗಂಟಿಲ್ಲದೇ ಚುನಾವಣೆಗಳನ್ನು ಊಹಿಸಿಕೊಳ್ಳುವ ಪರಿಸ್ಥಿತಿ ಇಲ್ಲ. ಗಣಿ ದಂಧೆಯ ಹೈ-ಫೈ ವಾತಾವರಣದಲ್ಲೂ ಈ ರಾಮ್‌ಪ್ರಸಾದ್ ಶುದ್ಧವಾಗಿ ಉಳಿದುಕೊಂಡಿರುವುದೇ ಹೆಮ್ಮೆಯ ವಿಷಯ.

ಬಳ್ಳಾರಿಯಲ್ಲಿ ರೆಡ್ಡಿಗಳ ಪ್ರಭಾವಕ್ಕೆ ತಡೆಹಾಕುವ ಉದ್ದೇಶದಿಂದ ಹಾಗೂ ಶ್ರೀರಾಮುಲುಗೆ ಪರ್ಯಾಯ ನಾಯಕನನ್ನಾಗಿ ಬಿಂಬಿಸಲು ಹೊಸಪೇಟೆಯ ಗಣಿ ಮಾಲೀಕರಿಬ್ಬರು ರಾಮ್‌ಪ್ರಸಾದ್ ಬೆನ್ನಿಗೆ ನಿಲ್ಲಲು ಸಜ್ಜಾಗಿದ್ದಾರೆ. ಎಲ್ಲವೂ ಅಂದುಕೊಂಡಂತೆ ನಡೆದರೆ ರಾಮ್ ಪ್ರಸಾದ್ ಮೋಕಾ ಕ್ಷೇತ್ರದಿಂದ ಕಾಂಗ್ರೆಸ್‌ನ ಅಭ್ಯರ್ಥಿಯಾಗಿ ಕಣಕ್ಕಿಳಿಯಬೇಕು.

ಕಾಂಗ್ರೆಸ ನಾಯಕಮಣಿಗಳು ರಾಂಪ್ರಸಾದ್‌ರಂತಹ ಉತ್ಸಾಹಿಗಳನ್ನು ಗುರುತಿಸಿದ್ದಲ್ಲಿ ಅದೊಂದು ಸೂಕ್ತ ರಾಜಕೀಯ ಆಯ್ಕೆಯಾದೀತು. ಜನಾಂಗದ ಬೆಂಬಲ ದೊರೆತಲ್ಲಿ ಅಂತಹ ಆಯ್ಕೆಯೂ ಸರಳವಾದೀತು.




**ಚಿ**ತ್ರದುರ್ಗ, ಬಳ್ಳಾರಿ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ವಾಲ್ಮೀಕಿ ಜನಾಂಗದವರನ್ನ ಬಿಜೆಪಿ ಗಣಿ ರೆಡ್ಡಿಗಳು ದುರುಪಯೋಗಪಡಿಸಿಕೊಳ್ಳುತ್ತಿರುವ ಕತೆ ಇದು. ರೆಡ್ಡಿಗಳ ಭಂಟ ಶ್ರೀರಾಮುಲು ಇದರ ಸೂತ್ರಧಾರ.


ಹೇಳಿಕೊಳ್ಳುವಂತಹ ರಾಜಕೀಯ ಹಿನ್ನೆಲೆಯೇನೂ ಇಲ್ಲದಿದ್ದ ಈ ರೆಡ್ಡಿ ಸಹೋದರರು ಬೆಳೆಯುತ್ತಾ ಬೆಳೆಯುತ್ತಾ ನುರಿತ ರಾಜಕೀಯ ಪಾಠಗಳನ್ನೇ ಕಲಿತಿದ್ದಾರೆ. ಮತ್ತದನ್ನು ಯಶಸ್ವಿಯಾಗಿ ಪ್ರಯೋಗಿಸುತ್ತಾ ಬಂದಿದ್ದಾರೆ. ತಮಗೆ ಬೇಕಾದವರನ್ನು ವೈಭವೀಕರಿಸುವ, ತಮಗಾಗದವರನ್ನು ಬಳಸಿ ಬಿಸಾಕುವ ಕಲೆಯನ್ನು ಚೆನ್ನಾಗಿ ರೂಢಿಸಿಕೊಂಡಿದ್ದಾರೆ.

ಕತ್ತೆ ನಾಗಣ್ಣ ಇವರ ಯೂಸ್ ಅಂಡ್ ಥ್ರೋ ಪಾಲಿಸಿಗೆ ಉತ್ತಮ ನಿದರ್ಶನ.

ಇವೊತ್ತು ಬಳ್ಳಾರಿ ಜೈಲಿನಲ್ಲಿ ದಿನಗಳೆಯುತ್ತಿರುವ ನಾಯಕ ಜನಾಂಗದ ಕತ್ತೆ ನಾಗಣ್ಣ ಒಬ್ಬ ಸಾಮಾನ್ಯ ಪಂಟರು. ವಯಸ್ಸು, ಹುಂಬತನ, ಮುಗ್ಧತೆಗಳ ಸಮ್ಮಿಶ್ರಣದಂತಿದ್ದ ನಾಗಣ್ಣ ಆಕಸ್ಮಿಕವಾಗಿ ಒಂದೆರಡು ಹೊಡೆದಾಟದ ಪ್ರಕರಣಗಳಲ್ಲಿ ಭಾಗಿಯಾಗಿ ರೌಡಿ ಇಮೇಜು ಗಳಿಸಿಕೊಂಡಿದ್ದವ. ಡಾ. ಮಲ್ಲಿ ಎಂಬಾತನ


ದುರ್ಗಿ


ನಾಗಮ್ಮ


ಚೀಮ

ಮೂಲಕ ಕ್ಲಬ್ ಒಂದನ್ನು ಸೇರಿಕೊಂಡು ಇಂತಹದ್ದೇ ಪ್ರಕರಣಗಳಲ್ಲಿ ಕಾಣಿಸಿಕೊಂಡ. ಮೂಲತಃ ಕಾಂಗ್ರೆಸ್ಸಿಗನಾಗಿದ್ದ ಡಾ. ಮಲ್ಲಿ ಈತನಿಗೆ ಸೀದಾ ದಿವಾಕರಬಾಬು ಮನೆಯ ದಾರಿ ತೋರಿಸಿದ. ಉಪಯೋಗಕ್ಕೆ ಬರಬಹುದಾದ ಹುಡುಗ ಅಂತ ದಿವಾಕರಬಾಬು ಹತ್ತಿರ ಕರೆದುಕೊಂಡರು.

ದಿವಾಕರಬಾಬು ಬೆಂಬಲಿಗರಲ್ಲೊಬ್ಬನಾಗಿ ಗುರುತಿಸಿಕೊಂಡ ನಾಗಣ್ಣ ಹೊಡೆದಾಟ ಬಡಿದಾಟಗಳನ್ನು, ಚುನಾವಣೆಯ ಆಗುಹೋಗುಗಳನ್ನು ಯಶಸ್ವಿಯಾಗಿ ನಿಭಾಯಿಸುತ್ತಿದ್ದ. ಹೀಗಿದ್ದರೂ ಈತ ವಾಸವಿದ್ದದ್ದು ಗುಡಿಸಲು ಮನೆಯಲ್ಲೇ. ಸಣ್ಣಪುಟ್ಟ ಪಂಚಾಯಿತಿಗಳು, ಹಾಕ್ಯಾಟಗಳನ್ನು ಮಾಡಿಕೊಂಡರೂ ಹೇಳಿಕೊಳ್ಳುವಂತಹ ಸಂಪಾದನೆಯನ್ನೇನೂ ಮಾಡಿದವನಲ್ಲ. ಅಲ್ಲಿಷ್ಟು ಇಲ್ಲಿಷ್ಟು ಬಂದದ್ದು ಮನೆಯ ರೇಷನ್ನು, ಸ್ನೇಹಿತರೊಂದಿಗೆ ಮಜಾ ಮಾಡಲಿಕ್ಕಷ್ಟೆ ಸಾಕಾಗುತ್ತಿತ್ತು.

ತನಗೆ ನಿಷ್ಠನಾಗಿದ್ದ ನಾಗಣ್ಣನ ಕುಟುಂಬಕ್ಕೆ ಯಾವುದೇ ಕೊರತೆಯಾಗದಂತೆ ದಿವಾಕರ ಬಾಬು ನೋಡಿಕೊಳ್ಳುತ್ತಿದ್ದರು. ನಾಗಣ್ಣ ಇರಲಿ ಬಿಡಲಿ ನಾಗಣ್ಣನ ಕುಟುಂಬದ ಸದಸ್ಯರ್‍ಯಾರೇ ಹೋದರೂ ದಿವಾಕರಬಾಬು ಅವರನ್ನು ಗೌರವದಿಂದ ಮಾತನಾಡಿಸಿ ರೇಷನ್ನೋ ಅಥವಾ ಹಣವನ್ನೋ ಕೊಟ್ಟು ಕಳುಹಿಸುತ್ತಿದ್ದರು. ಇದೇ ಕಾರಣಕ್ಕೆ ನಾಗಣ್ಣ ದಿವಾಕರ ಬಾಬು ವಿಚಾರದಲ್ಲಿ ಪ್ರಶ್ನಾತೀತ ನಿಷ್ಠೆಯನ್ನಿರಿಸಿಕೊಂಡಿದ್ದ. ನೋಡುನೋಡುತ್ತಲೇ ತಾನಿರುವ ಏರಿಯಾದಲ್ಲಿ ಯುವಕರ ಡಾನ್ ಆದ.


ಕತ್ತೆ ನಾಗಣ್ಣ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಭಾರೀ ಪ್ರಚಾರದೊಂದಿಗೆ ರಾಜಕೀಯ ಅಖಾಡಕ್ಕಿಳಿದಿದ್ದ ಗಣಿರೆಡ್ಡಿ ಸಹೋದರರು ಬಳ್ಳಾರಿ ನಗರದೆಲ್ಲೆಡೆ ಬಿಜೆಪಿಯನ್ನು ವಿಜೃಂಭಿಸುವ ಉಮೇದಿಯಲ್ಲಿದ್ದರು. ನಗರದಲ್ಲೆಲ್ಲಾ ಬಿಜೆಪಿಯ ಬ್ಯಾನರುಗಳು, ಬಂಟಿಂಗುಗಳು ಹಾರಾಡುತ್ತಿದ್ದರೆ ಕಪ್ಪಗಲ್ ರಸ್ತೆಯ ಕತ್ತೆ ನಾಗಣ್ಣನ ಏರಿಯಾದಲ್ಲಿ ಮಾತ್ರ ಬಿಜೆಪಿ ಬ್ಯಾನರು ಬಂಟಿಂಗುಗಳ ಅಡ್ರೆಸ್ಸೇ ಇರಲಿಲ್ಲ. ಎಲ್ಲಿ ನೋಡಿದರೂ ಕಾಂಗ್ರೆಸ್ ಬ್ಯಾನರುಗಳೇ. ಬ್ಯಾನರು ಬಂಟಿಂಗುಗಳನ್ನು ಕೊಂಡೊಯ್ದಿದ್ದ ಬಿಜೆಪಿ ಹುಡುಗರು ಅಸಹಾಯಕರಾಗಿ ರೆಡ್ಡಿಗಳ ಮುಂದೆ ನಿಂತು ಕತ್ತೆ ನಾಗಣ್ಣ ಯಾವುದಕ್ಕೂ ಅವಕಾಶ ಕೊಡುತ್ತಿಲ್ಲ ಅಂತ ಕೈ ಚೆಲ್ಲಿದರು.

**ವಾಲ್ಮೀಕಿ ಜನಾಂಗದವರ ದೌಟು**

ನಾಗಣ್ಣನ ಪೂರ್ವಾಪರ ತಿಳಿದಿದ್ದ ರೆಡ್ಡಿ ಸಹೋದರರು ಬಿಜೆಪಿಯ ರುದ್ರ ಮತ್ತು ಸತ್ಯ ಎಂಬಿಬ್ಬರನ್ನು ನಾಗಣ್ಣನೊಂದಿಗೆ ಡೀಲ್ ಮಾಡಲು ಕಳುಹಿಸಿದರು. ಈ ಇಬ್ಬರೂ ನಾಗಣ್ಣನ ಹತ್ತಿರ ಬಂದು 'ನಿನಗೆ ಏನು ಸವಲತ್ತು ಬೇಕೋ ಕೇಳು, ಎಲ್ಲಾ ಕೊಡಿಸ್ತೀವಿ. ಜನಾರ್ದನ ರೆಡ್ಡಿಯವರತ್ರ ಹೋಗೋಣ ಬಾ' ಅಂತ ದುಂಬಾಲು ಬಿದ್ದಿದ್ದಾರೆ. ಇದಕ್ಕೆ ಸುತರಾಂ ಬಗ್ಗದ ನಾಗಣ್ಣ ಆರಂಭದಲ್ಲಿ ತಾನು ಬಿಜೆಪಿಗೆ ಸಪೋರ್ಟ್ ಮಾಡಲ್ಲ ಅಂತ ಹಠ ಹಿಡಿದಿದ್ದಾನೆ.

ಹೇಗಾದರೂ ನಾಗಣ್ಣನನ್ನು ಡೀಲ್ ಮಾಡುವ ಜವಾಬ್ದಾರಿ ಹೊತ್ತಿದ್ದ ರುದ್ರ ಮತ್ತು ಸತ್ಯ ಎಡೆಬಿಡದೇ ಕಾಡಿ ಜನಾರ್ದನರೆಡ್ಡಿ ಜೊತೆ ಮಾತುಕತೆಗೆ ಬಾ ಅಂತ ಪುಸಲಾಯಿಸಿದ್ದಾರೆ. ಅದೊಂದು ದಿನ ರಾತ್ರಿ 11 ಗಂಟೆಗೆ ನಾಗಣ್ಣ ಮತ್ತವನ ಬೆಂಬಲಿಗರನ್ನು ಕರೆದುಕೊಂಡು ಜನಾರ್ದನ ರೆಡ್ಡಿ ಬಳಿ ಹೋಗಿದ್ದಾರೆ. ಆಗ ನಡೆದ ಮಾತುಕತೆಯಲ್ಲಿ ನಾಗಣ್ಣನಿಗೆ 60 ಸಾವಿರ ಕ್ಯಾಷ್‌ಕೊಟ್ಟು ಮನೆ ಕಟ್ಟಿಸಿಕೊಡುವ ಭರವಸೆ ನೀಡಿದ್ದಾರೆ. ತನ್ನದೇ ಜಾತೀಯ ಶ್ರೀರಾಮುಲು ಒತ್ತಾಸೆ ಬೇರೆ ಇದ್ದುದ್ದರಿಂದ ನಾಗಣ್ಣ ಇದಕ್ಕೆ ಒಪ್ಪಿಕೊಂಡಿದ್ದಾನೆ.


ಮಾತುಕತೆಯ ನಂತರ ನಾಗಣ್ಣನ ಮನೆ ಏರಿಯಾದಲ್ಲಿ ಬಿಜೆಪಿಯ ಬ್ಯಾನರು ಬಂಟಿಂಗುಗಳನ್ನು ಎಲ್ಲೆಂದರಲ್ಲಿ ಕಟ್ಟಿದ್ದಾರೆ. ಮತ್ತೊಂದು ಕಡೆ ನಾಗಣ್ಣ ರೆಡ್ಡಿಗಳಿಂದ ಹಣ ಪಡೆಯುತ್ತಿರುವ ಫೋಟೋ ದಿವಾಕರ ಬಾಬು ಕೈ ಸೇರುವಂತೆ ನೋಡಿಕೊಂಡಿದ್ದಾರೆ. ವಿಷಯ ತಿಳಿದ ದಿವಾಕರ ಬಾಬು ನಾಗಣ್ಣನನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಅವರ ಜೊತೆ ಶಾಮೀಲಾಗಿ ಮೋಸ ಮಾಡ್ತೀಯಾ ಅಂತಾ ಬೈಯ್ದಿದ್ದಾರೆ.

ಕೊನೆಗೆ ಚುನಾವಣೆಯಲ್ಲಿ ನಾಗಣ್ಣ ಬಿಜೆಪಿ ಪರವಾಗಿ ಕೆಲಸ ಮಾಡಿದರೆ ಅವನ ಅಕ್ಕ ನಾಗಮ್ಮ ಕಾಂಗ್ರೆಸ್ ಪರವಾಗಿ ಕೆಲಸ ಮಾಡಿದ್ದಾರೆ. ಆದರೆ ಚುನಾವಣೆಯ ನಂತರ ರೆಡ್ಡಿಗಳಾಗಲೀ, ಶ್ರೀರಾಮಲು ಆಗಲೀ ನಾಗಣ್ಣನನ್ನು ಕ್ಯಾರೇ ಅಂದಿಲ್ಲ. ಇದೆಲ್ಲ ಬೆಳವಣಿಗೆಗಳ ನಡುವೆ ಹೊಸ ಮನೆಗೆ ಫೌಂಡೇಶನ್ ಹಾಕಿಸಿದ ನಾಗಣ್ಣನಿಗೆ ಹೊಸಪೇಟೆಯ ಕೇಸೊಂದರಲ್ಲಿ ವಾರೆಂಟ್ ಆಗಿ ವಿಪರೀತ ಟೆನ್ಷನ್ ಆಗುತ್ತಿದ್ದ. ಆಗಾಗ ಪೊಲೀಸರ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಿದ್ದ.


ನಾಗಣ್ಣನ ಮನೆ

ನಾಗಣ್ಣನ ಸ್ನೇಹಿತರಲ್ಲೊಬ್ಬನಾದ ಚಂದ್ರು ಎಂಬಾತ ...ನೆಕಟ್ಟಿಸಿಕೊಂಡು ಗೃಹ ಪ್ರವೇಶಕ್ಕಾಗಿ ರೇಷನ್ ...ನೀಡಿಸಲು ಹಣವಿಲ್ಲದೇ ಹೆಣಗಾಡುತ್ತಿದ್ದ. ಆಗ ಅದೇ ...ರಿಯಾದ ಅಂಗಡಿ ರಾಜು ಬಳಿ ಹೋಗಿ ನಾಗಣ್ಣನ ...ಸರು ಹೇಳಿ ರೇಷನ್ ಕೇಳಿದ್ದಾನೆ. ಅಂಗಡಿ ರಾಜು ...ಾರ ಹೆಸರು ಹೇಳಿದರೂ ರೇಷನ್ ಕೊಡೊಲ್ಲ ...ಂದಿದ್ದಾನೆ. ಚಂದ್ರು ಮೇಲಿಂದ ...ೀಲೆ ನಾಗಣ್ಣನ ಹತ್ತಿರ ಬಂದು ...ಷ್ಟೆ ಹೆಸರು ಹೇಳಿದ್ರೂ ರೇಷನ್ ...ಡೊಲ್ಲ ಅಂತಾ ಪ್ರಚೋದಿಸಿದ್ದಾನೆ. ...ನ್ಯಾದರೂ ನಾಗಣ್ಣ ತಲೆಕೆಡಿಸಿ ...ಳ್ಳದೇ ತನ್ನ ಪಾಡಿಗೆ ತಾನಿದ್ದಾನೆ.

ಚಂದ್ರು ಕೊನೆ ಅಸ್ತ್ರವಾಗಿ ...ಗಣ್ಣನ ಅಳಿಯಂದಿರಿಬ್ಬರನ್ನು ...ರಿದಂತೆ ನಾಲ್ಕೈದು ಜನರಿಗೆ ...ಡಿಸಿ ಅಂಗಡಿ ರಾಜ ಎಂಬಾತನ ...ೀಲೆ ಛೂಬಿಟ್ಟಿದ್ದಾನೆ. ಅಂದಿನ ...ಾಟೆಯಲ್ಲಿ ಯಾರ ಹೊಡೆತ ...ತ್ತೋ ಅಂತೂ ಅಂಗಡಿ ರಾಜ ...ಬಾತ ಸತ್ತು ಹೋಗಿದ್ದಾನೆ.



ಪೊಲೀಸರು ಅಳಿಯಂದಿರನ್ನು ಬಿಟ್ಟು ಕೊಲೆ ...ಾಡಿಸಿದ್ದೀಯ ಅಂತ ಕೇಸಿನಲ್ಲಿ ನಾಗಣ್ಣನನ್ನು ಫಿಟ್ ...ಾಡಿ ಅತ್ಯಂತ ಅಮಾನವೀಯವಾಗಿ ಥಳಿಸಿದ್ದಾರೆ. ...ಲೀಸರು ದವಡೆಯ ಮೂಳೆ ಹತ್ತಿರ ಹೊಡೆದ ...ಡೆತಕ್ಕೆ ನಾಗಣ್ಣ ಸತತ ಒಂದು ತಿಂಗಳ ಕಾಲ ...ೀ ದ್ರವಾಹಾರ ಸೇವನೆ ಮಾಡುತ್ತಿದ್ದ. ಕೈ ಕಾಲುಗಳು ...ದಾಡಲು ಆಗದಷ್ಟು ಹೊಡೆದು ನಿತ್ರಾಣಗೊಂಡಿದ್ದ ...ಗಣ್ಣನನ್ನು ಸರ್ಕಾರಿ ಆಸ್ಪತ್ರೆಯ ಒ.ಪಿ.ಡಿ.ಗೆ ಹಾಕಿದ್ದಾರೆ. ...ಗಣ್ಣನ ಸ್ಥಿತಿಯನ್ನು ಕಂಡು ಹೆಂಡತಿ ದುರ್ಗಿ, ಅಕ್ಕ ...ಗಮ್ಮ, ತಂಗಿ ದುರ್ಗಮ್ಮ ಎದೆಯೊಡೆದುಕೊಂಡು ...ತ್ತಿದ್ದಾರೆ. ಅದೇ ದುಃಖದಲ್ಲಿ ಹೋಗಿ ಶ್ರೀರಾಮುಲು ...ನ್ನ ಭೇಟಿಮಾಡಿ ಡಾಕ್ಟರ್‌ಗೆ ಚೆನ್ನಾಗಿ ನೋಡಿಕೊಳ್ಳಲಿಕ್ಕೆ ...ಳಿ ಅಂತ ಗೋಗರೆದಿದ್ದಾರೆ. ಆದರೆ ಶ್ರೀರಾಮುಲು ...ಾವುದಕ್ಕೂ ತಲೆಕೆಡಿಸಿಕೊಂಡಿಲ್ಲ.


...ಮನೆಯಲ್ಲಿ ಗಂಡು ಮಕ್ಕಳೆಂಬುವವರೇ ಇಲ್ಲದ ...ಸ್ಥಿತಿಯಲ್ಲಿ ಈ ಹೆಣ್ಣುಮಕ್ಕಳು ಅಲ್ಲಿ ಇಲ್ಲಿ ಕೆಲಸ ...ಾಡಿ ಜೀವನ ನಡೆಸಿದ್ದಾರೆ. ಕೌಟುಂಬಿಕ ...ರ್ವಹಣೆಯೇ ಕಷ್ಟವಾಗಿ ಅಷ್ಟೋ ಇಷ್ಟೋ ಹಣ ...ಾಯ ಪಡೆಯಲು ಶ್ರೀರಾಮುಲು ಮನೆಗೆ ಚಪ್ಪಲಿ ಸವೆಯುವಂತೆ ಅಲೆದು ಅಲೆದು ಸಾಕಾಯಿತು. ವಿಪರ್ಯಾಸವೆಂದರೆ ಅಂಗಡಿರಾಜು ಕೊಲೆ ಪ್ರಕರಣದ ಪ್ರಮುಖ ಕಾರಣಕರ್ತನಾದ ಚಂದ್ರು ಆರಂಭದಲ್ಲೇ ಪೊಲೀಸರಿಗೆ ಲಂಚ ಕೊಟ್ಟು ಬಚಾವಾಗಿದ್ದ. ಚುನಾವಣೆಯಲ್ಲಿ ತಮ್ಮ ಪರವಾಗಿ ನಾಗಣ್ಣನನ್ನು ಚೆನ್ನಾಗಿ ಬಳಸಿಕೊಂಡ ರೆಡ್ಡಿಗಳಾಗಲೀ ಶ್ರೀರಾಮುಲು ಆಗಲಿ ಆತನ ಬಿಡುಗಡೆಗೆ ಸಹಕರಿಸಿಲ್ಲ.

ಇಷ್ಟೆಲ್ಲ ಆದರೂ ನಾಗಣ್ಣನಂತವರ ಕುರುಡು ಸ್ವಾಮಿನಿಷ್ಠೆ. ಹೇಗಿರುತ್ತೆ ನೋಡಿ. ಮೊನ್ನೆ ನಡೆದ ಕಾರ್ಪೊರೇಷನ್ ಚುನಾವಣೆಯ ಸಮಯದಲ್ಲಿ ಬೆಳಗಾಂ ಜೈಲಿನಲ್ಲಿದ್ದ ನಾಗಣ್ಣನನ್ನು, ನಾಗಣ್ಣನ ಬಾವ ಮೈದ ನಾರಾಯಣನ ಮೂಲಕ ಜೆಡಿಎಸ್‌ಗೆ ಸಪೋರ್ಟ್ ಮಾಡಬೇಕೆಂಬ ಪ್ರಸ್ತಾಪವನ್ನು ದೇಗುಲಪಾಡು ನಾರಾಯಣಪ್ಪ ಕಳುಹಿಸಿದ. ಆದರೆ ನಾಗಣ್ಣ "ನಾನು ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ಬಂದಿದ್ದೇನೆ. ಈಗ ಮತ್ತೆ ಬಿಜೆಪಿ ಬಿಟ್ಟು ಜೆಡಿಎಸ್ ಸೇರಿದರೆ ಜನ ನನ್ನನ್ನು ನಂಬುವುದಿಲ್ಲ" ಅಂತ ತಿರಸ್ಕರಿಸಿದ್ದಾನೆ. ಹೆಂಡತಿ ದುರ್ಗಿ, ಅಕ್ಕ ನಾಗಮ್ಮನವರಿಗೆ ಬಿಜೆಪಿಯ ಪರವಾಗಿಯೇ ಕೆಲಸ ಮಾಡಬೇಕೆಂದು ಹೇಳಿ ಕಳುಹಿಸಿದ್ದಾನೆ. ಏನು ಮಾಡಿದರೂ ಪ್ರಯೋಜನವಾಗಿಲ್ಲ.

ಅದೇಗೋ ಕಾಸಿಗೆ ಕಾಸು ಜೋಡಿಸಿ ಹೆಂಡತಿ ದುರ್ಗಿ, ಅಕ್ಕ ನಾಗಮ್ಮ ಸೇರಿ ಶೀಟಿನ ಮನೆಯೊಂದನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ದೊಡ್ಡ ಕ್ರಿಮಿನಲ್ ಎಂದು ಹೇಳಲ್ಪಡುವ ನಾಗಣ್ಣ ಜೈಲಿನಿಂದ ತನ್ನ ಹೆಂಡತಿಗೆ ಬರೆದ ಪತ್ರಗಳಲ್ಲೆಲ್ಲಾ "ದೇವರೇ, ಜನ್ಮ ಜನ್ಮದಲ್ಲೂ ದುರ್ಗಿಯೇ ನನ್ನ ಹೆಂಡತಿಯಾಗಿರಲಿ, ಶೈಲು, ಸಂಧ್ಯಾ, ಪ್ರೇಮ್‌ಕುಮಾರ್ ನನ್ನ ಮಕ್ಕಳಾಗಿರಲಿ ಎಂದು ಹಾರೈಸು..... ಕಾಪಾಡು.... " ಅಂತ ಮೊರೆಯಿಟ್ಟು ಹತ್ತಿಪ್ಪತ್ತು ಪತ್ರಗಳನ್ನು ಬರೆದಿದ್ದಾನೆ.

'ಶ್ರೀರಾಮುಲು ಮನೋಡು' ಎಂಬ ಹುಂಬತನದಿಂದ ರೆಡ್ಡಿ ಸಹೋದರರ ರಾಜಕೀಯ ದಾಳಕ್ಕೆ ಬಳಕೆಯಾಗುತ್ತಿರುವ ನಾಯಕ ಜನಾಂಗದ ಯುವಕರು ಒಮ್ಮೆ ಯೋಚಿಸಿ ನಿರ್ಧಾರ ಕೈಗೊಳ್ಳಬೇಕು. ■

# ರೆಡ್ಡಿಗಳಿಗೆ ಟಾಟಾ ಹೇಳುತ್ತಿರುವ ನಾಗೇಂದ್ರ



ಬಳ್ಳಾರಿಯ ಗಣಿ ರೆಡ್ಡಿಗಳು ತಾವೇ ಯಾರನ್ನು ...ಾಜಕೀಯವಾಗಿ ಬೆಳೆಸಿದ ಉದಾಹರಣೆಗಳು ಕಡಿಮೆ. ಇವತ್ತು ...ಗಣಿ ರೆಡ್ಡಿಗಳ ಸುತ್ತ ಜಮಾವಣೆಗೊಂಡಿರುವ ಹಿರಿ-ಕಿರಿ ...ಾಯಕಮಣಿಗಳು, ಬೆಂಬಲಿಗರೆಲ್ಲಾ ಅನಾಮತ್ತಾಗಿ ಬೇರೆ ...ಕ್ಷದಿಂದ ಖರೀದಿ ಮಾಡಲ್ಪಟ್ಟವರಾಗಿದ್ದಾರೆ. ಇಂತಹವರಲ್ಲೊಬ್ಬ ...ಎ. ನಾಗೇಂದ್ರ. ಈತ ಮೂಲತಃ ದಿವಾಕರ ಬಾಬು ಬಲಗೈ ...ಬಂಟನಾಗಿದ್ದವ. ಬಳ್ಳಾರಿಯ ಕೇಬಲ್‌ವಾರ್‌ನಲ್ಲಿ ಕೊಲೆಗೀಡಾದ ಹರಿಪ್ರಸಾದ್ ಎಂಬಾತನ ಎಫ್.ಐ.ಆರ್.ನಲ್ಲಿ ...ಈತನ ಹೆಸರು ಮೊದಲನೆಯದಾಗಿತ್ತು.

ಆರ್ಥಿಕವಾಗಿ ಸಂಕಷ್ಟದಲ್ಲಿದ್ದ ಈತನನ್ನು ಶ್ರೀರಾಮುಲು ಮೂಲಕವೇ ದೀಲು ಕುದುರಿಸಿ ಬಿಜೆಪಿಗೆ ...ೇರ್ಪಡೆ ಮಾಡಿಕೊಂಡರು. ರೆಡ್ಡಿಗಳ ಬಲಗೈ ಬಂಟನಾಗಿ ಬೆಳೆದ ಈತ ಎಲ್ಲೆಂದರಲ್ಲೇ ನೂರಾರು ...ಯುವಕರನ್ನು ಆಣಿನೆರೆಸಿ ರೆಡ್ಡಿಗಳ ರಾಜಕೀಯಕ್ಕೆ ಖದರು ತುಂಬುತ್ತಿದ್ದ. ಇಂತಹ ನಾಗೇಂದ್ರ ಗಣಿ ದಂಧೆ ...ಡೆಸಿ ಕಾಸಿನ ಗಂಟುಮಾಡಿಕೊಂಡ. ಈಗ ಏನಿಲ್ಲವೆಂದರೂ ಹದಿನೈದಿಪ್ಪತ್ತು ಕೋಟಿ ಆಸಾಮಿಯಾಗಿದ್ದಾನೆ.

ಯಾವಾಗ ತನಗೊಂದು ಅಂತಸ್ತು ಬಂತೋ ಆಗಿನಿಂದ ದೋ ನಂಬರ್ ದಂಧೆಗಳಿಂದ ದೂರಸರಿದು ...ಜನಸಂಪರ್ಕವನ್ನು ಹೆಚ್ಚಿಸಿಕೊಂಡ. ಜೊತೆಗೆ ರಾಜಕೀಯಾಕಾಂಕ್ಷೆಯನ್ನೂ. ಈಗ ಈತ ಚುನಾವಣಾ ...ಅಖಾಡಕ್ಕಿಳಿಯಲು ಸಜ್ಜಾಗಿದ್ದಾನೆ. ಈತನ ಬೆಳವಣಿಗೆಯ ತೀವ್ರತೆ ಸ್ವತಃ ಶ್ರೀರಾಮುಲು ಹಾಗೂ ...ಗಣಿಸಹೋದರರಿಗೂ ದಿಗಿಲು ಹುಟ್ಟಿಸಿದೆ.

ನಿನ್ನೆಮೊನ್ನೆ ತನಕ ಮೋಕಾ ಕ್ಷೇತ್ರದಿಂದ ಟಿಕೆಟ್ ನೀಡುವುದಾಗಿ ಹೇಳುತ್ತಿದ್ದ ರೆಡ್ಡಿ ಸಹೋದರರು ಈಗ ...ಎತ್ತುವ ಸೂಚನೆ ನೀಡಿದ್ದಾರಂತೆ. ಹಾಗಾಗಿ ನಾಗೇಂದ್ರ ರೆಡ್ಡಿ ಸಹೋದರರ ಕ್ಯಾಂಪನ್ನು ತೊರೆದು ಹಳೇ ...ಗುರು ದಿವಾಕರ ಬಾಬು ಜೊತೆ ಜೆಡಿಎಸ್ ಸೇರಿದರೂ ಆಶ್ಚರ್ಯಪಡಬೇಕಿಲ್ಲ.

ನಾಗಣ್ಣನಂತಹ ಸಾಮಾನ್ಯ ಪಂಟರನಾಗಿರಲಿ, ನಾಗೇಂದ್ರನಂತಹ ಕೋಟ್ಯಾಧೀಶನಾಗಿರಲಿ ತಮ್ಮ ನೆರಳಿನ ...ವ್ಯಕ್ತಿಯನ್ನು ಮೀರಿ ಬೆಳೆಯುವವರ ಬಗ್ಗೆ ರೆಡ್ಡಿ ಸಹೋದರರು ಎಂತಹ ಧೋರಣೆ ತಳೆಯುತ್ತಾರೆ ...ಎಂಬುದಕ್ಕೆ ಇದೊಂದು ನಿದರ್ಶನ ಅಷ್ಟೆ.

# ಜೆಡಿಎಸ್ ಕ್ಯಾಂಡೇಟ್ ಹೋರಲ್ ಎಗ್ಸಾಂ ಮುಗಿತಂತೆ

ಮನೆಯಲ್ಲಿಯೇ ಒಬ್ಬ ಅರಳುಮರಳು ಆಸಾಮಿಯನ್ನು ಅನಿವಾರ್ಯವಾಗಿ ಸಾಕುತ್ತಿರುವ ಕುಮಾರಸ್ವಾಮಿ "ಎಸ್ಸೆಂ ಕೃಷ್ಣ ಅರಳು ಮರಳಿನ ಗಿರಾಕಿ" ಎಂದಿದ್ದಾರಂತಲ್ಲಾ, ಇದರಿಂದ ಗಲಿಬಿಲಿಯಾಗಿರುವ ಕೃಷ್ಣ ಅವುಡುಗಚ್ಚಿ "ಇದೇನು ಹೀಗಾಗುತ್ತಿದೆಯಲ್ಲಾ, ನಾನು ನನ್ನ ವಾರಿಗೆಯ ದೇವೇಗೌಡರ ವಿರುದ್ಧ ರಾಜಕಾರಣ ಮಾಡಲು ಬೊಂಬಾಯಿ ಬಿಟ್ಟು ಬಂದೆ. ಆದರೆ ಇಲ್ಲಿ ದೇವೇಗೌಡ ಬಾಯಿ ಹೊಲಿದುಕೊಂಡಂತೆ ಇದ್ದು ಆತನ ಅಪ್ರಬುದ್ಧ ಮಗ ಅಸಂಬದ್ಧವಾಗಿ ನನಗೇ ಅರಳುಮರಳು ಎನ್ನುತ್ತಿದ್ದಾನಲ್ಲ, ನಾನು ಯಾರಿಗೆ ಉತ್ತರ ಕೊಡಲಿ?" ಎಂದು ಸುತ್ತಲೂ ನೋಡಿದರಂತಲ್ಲಾ, ಕೂಡಲೇ ಡಿ.ಕೆ. ಶಿವಕುಮಾರ್ "ನೀವೇನು ಯೋಚನೆ ಮಾಡಬೇಡಿ ಸಾರ್. ಈ ಲೌಡಿಗಂಡ್ರ ನಾನೇ ವಿಚಾರಿಸಿಗೊಳ್ತಿನಿ. ನೀವು ಈ ಕೂಡಲೆ 'ನಮ್ಮ ಕಾಲದಲ್ಲಿ ಎಷ್ಟು ಭೂಮಿ ಹಗರಣ ನಡೆದಿದೆ, ಇವರು ಅಪ್ಪ ಮಕ್ಕಳ ಕಾಲದಲ್ಲಿ ಎಷ್ಟು ನಡೆದಿದೆ ಅನ್ನೋ ತನಿಖೆನೆ ನಡೆಯಲಿ ಅನ್ನೊ ಹೇಳಿಕೆ ಕೊಡಿ. ಉಳದದ್ದ ನಾನು ನೋಡಕತ್ತಿನ' ಎಂದರಂತಲ್ಲಾ, ಥೂತ್ತೇರಿ!

## ಥೂತ್ತೇರಿ


ಯಾಹೂ

*****

ಬೆಂಗಳೂರು ಸುತ್ತಮುತ್ತ ಭೂಕಬಳಿಕೆ ದೂರುಗಳ ಗುದುಮುರಿಗೆ ಸಿಕ್ಕಿರುವ ಕೃಷ್ಣ ಮತ್ತು ದೇವು ಕುಟುಂಬದ ಬೀದಿ ಜಗಳ ನೋಡಿದ ದಳದ ಗುಲಾಮಿ ಸಂತತಿ "ಈ ವಿಷಯದಲ್ಲಿ ತನಿಖೆಯಾದರೆ ಕುಮಾರಸ್ವಾಮಿಯೇ ಗೆಲ್ಲುವುದು" ಎಂದು ಬೆಟ್ ಕೂಡ ಕಟ್ಟಲು ತಯಾರಾಗಿವೆಯಂತಲ್ಲಾ. ಅದ್ಹೇಗೆ ಗೆಲ್ಲುತ್ತಾರೆಂದು ಕಾರಣ ಕೇಳಲಾಗಿ "ದೇವೇಗೌಡರ ಅಷ್ಟೂ ಆಸ್ತಿ ಮಕ್ಕಳು ಪಾಲಾಗಿವೆ. ಹೆಣ್ಣುಮಕ್ಕಳು ಕಾಂಪ್ಲೆಕ್ಸ್ ಖರೀದಿಸಿವೆ. ಗಂಡುಮಕ್ಕಳು ಭೂಖರೀದಿ ಮಾಡಿವೆ. ಪಾಲಾದ ಮೇಲೆ ಖರೀದಿ ಮಾಡಿರುವ ಜಮೀನಿಗೂ, ಕುಮಾರಸ್ವಾಮಿ ಆಡಳಿತದ ಭೂಹಗರಣಕ್ಕೂ ಯಾವುದೇ ಸಂಬಂಧವಿಲ್ಲ. ಕುಮಾರಸ್ವಾಮಿ ಎಷ್ಟು ಭೂಮಿ ಖರೀದಿಸಿದ್ದಾರೆ? ಎಸ್ಸೆಂ ಕೃಷ್ಣ ಮತ್ತವರ ಅಳಿಯ ಸಿದ್ಧಾರ್ಥ ಆಸ್ತಿಯೆಷ್ಟು? ಡಿಕೆಶಿ ಆಸ್ತಿ ಎಷ್ಟು? ಎಂಬ ತನಿಖೆಯಲ್ಲಿ ಕುಮಾರಣ್ಣನೇ ಗೆಲ್ಲುತ್ತಾರೆ. ಏಕೆಂದರೆ ಅನಿತಕ್ಕನ ಆಸ್ತಿಗೂ, ಕುಮಾರಣ್ಣನ ಆಸ್ತಿಗೂ ಸಂಬಂಧವೇ ಇಲ್ಲ" ಎಂದು ವಾದಿಸತೊಡಗಿವೆಯಂತಲ್ಲಾ, ಥೂತ್ತೇರಿ!!

* * * * *

ಕುಮಾರಸ್ವಾಮಿ ಹೇಳುವ ಅರಳುಮರಳಿಗೆ ಪಕ್ಕಾ ತುತ್ತಾಗಿರುವವರೆಂದರೆ ಪಾಟೀಲ ಪುಟ್ಟಪ್ಪ ಎಂದು ಕೆಲವು ಸೋಷಲಿಸ್ಟ್ ಮಾಧ್ವ ಹೈಕಳು ಆರೋಪಿಸುತ್ತಿವೆಯಂತಲ್ಲಾ. ಅವುಗಳ ಆರೋಪಕ್ಕೆ ಒದಗಿಸುವ ಸಕಾರಣವೆಂದರೆ "ಈ ಪಾಟೀಲ ಪುಟ್ಟಪ್ಪ ಸಮಾಜವಾದಿಗಳು ಮಾಡಿಕೊಂಡಿರುವ ಆಸ್ತಿ ಪಟ್ಟಿ ಮಾಡುವ ಮೊದಲು ಅನಂತಮೂರ್ತಿಯವರ ಆಸ್ತಿಗೇ ಕೈಯಾಕಿದ್ದಾರೆ. ಅನಂತಮೂರ್ತಿ ಆಸ್ತಿಯಿರುವುದು ಮೂರೇ ಜಾಗದಲ್ಲಿ. ಆ ಮೂರು ಬಹು ಮುಖ್ಯವಾದ ಸ್ಥಾನದಲ್ಲಿವೆ. ಅದಕ್ಕೆ ದಾಖಲೆಯನ್ನು ಕೊಡುತ್ತಾರೆ. ಸಂಬಂಧಿಸಿದ ಆಸ್ತಿ ಅವರ ಶ್ರಮದಿಂದಲೇ ಪಡೆದಿರುವಂತದ್ದು. ಆದರೆ ಈ ಪಾಟೀಲ ಪುಟ್ಟಪ್ಪನ ಮಗ ರತಿವಿಜ್ಞಾನದಂತಹ ಪತ್ರಿಕೆ ಪ್ರಿಂಟ್ ಮಾಡಿ, ಅದರಲ್ಲಿ ಅಪ್ಪನಿಗೂ ಹುಬ್ಬಳ್ಳಿಯ ಮಿರ್ಚಿ ಮತ್ತು ಟೀ ಕುಡಿಸಿದ್ದಾನಲ್ಲಾ. ಆ ಬಗ್ಗೆ ಪಿಟೀಲು ಪುಟ್ಟಪ್ಪನವರೇ ವಿವರಣೆ ಕೊಡುವುದೊಳಿತು" ಎಂಬ ಪಟ್ಟು ಹಾಕಿದ್ದಾರಂತಲ್ಲಾ, ಥೂತ್ತೇರಿ!!




* * * * *

ಜೆಡಿಎಸ್ ಪಾರ್ಟಿಯ ಟಿಕೆಟ್ ಆಕಾಂಕ್ಷಿಗಳ ಪೈಕಿ ಹಲವರ ಹೋರಲ್ ಎಗ್ಸಾಂ ಮುಗಿದಿದೆಯಂತಲ್ಲಾ, ಅಂತವರ ಅಂತಿಮ ಪಟ್ಟಿ ಮಿರಾಜುದ್ದೀನ್ ಪಟೇಲ್ ಕಡೆಯಿಂದ ಕುಮಾರಸ್ವಾಮಿ ಕೈ ಸೇರಿ, ಸಹಿ ಪಡೆದು, ಮೃತ್ಯುಂಜಯ ಹೋಮದೆದುರು ಕುಳಿತ ದೇವು ಕೈ ಸೇರಿದೆಯಂತಲ್ಲಾ, ಮಿರಾಜುದ್ದೀನ್ ನಡೆಸಿದ ಹೋರಲ್ ಎಗ್ಸಾಂನ ಕೆಲ ಮಾದರಿ ಪ್ರಶ್ನೆಗಳು ಲೀಕ್ ಆಗಿ ಬಿಟ್ಟಿದ್ದು ಅವು ಹೀಗಿವೆಯಂತಲ್ಲಾ...

ಮಿರಾಜುದ್ದೀನ್ ಪ್ರಶ್ನೆ:

"ನಿಮ್ದು ಯಾವ್ದು ವರ್ಗ?"

"ಎಂ. ಅಂಡ್ ಎಂ. ಸಾರ್."

"ಬಿಡ್ಸಿ ಹೇಳ್ರಿ."

"ಮನಿ ಅಂಡ್ ಮಜಲ್ ಪವರ್."

"ಗುಡ್. ಮದ್ವೆ ಆಗಿದೆಯಾ?"

"ಆಗಿದೆ. ಒಬ್ಬ ಮಗ ಇದಾನೆ. ಅವುನು ನಿಖಿಲ್ ಅಭಿಮಾನಿ ಸಂಘ ಕಟ್ಟುತಾ ಇದಾನೆ."

"ಏನು ಜಾಬ್ ಮಾಡ್ತಿರಿ?"

"ರಿಯಲ್ ಎಸ್ಟೇಟ್ ಬಿಜಿನೆಸ್."

"ಪಾರ್ಟಿಗೆ ನಿಮ್ದು ಕಾಂಟ್ರಿಬ್ಯೂಷನ್ ಏನು?"

"ಕುಮಾರಣ್ಣನ ಕೈ ಬಲಪಡಿಸೋದು."

"ಅದು ಮುಂದೆ... ಇಲ್ಲಿವರೆಗೂ ನಿಮ್ದು ಕಾಂಟ್ರಿಬ್ಯೂಷನ್?"

"ಮೂರು ಜಿಲ್ಲೆಲಿ ದೇವೇಗೌಡ್ರು, ಕುಮಾರಣ್ಣ, ರೇವಣ್ಣ ಇವುರ ಫ್ಲೆಕ್ಸ್ ಮಾಡ್ಸಿ ಹಾಕಿದ್ದೀನಿ. ಲಾರಿ ಬಸ್ನಲ್ಲಿ ಜನ ತಂದು ಸೇರಿಸಿದ್ದಿನಿ. ಕಾಂಗ್ರೆಸ್‌ನೋರ ಮ್ಯಾಲೆ ಮಾಡಿರೊ ಹೊಡೆದಾಟದ ಎಂಟು ಕೇಸು ಮೇಲಿವೆ. ಬಿಜೆಪಿಗಳ ಜೊತೆ ಮಾಡಿರೊ ಹೊಡೆದಾಟದ ಮೂರು ಕೇಸವೆ."

"ವರಿಗುಡ್ ಕೇಸ್‌ಗೆ ಹೆದರಬೇಡ. ಅದೆಲ್ಲಾ ನಮ್ಮ ಮಾಜಿ ಪರ್‌ದಾನಿಗಳು ನೋಡಿಕೊಳ್ತಾರೆ. ಈಗ ಇಲ್ಲಿಂದ ನೇರ ಕುಮಾರಣ್ಣಂದು ಮನೆ ಹತ್ರ ಹೋಗಿ, ಅಲ್ಲಿಂದ ಮಾಜಿ ಪರ್‌ದಾನಿಗಳ ಮನೆ ಹತ್ರ ಹೋಗಿ" ಎಂದರಂತಲ್ಲಾ,

ಥೂ, ಥೂ, ಥೂತ್ತೇರಿ!!! ■

ಶೇಕ್ಸ್‌ಪಿಯರ್‌ನೇನೋ ತನ್ನ ಕಲ್ಪನೆಯನ್ನಾಧರಿಸಿ ನಾಟಕವನ್ನು ರಚಿಸಿದ್ದ. ಆದರೆ ಅದರಲ್ಲಿನ ದುರಂತ ಕಥಾವಸ್ತು ಆಧುನಿಕ ಕಾಲದ ಪ್ರಸ್ತುತ ಸಂದರ್ಭದಲ್ಲಿ ಪುನರಾವರ್ತನೆಗೊಳ್ಳುತ್ತಿರುವುದು ಸತ್ಯ. ಯಾಕೆಂದರೆ 'ಒಥೆಲೊ' ನಾಟಕದ ನಾಯಕ ಒಥೆಲೊಗೂ ಮೊನ್ನೆ ತನ್ನ ಹೆಂಡತಿಯನ್ನೇ ಕೊಂದು ತಾನೂ ಸಾವಿಗೆ ಶರಣಾದ ಅಮಿತ್ ಬುಧಿರಾಜನಿಗೂ ಅಷ್ಟೇನು ವ್ಯತ್ಯಾಸವಿಲ್ಲ. ಹಾಗೆಯೇ ಅದೇ ನಾಟಕದ ನಾಯಕಿ ಡೆಸ್ಡೆಮೊನಾಳಿಗೂ ಅಮಿತ್‌ನ ಹೆಂಡತಿ ರಿಂಕು ಸಚದೇವಾಗೂ ಕೂಡ.

# ಟೆಕ್ಕಿಗಳಿಗೆ ಒಥೆಲೊ ಕಾಂಪ್ಲೆಕ್ಸ್


ಅಮಿತ್ ಮತ್ತು ರಿಂಕು

■ ಸಾವಂತ್ರಿ

ಬೆಂಗಳೂರಿನ ಸಾಫ್ಟ್‌ವೇರ್ ಜನಗಳ ಸೀಮಿತ ಪ್ರಪಂಚದಲ್ಲಿ ಇನ್ನೊಂದು ಜೋಡಿಯ ಸಾವು ಸಂಭವಿಸಿದೆ.

ಒಂದು ಹತ್ಯೆ.

ಇನ್ನೊಂದು ಆತ್ಮಹತ್ಯೆ.

ರಿಂಕು ಹಾಗೂ ಅಮಿತ್ ಎಂಬುವರ ಈ ದಾರುಣ ಅಂತ್ಯ ಹಣ, ಆಸ್ತಿ ಇತ್ಯಾದಿಗಳಿಗಾಗಿ ಸಂಭವಿಸಿಲ್ಲ. ಬದಲಾಗಿ ಪರಸ್ಪರರ ಈಗೋ, ಜೀವನಶೈಲಿ, ದಮನ - ಸ್ವೇಚ್ಛಾಚಾರಗಳ ಕಾರಣಗಳಿಂದ ಸ್ಫೋಟಗೊಂಡು ಇವರಿಬ್ಬರ ಸಾವಿಗೆ ಕಾರಣವಾಗಿದೆ.

ಮನುಷ್ಯರ ಭಾವನೆಗಳನ್ನು ಅರ್ಥ ಮಾಡ್ಕಿಕೊಂಡು ಅವುಗಳ ದ್ವಂದ್ವಗಳನ್ನು ತನ್ನ ಕೃತಿಗಳಲ್ಲಿ ಸಂಪೂರ್ಣವಾಗಿ ಸೆರೆಹಿಡಿದಿದ್ದ ಸಾಹಿತಿಗಳಲ್ಲಿ ಇಂಗ್ಲಿಷ್ ನಾಟಕಕಾರ ಶೇಕ್ಸ್‌ಪಿಯರ್ ಪ್ರಮುಖ. ಉದಾಹರಣೆಗೆ ಆತನ ದುರಂತ ನಾಟಕ 'ಒಥೆಲೊ' ಅನ್ನೇ ತೆಗೆದುಕೊಳ್ಳಿ, ಅದರಲ್ಲಿ ಪುರುಷನೊಬ್ಬ ಹೇಗೆ ಸಂಶಯ, ಹೊಟ್ಟೆಕಿಚ್ಚು ಮತ್ತು ಉದ್ರೇಕದಂತಹ ವಿನಾಶಕಾರಿ ಭಾವನೆಗಳಿಗೆ ತುತ್ತಾಗಿ ತನ್ನ ಪ್ರೀತಿಯ ಹೆಂಡತಿಯನ್ನೇ ಕೊಲ್ಲುತ್ತಾನೆಂದೂ, ಆನಂತರ ತನ್ನ ತಪ್ಪಿನ ಅರಿವಾಗಿ ಪಶ್ಚಾತ್ತಾಪದಿಂದ ತನ್ನನ್ನೇ ಇರಿದುಕೊಂಡು ಸಾಯುತ್ತಾನೆಂದೂ ಅದ್ಭುತವಾಗಿ ಚಿತ್ರಿಸಿದ್ದಾನೆ.

ಶೇಕ್ಸ್‌ಪಿಯರ್‌ನೇನೋ ತನ್ನ ಕಲ್ಪನೆಯನ್ನಾಧರಿಸಿ ನಾಟಕವನ್ನು ರಚಿಸಿದ್ದ. ಆದರೆ ಅದರಲ್ಲಿನ ದುರಂತ ಕಥಾವಸ್ತು ಆಧುನಿಕ ಕಾಲದ ಪ್ರಸ್ತುತ ಸಂದರ್ಭದಲ್ಲಿ ಪುನರಾವರ್ತನೆಗೊಳ್ಳುತ್ತಿರುವುದು ಸತ್ಯ.

ಯಾಕೆಂದರೆ 'ಒಥೆಲೊ' ನಾಟಕದ ನಾಯಕ ಒಥೆಲೊಗೂ ಮೊನ್ನೆ ತನ್ನ ಹೆಂಡತಿಯನ್ನೇ ಕೊಂದು ತಾನೂ ಸಾವಿಗೆ ಶರಣಾದ ಅಮಿತ್ ಬುಧಿರಾಜನಿಗೂ ಅಷ್ಟೇನು ವ್ಯತ್ಯಾಸವಿಲ್ಲ, ಹಾಗೆಯೇ ಅದೇ ನಾಟಕದ ನಾಯಕಿ ಡೆಸ್ಡೆಮೊನಾಳಿಗೂ ಅಮಿತ್‌ನ ಹೆಂಡತಿ ರಿಂಕು ಸಚದೇವಾಗೂ ಕೂಡ.

ಅಮಿತ್‌ನದ್ದು ಸಿಂಹ ರಾಶಿ. ರಿಂಕುಳದ್ದು ವೃಶ್ಚಿಕ ರಾಶಿ. ಆತ ದೆಹಲಿಯ ಹಿಂದೂ ಪಂಜಾಬಿ ಹುಡುಗ. ಆಕೆ ಮುಂಬೈಯಲ್ಲಿ ಬೆಳೆದ ಸರ್ದಾರಿಣಿ. ಆತ ಗಂಭೀರ ವಿದ್ಯಾರ್ಥಿಯಾಗಿದ್ದು ದೆಹಲಿಯ ವಿಶ್ವವಿದ್ಯಾನಿಲಯದಲ್ಲಿ ರ್‍ಯಾಂಕ್ ಪಡೆದಿದ್ದ. ಆಕೆ ಮಜಾ ಮಾಡುತ್ತಲೇ ತನ್ನ ವಿದ್ಯಾಭ್ಯಾಸ ಮುಗಿಸಿದ್ದಳು. ಆತ ಎಲ್ಲರನ್ನು ಮತ್ತು ಎಲ್ಲವನ್ನು ಸಂಶಯದಿಂದ ನೋಡುತ್ತಿದ್ದ. ಆಕೆ ಮುಕ್ತ ಮನಸ್ಸಿನಿಂದ ಎಲ್ಲರೊಂದಿಗೆ ಸಹಜವಾಗಿ ಬೆರೆಯುತ್ತಿದ್ದಳು.

ಅವರಿಬ್ಬರು ಆಧುನಿಕ ಸಂಸ್ಕೃತಿಯಲ್ಲಿ ಬೆಳೆದು ಬಂದವರಾಗಿದ್ದರಿಂದ ಅವರಿಗೆ ಐಷಾರಾಮಿ ಬದುಕಾಗಲಿ, ವಿದೇಶಗಳಲ್ಲಿ ತಿರುಗಾಟವಾಗಲಿ, ಪಂಚತಾರಾ ಜೀವನ ಶೈಲಿಯಾಗಲಿ ಹೊಸದಾಗಿರಲಿಲ್ಲ. ಹೇಗಿದ್ದರೂ ಅವುಗಳನ್ನೆಲ್ಲ ಪೂರೈಸುವ, ಕೈತುಂಬ ಸಂಬಳ ತರುವ ಕೆಲಸದಲ್ಲಿದ್ದರು. ಅಂದಹಾಗೆ ಇಂತಹ ಆಧುನಿಕ ವಾತಾವರಣದಲ್ಲೇ ಜೀವಿಸುತ್ತಿದ್ದ ಇವರಿಬ್ಬರೂ ಭೇಟಿ ಆಗಿದ್ದು ಕೂಡ ಆಧುನಿಕ ತಂತ್ರಜ್ಞಾನವಾದ ಇಂಟರ್‌ನೆಟ್‌ನಲ್ಲಿ.

ಇವತ್ತು ಜನಪ್ರಿಯವಾಗಿರುವ ಮತ್ತು ಬಹಳಷ್ಟು ಅವಿವಾಹಿತರು ಮೊರೆಹೋಗುವ ಕೇಂದ್ರಗಳು ಯಾವುದೆಂದರೆ ಏಕಾಂಗಿಗಳನ್ನು ಪರಿಚಯಿಸುವ ವೆಬ್‌ಸೈಟ್‌ಗಳು. ಅಂತಹ ವೆಬ್‌ಸೈಟ್‌ಗಳಲ್ಲಿ ಶಾದಿ.ಕಾಂ ಕೂಡ ಒಂದು. ಅಮಿತ್ ಮತ್ತು ರಿಂಕು ಶಾದಿ ಕಾಂ.ನಲ್ಲಿ ಪರಸ್ಪರ ಪರಿಚಯ ಮಾಡಿಕೊಂಡ ನಂತರ ಮುಖಾಮುಖಿ ಭೇಟಿಯಾದರು. ಅದು ಪ್ರೇಮಕ್ಕೂ ತಿರುಗಿ ಸುಮಾರು ಮೂರು ವರ್ಷಗಳ ಕಾಲ ಜೊತೆಗಿದ್ದರು. ಕೊನೆಗೆ ತಮ್ಮ ಸಂಬಂಧಕ್ಕೆ ಅಧಿಕೃತ ಮುದ್ರೆ ಇರಲೆಂದು ತಮ್ಮತಮ್ಮ ತಂದೆ ತಾಯಂದಿರಿಗೆ ವಿಷಯ ತಿಳಿಸಿದರು. ಅವರಿಬ್ಬರ ಜಾತಕಗಳೂ ಕೂಡಿದ್ದರಿಂದ ಹಿರಿಯರು ಅನುಮತಿ ನೀಡಿ ಮದುವೆ ಮಾಡಿಸಿದರು.

ಆದರೆ ಮದುವೆಯಾದ ನಂತರ ಸರಿಯಾಗಿ ಆರು ತಿಂಗಳ ಕಾಲವೂ ಅವರ ದಾಂಪತ್ಯ ಜೀವನ ನೆಟ್ಟಗೆ ಸಾಗಲಿಲ್ಲ. ತುಂಬಾ ಬುದ್ಧಿವಂತನಾಗಿದ್ದ, ಇನ್‌ಫೋಸಿಸ್ ನಂತಹ ಹೈಟೆಕ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಅಮಿತ್ ಸಂಪೂರ್ಣವಾಗಿ ಸಂಶಯದ ಹುತ್ತ ಆಗಿದ್ದ. ಎಷ್ಟರಮಟ್ಟಿಗೆಂದರೆ ತನ್ನ ಸಹೋದ್ಯೋಗಿಗಳು ತಮ್ಮ ಕಂಪ್ಯೂಟರ್‌ನಲ್ಲಿ ಏನನ್ನು ನೋಡುತ್ತಿದ್ದಾರೆ, ಏನು ಮಾಡುತ್ತಿದ್ದಾರೆ ಎಂಬುದನ್ನು ರಹಸ್ಯವಾಗಿ ಗಮನಿಸುತ್ತಿದ್ದ.

ದುರಂತವೆಂದರೆ ಅದೇ ಚಾಳಿಯನ್ನು ಅಮಿತ್ ತನ್ನ ಮನೆಯಲ್ಲೂ ಶುರು ಹಚ್ಚಿಕೊಂಡ. ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದ ತನ್ನ ಹೆಂಡತಿ ರಿಂಕುಳ ಪ್ರತಿ ಚಲನವಲನಗಳನ್ನು ಗಮನಿಸುತ್ತಿದ್ದ. ಆಕೆ ಯಾರೊಂದಿಗೆ ಮಾತನಾಡುತ್ತಿದ್ದಾಳೆ, ಯಾರೊಂದಿಗೆ ಸ್ನೇಹದಿಂದಿದ್ದಾಳೆ, ಯಾರೊಂದಿಗೆ ಹೋಟೆಲ್ ಮತ್ತು ಸಿನಿಮಾ ಎಂದೆಲ್ಲಾ ಹೋಗುತ್ತಿದ್ದಾಳೆ ಎಂಬುದನ್ನೆಲ್ಲ ಗುಪ್ತವಾಗಿ ದಾಖಲಿಸಿಕೊಳ್ಳಲಾರಂಭಿಸಿದ. ಅದಕ್ಕೆಂದು ಅಪಾರ ಸಮಯ ಮತ್ತು ಹಣವನ್ನು ವ್ಯಯ ಮಾಡಿದ. ಆಕೆ ತನ್ನ ಫೋನ್‌ನಲ್ಲಿ ಸ್ನೇಹಿತರೊಂದಿಗೆ ಮಾತನಾಡಿದ್ದನ್ನೆಲ್ಲ ತನ್ನ ಲ್ಯಾಪ್‌ಟಾಪ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದ ಅಮಿತ್ ತನ್ನ ಸಹೋದ್ಯೋಗಿ ಅರವಿಂದ್ ಎಂಬಾತನನ್ನು ರಿಂಕು ಪ್ರೀತಿಸುತ್ತಿದ್ದಾಳೆ ಎಂದು ಭ್ರಮಿಸಿದ (ವಾಸ್ತವಾಗಿ ಆ ರೆಕಾರ್ಡಿಂಗ್‌ಗಳು ಎಷ್ಟು ಅಸ್ಪಷ್ಟವಾಗಿದೆ ಎಂದರೆ ಯಾರು, ಯಾರೊಂದಿಗೆ ಮಾತನಾಡುತ್ತಿದ್ದಾರೆ ಎಂಬುದೇ ಗೊತ್ತಾಗುವುದಿಲ್ಲ ಎಂದು ಪೊಲೀಸರು ಹೇಳಿದ್ದಾರೆ).

ರಿಂಕು ತನಗೆ ಮೋಸ ಬಗೆದಿರುವ ಹೆಣ್ಣೆಂದು, ಆಕೆ ಮತ್ತೊಬ್ಬನೊಂದಿಗೆ ಪ್ರೇಮಸಲ್ಲಾಪದಲ್ಲಿ ತೊಡಗಿರುವ ಹಾದರಗಿತ್ತಿ ಎಂದೂ, ಅವಳಿಂದ ವಿಚ್ಛೇದನೆ ಕೇಳಿದರೆ ಆಕೆ ಪರಿಹಾರವಾಗಿ ಲಕ್ಷಾಂತರ ರೂಪಾಯಿಗಳನ್ನು ಕೇಳುವ ಮೋಸಗಾರ್ತಿಯೆಂದೂ, ಬೇಕಿದ್ದರೆ ತನ್ನ ವಿರುದ್ಧ ವರದಕ್ಷಿಣೆ ಕಿರುಕುಳದ ದೂರನ್ನು ದಾಖಲಿಸಿ ತನ್ನ ಜೀವನವನ್ನೇ ನಾಶಗೊಳಿಸಬಲ್ಲ ವಂಚಕಿ ಎಂದೂ.... ಹೀಗೆಲ್ಲ ಭೀತಿಗಳ ಗೋಪುರವನ್ನೇ ತನ್ನ ತಲೆಯಲ್ಲಿ ಸೃಷ್ಟಿಸಿಕೊಂಡ ಅಮಿತ್ ಆಕೆಯನ್ನು ಕೊಲ್ಲುವುದೇ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಎಂದು ಭಾವಿಸಿದ. ಅಂದರೆ ಆತ ಅಕ್ಷರಶಃ ಹುಚ್ಚನಾಗಿದ್ದ.

ಆದರೆ ತನ್ನ ಹುಚ್ಚುತನವನ್ನು ತೋರಗೊಡದ ಬುದ್ಧಿವಂತ ಹುಚ್ಚನಾಗಿದ್ದ. ಯಾಕೆಂದರೆ ರಿಂಕು ನಡೆಸುತ್ತಿದ್ದ ಕಾಲ್ಪನಿಕ ಅಕ್ರಮ ಸಂಬಂಧದ ಬಗ್ಗೆ ಅಮಿತ್ ಒಮ್ಮೆಯೂ ಆಕೆಯನ್ನು ಪ್ರಶ್ನಿಸಿರಲಿಲ್ಲ, ಅದರ ಬಗ್ಗೆ ಅವಳೊಂದಿಗೆ ಜಗಳವಾಡಿರಲಿಲ್ಲ, ಎಲ್ಲ ಗಂಡಹೆಂಡತಿಯರ ನಡುವೆ ಇರುವ ಸಣ್ಣಪುಟ್ಟ ಜಗಳಗಳು, ಅಸಮಾಧಾನಗಳು, ಈಡೇರದ ಬಯಕೆಗಳು ಅವರ ನಡುವೆಯೂ ಇದ್ದವು. ಅವುಗಳಿಂದ ರಿಂಕು ಸ್ವಲ್ಪ ಮನಸ್ತಾಪಗೊಂಡಿದ್ದಳು ಕೂಡ. ಯಾಕೋ ತಾನು ಬಯಸಿದ್ದೆಲ್ಲ ಈ ದಾಂಪತ್ಯದಿಂದ ಸಿಗುತ್ತಿಲ್ಲ ಎಂದು ತನ್ನ ಹೆತ್ತವರ ಮುಂದೆ ಹಲುಬಿದ್ದಳು ಕೂಡ. ಆದರೂ ಅವುಗಳನ್ನೆಲ್ಲ ಬಗೆಹರಿಸಿ ಆತನೊಂದಿಗಿನ ದಾಂಪತ್ಯ ಜೀವನವನ್ನು ಮುಂದುವರೆಸುವುದಾಗಿ ನಿರ್ಧರಿಸಿದ್ದಳು.

ದುರದೃಷ್ಟವಶಾತ್, ಅಮಿತ್‌ನ ತಲೆಯಲ್ಲಿ ಬೆಳೆಯುತ್ತಿದ್ದ ಅಪಾಯಕಾರಿ ಭ್ರಮೆಗಳ ಬಗ್ಗೆ ರಿಂಕುಗೆ ಗೊತ್ತಿರಲಿಲ್ಲ, ಮುಂದೊಂದು ದಿನ ಆತನ ಆ ಭ್ರಮೆಗಳೇ ತನಗೆ ಸಾವನ್ನು ತರಲಿದೆ ಎಂಬ ಸುಳಿವೂ ಆಕೆಗಿರಲಿಲ್ಲ.

ಅವತ್ತು ಹೋಳಿಹಬ್ಬ, ಸಾಲದೆಂಬಂತೆ ಅದು ಶನಿವಾರವಾಗಿದ್ದರಿಂದ ಇಬ್ಬರಿಗೂ ರಜೆ ಇತ್ತು, ಅವತ್ತೆಲ್ಲ ಅಮಿತ್ ಮತ್ತು ರಿಂಕು ಮನೆಯಲ್ಲೇ ಕಳೆದರು. ದೆಹಲಿಯಿಂದ ಫೋನ್ ಮಾಡಿದ ತನ್ನ ತಾಯಿಯೊಂದಿಗೆ ಅಮಿತ್ ಸಹಜವಾಗಿಯೇ ಮಾತನಾಡಿದ. ಆದರೆ ರಿಂಕು ಮಾತ್ರ ಯಾರೊಂದಿಗೋ ಫೋನ್‌ನಲ್ಲಿ ಮಾತನಾಡಿದ್ದನ್ನು ಗಮನಿಸಿದ ಅಮಿತ್ ಅವಳು ತನ್ನ 'ಪ್ರಿಯಕರ'ನೊಂದಿಗೆ ಸರಸ ನಡೆಸುತ್ತಿರಬೇಕೆಂದು ನಿರ್ಧರಿಸಿದ. ಇಬ್ಬರೂ ರಾತ್ರಿ ಊಟ ಮಾಡಿ ಮಲುಗುವ ಕೋಣೆ ಹೊಕ್ಕರು.

ತನ್ನ ಪಾಲಿಗೆ ಇದು ಎಂದಿನ ನಿದ್ರೆ ಅಲ್ಲ ಬದಲಾಗಿ ಚಿರನಿದ್ರೆಯ ರಾತ್ರಿ ಎಂಬುದರ ಪರಿವೆಯೂ ಇಲ್ಲದಿದ್ದ ರಿಂಕು ನಿದ್ರೆಗೆ ಜಾರಿದಳು. ಆಗ ಅಮಿತ್‌ನಲ್ಲಿ ಹುದುಗಿದ್ದ ಪೈಶಾಚಿಕತನ ಎದ್ದು ಕುಂತಿತು. ಪಕ್ಕದಲ್ಲೇ ಇದ್ದ ಇನ್ನೊಂದು ದಿಂಬನ್ನು ರಿಂಕುಳ ಮುಖದ ಮೇಲಿಟ್ಟ ಅಮಿತ್ ಆಕೆಯ ಉಸಿರುಗಟ್ಟಿಸಿದ. ಆಕೆ ವಿಲವಿಲ ಎಂದು ಒದ್ದಾಡುತ್ತಾ ಸಾಯುವವರೆಗೂ ದಿಂಬನ್ನು ಒತ್ತಿ ಹಿಡಿದಿದ್ದ. ಇಂತಹ ಅನಿರೀಕ್ಷಿತ ದಾಳಿಯಿಂದ ರಿಂಕು ಎಷ್ಟು ಅಸಹಾಯಕಳಾಗಿದ್ದಳೆಂದರೆ ತನ್ನನ್ನು ಮೃತ್ಯುವಿನ ಕೂಪಕ್ಕೆ ದೂಡುತ್ತಿದ್ದ ಗಂಡನ ವಿರುದ್ಧ ಸೆಣಸಾಡಲಾಗಲಿ, ಅವನನ್ನು ಕನಿಷ್ಠಪಕ್ಷ ಪರಚುವುದಕ್ಕಾಗಲಿ ಅವಳಿಂದ ಸಾಧ್ಯವಾಗಲಿಲ್ಲ, ಆಕೆ ಯಾವ ಪ್ರತಿರೋಧವನ್ನೂ ತೋರಲಾಗದೆ ಸತ್ತಳು.





ಆರ್ಕುಟ್ ಎಂಬ ವೆಬ್‌ಸೈಟಿನಲ್ಲಿ ತನ್ನ ಪರಿಚಯಾತ್ಮಕ ವಿಷಯಗಳನ್ನು ದಾಖಲಿಸಿದ್ದ ಅಮಿತ್ `IDEAL' ಸಂಬಂಧದ ಬಗ್ಗೆ `I't `D'oes `E'xist in `A'fter `L'ife (ಅಂದರೆ ಪರಲೋಕದಲ್ಲಿ ಮಾತ್ರ ಮಾದರಿ ಸಂಬಂಧ ಇದೆ) ಎಂದು ಬರೆದಿದ್ದ. ಅದರಂತೆ ತಾನು ಕೊಂದಿದ್ದ ತನ್ನ ಹೆಂಡತಿಯನ್ನು ಪರಲೋಕದಲ್ಲಿ ಸೇರಲು ರೆಡಿಯಾದ.

ಆದರೆ ಅದಕ್ಕೂ ಮುನ್ನ ಆತ ಮಾಡಬೇಕಿದ್ದ ಒಂದು ಕೆಲಸ ಬಾಕಿ ಇತ್ತು, ಅದು ಆತ್ಮಹತ್ಯಾ ಪತ್ರವನ್ನು ಬರೆಯುವುದು. "ರಿಂಕು ಇನ್ನೊಬ್ಬನೊಂದಿಗೆ ಸಂಬಂಧ ಹೊಂದಿದ್ದಳು... ಆಕೆ ನನ್ನ ವಿರುದ್ಧ ವರದಕ್ಷಿಣೆ ಕಾಯಿದೆ 498A ಅಡಿ ದೂರು ದಾಖಲಿಸಬಹುದೆಂಬ ಭಯ ನನಗಿತ್ತು... ನಾನು ಮನೆಯಲ್ಲಿದ್ದಾಗ ಫೋನಿನಲ್ಲಿ ಮಾತಾಡುವಾಗ ಆಕೆ ಬಾಗಿಲು ಹಾಕಿಕೊಳ್ಳುತ್ತಿದ್ದಳು. ಇದನ್ನು ನೋಡಿ ನನಗೆ **torture** ಆಗುತ್ತಿತ್ತು, ಕಳೆದ ಆರು ತಿಂಗಳಿಂದ ಆಕೆ ಅರವಿಂದ್ ಎಂಬಾತನೊಂದಿಗೆ ಸಂಬಂಧ ಹೊಂದಿದ್ದಳು..... ಅವಳ ಮುಖಕ್ಕೆ ದಿಂಬಿಟ್ಟು ಕೊಂದೆ.... ಅವಳೊಂದಿಗೆ ನಾನು ಲಕ್ಷಾಂತರ ಕನಸುಗಳನ್ನು ಕಂಡಿದ್ದೆ. ಅವುಗಳೆಲ್ಲ ನಾಶವಾದವು" ಎಂದೆಲ್ಲಾ ಆರು ಪುಟಗಳಲ್ಲಿ ಅಮಿತ್ ದಾಖಲಿಸಿದ. ಆನಂತರ ಆತನೂ ನೇಣು ಹಾಕಿಕೊಂಡು ಸತ್ತುಹೋದ.

ಅಮಿತ್ ಬರೆದಿದ್ದ ಈ ಆತ್ಮಹತ್ಯಾ ಪತ್ರ ಹೇಗಿತ್ತೆಂದರೆ ಆತನನ್ನು ಚೆನ್ನಾಗಿ ಬಲ್ಲವರಾಗಿದ್ದ ಆತನ ಚಿಕ್ಕಪ್ಪ ಆನಂದ್ ಮಲ್ಲಿಕ್ ಎಂಬುವವರು ಹೇಳಿದ್ದೇನೆಂದರೆ "ಇದನ್ನೆಲ್ಲ ಅಮಿತ್ ಮುಂಚಿತವಾಗಿಯೇ ನಿರ್ಧರಿಸಿದ್ದಂತಿದೆ. ಯಾವ ಕೆಲಸವಾದರೂ ಅಮಿತ್ ಅದನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದ. ಈ ಪತ್ರವನ್ನೂ ಅವನು ಅಚ್ಚುಕಟ್ಟಾಗಿ ಬರೆದಿದ್ದಾನಲ್ಲದೆ ಅದನ್ನು ಓದಿದಾಗ ಆತ ಇಂತಹ ನಿರ್ಧಾರವನ್ನು ಹಲವು ದಿನಗಳ ಹಿಂದೆಯೇ ತೆಗೆದುಕೊಂಡಿದ್ದಾನೆ ಎಂಬುದು ಗೊತ್ತಾಗುತ್ತದೆ."

ಇಲ್ಲೊಂದು ಮುಖ್ಯವಾದ ಅಂಶವನ್ನು ಗಮನಿಸಬೇಕು. ಅದೇನೆಂದರೆ ಅಮಿತ್ ಮತ್ತು ರಿಂಕು ಓದಿದವರಾಗಿದ್ದರು. ಇಬ್ಬರೂ ಉತ್ತಮ ಹುದ್ದೆಗಳಲ್ಲಿದ್ದರು, ಅಂದವಾದ ಮನೆಯಿತ್ತು, ಕೈಯಲ್ಲಿ ಸಾಕಷ್ಟು ಹಣವಿತ್ತು, ಭರವಸೆಗಳಿಂದ ತುಂಬಿದ್ದ ಭವಿಷ್ಯ ಅವರದ್ದಾಗಿತ್ತು, ಆದರೂ ಅವರ ಬದುಕು ದುರಂತದಲ್ಲಿ ಅಂತ್ಯಗೊಂಡಿತ್ತು, ಇದಕ್ಕೆ ಕಾರಣವೇನಿರಬಹುದೇ?

ಇವತ್ತು ಲಕ್ಷಾಂತರ ಭಾರತೀಯ ಮಹಿಳೆಯರು ವಿದ್ಯಾಭ್ಯಾಸ ಪಡೆದು ವಿವಿಧ ವಲಯಗಳಲ್ಲಿ, ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಆ ಕೆಲಸಗಳ ಜಾಗೆಗಳಲ್ಲಿ ಅವರು ಇತರ ಮಹಿಳೆ ಮತ್ತು ಪುರುಷರೊಂದಿಗೆ ಕೆಲಸಕ್ಕೆ ಸಂಬಂಧಪಟ್ಟಂತಹ ಸಂಪರ್ಕ ಇಟ್ಟುಕೊಳ್ಳಬೇಕಾಗುತ್ತದೆ. ಅಂದಮಾತ್ರಕ್ಕೆ ಅವರೆಲ್ಲ ಪರ ಪುರುಷರೊಂದಿಗೆ ಸಂಬಂಧ ಇಟ್ಟುಕೊಂಡಿರುತ್ತಾರೆಂದಲ್ಲ, ಇವತ್ತಿನ ಆಧುನಿಕ ಯುಗದಲ್ಲಿ ಸಂಸಾರವೊಂದಕ್ಕೆ ಆರ್ಥಿಕ ಭದ್ರತೆ ಬೇಕಿದ್ದರೆ ಮಹಿಳೆಯರು ಕೂಡ ತಮ್ಮ ಸಾಮರ್ಥ್ಯಕ್ಕೆ ತಕ್ಕಂತಹ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಬೇಕಿರುವುದು ಅನಿವಾರ್ಯ ಕೂಡ ಆಗಿದೆ. ಅದರಲ್ಲೂ ರಿಂಕು ತರಹದ ವಿದ್ಯಾವಂತ ಮಹಿಳೆಯರಿಗೆ ಮದುವೆ ನಂತರ ನೀನು ಗೌರಮ್ಮನಂತೆ ಮನೆಯಲ್ಲೇ ಕೂತಿರು ಎಂದರೆ ಅವರು ಸಹಿಸುವುದಿಲ್ಲ, ಯಾಕೆಂದರೆ ಅವರಿಗೆ ಮದುವೆ ಎಂಬುದು ಒಂದು ವೈಯಕ್ತಿಕ ಸಂಬಂಧವಾಗಿರುತ್ತದೆಯಲ್ಲದೆ ತಮ್ಮ ಸ್ವಾಭಿಮಾನ, ಸ್ವಾವಲಂಬಿತನ ಮತ್ತು ಸ್ವತಂತ್ರ ಅಸ್ತಿತ್ವವನ್ನೇ ಮುಡಿಪಾಗಿಡುವ ಏರ್ಪಾಡಂತೂ ಅಲ್ಲ.

ಆದರೆ ಭಾರತೀಯ ನಾರಿಯರಿಗಿಂತ ಆಲೋಚನಾ ಕ್ರಮದಲ್ಲಿ ಈಗಲೂ ಬಹಳ ಹಿಂದಿರುವ ಭಾರತದ ಪುರುಷರಿಗೆ ಒಂದು ರೀತಿಯ ದ್ವಂದ್ವ. ತೋರಿಕೆಗೆ ಅವರೆಷ್ಟೇ ಆಧುನಿಕರಾಗಿದ್ದರೂ ಅಂತರಾಳದಲ್ಲಿ ಅವರಲ್ಲಿ ಬಹಳಷ್ಟು ಜನ ಸಂಪ್ರದಾಯವಾದಿಗಳೇ ಆಗಿರುತ್ತಾರೆ. ಆ ಕಾರಣದಿಂದಾಗಿ ಹೊರಗಡೆ ದುಡಿಯುತ್ತಿರುವ ಪತ್ನಿಗೆ ತನ್ನ ವೃತ್ತಿಯೆಂದಿಗೂ ಗಂಡನಿಗಿಂತ ಮಿಗಿಲಾಗಿರಕೂಡದು, ಅವಳ ನಿಷ್ಠೆ ತನಗೆ ಮಾತ್ರ ಸೀಮಿತವಾಗಿರಬೇಕು, ಆಕೆ ತನ್ನನ್ನು ಹೊರತಾಗಿ ಬೇರೆ ಯಾವ ಪುರುಷರೊಂದಿಗೂ ಸ್ನೇಹವನ್ನು ಬೆಳೆಸಬಾರದು ಎಂಬಂತಹ ಅಪೇಕ್ಷೆಗಳನ್ನು ಹೊಂದಿರುತ್ತಾರೆ.

ಗಂಡಹೆಂಡಿರ ನಡುವೆ ಕಿತ್ತಾಟ ಪ್ರಾರಂಭವಾಗುವುದು ಅಲ್ಲಿಂದ. ಸ್ವಚ್ಛಂದಕ್ಕಲ್ಲದಿದ್ದರೂ ತನ್ನ ಇಷ್ಟಗಳನ್ನು ಪೂರೈಸಿಕೊಳ್ಳುವ ಹಕ್ಕು ತನಗೂ ಇದೆ ಎಂದು ನಂಬಿರುವ ಆಧುನಿಕ ಮಹಿಳೆ ತನಗೆ ನೆಮ್ಮದಿಯ ದಾಂಪತ್ಯ ಜೀವನದಷ್ಟೇ ಮುಖ್ಯ ತನ್ನ ವೃತ್ತಿ ಮತ್ತು ಗುರಿಗಳು ಎಂದು ನಂಬಿರುತ್ತಾಳೆ. ಆದರೆ ಯಾವಾಗ ತನ್ನ ಕೈ ಹಿಡಿದವನೇ ತನ್ನ ಸ್ವಾತಂತ್ರ್ಯಕ್ಕೆ ಮತ್ತು ವೃತ್ತಿಯ ಆಕಾಂಕ್ಷೆಗಳಿಗೆ ಧಕ್ಕೆ ತರಲಿದ್ದಾನೆ ಎನಿಸುತ್ತದೋ ಆಗ ಆಕೆ ಆತನಿಂದ ದೂರವಾಗಲಾರಂಭಿಸುತ್ತಾಳೆ. ಇಂತಹ ಸ್ಥಿತಿಯನ್ನು ತಲುಪಿರುವ ಅದೆಷ್ಟೋ ದಂಪತಿಗಳ ನಡುವೆ ಬಿರುಕು, ಏಕಾಂಗಿತನ, ಆಶಾಭಂಗ, ಜಗಳಗಳು ತಾರಕಕ್ಕೆ ಹೋಗಿ ವಿಚ್ಛೇದನೆಗಳಲ್ಲಿ ಅಂತ್ಯಗೊಳ್ಳುತ್ತದೆ. ಆದರೆ ಹಲವೊಮ್ಮೆ ಕೊಲೆಗಳಲ್ಲೂ ಅಂತ್ಯಗೊಂಡು ಆಧುನಿಕ ಬದುಕಿನ ಒ...



ಅಮಿತ್ ಮತ್ತು ರಿಂಕು ಮನೆ

ಮತ್ತು ಅದರೊಂದಿಗೆ ಬೆಸೆದುಕೊಂಡಿರುವ ಅಪಾಯಗಳು ಸಮಾಜದ ಮುಖಕ್ಕೆ ರಾಚುವಂತೆ ವ್ಯಕ್ತವಾಗುತ್ತವೆ.

ಅಮಿತ್ ಮತ್ತು ರಿಂಕು ಪ್ರಕರಣದಲ್ಲಿ ಆಗಿರುವುದೂ ಇದೇನೆ.

ಆದರೆ ಇದೊಂದು ಪ್ರಕರಣದಿಂದಲೇ ಟೆಕ್ಕಿಗಳಿಗೆ ಒಥೆಲೊ ಕಾಂಪ್ಲೆಕ್ಸ್ ಇದೆಯೇ ಎಂಬ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ, ಅದಕ್ಕೆ ಒಥೆಲೊ ನಾಟಕವನ್ನು ಇನ್ನೊಂದು ಆಯಾಮದಲ್ಲಿ ಗ್ರಹಿಸಬೇಕಿದೆ. ಅದು ಒಥೆಲೊ ಮತ್ತು ಡೆಸ್ಡೆಮೊನಾಳ ನಡುವಿನ ವ್ಯತ್ಯಾಸ. ಮೊದಲನೆಯದಾಗಿ ಒಥೆಲೊಗೆ ಡೆಸ್ಡೆಮೊನಾಳ ತಂದೆಯಷ್ಟು ವಯಸ್ಸಾಗಿತ್ತಲ್ಲದೆ, ಆತ ಕರಿಯನಾಗಿದ್ದು ಡೆಸ್ಡೆಮೊನಾಳ ಬಿಳಿಯವಳಾಗಿದ್ದಳು. ಹಾಗೆಯೇ ಆತ ಸೈನಿಕನಾಗಿದ್ದರೆ ಆಕೆ ರಾಜವಂಶಕ್ಕೆ ಸೇರಿದ್ದವಳಾಗಿದ್ದಳು. ಅಂದರೆ ಅವರಿಬ್ಬರ ನಡುವೆ ವಯಸ್ಸು, ಸಾಮಾಜಿಕ ಸ್ಥಾನಮಾನ ಮತ್ತು ಜನಾಂಗೀಯ ಭೇದಗಳಿದ್ದವು. ಹಲವರ ಪ್ರಕಾರ ಈ ಭೇದಗಳೂ ಅವರ ದಾರುಣ ಅಂತ್ಯಕ್ಕೆ ಕಾರಣಗಳಾಗಿದ್ದವು.

ಆದರೂ ಒಥೆಲೊಗೂ ಟೆಕ್ಕಿಗಳಿಗೂ ಯಾವ ರೀತಿಯಲ್ಲಿ ಸಂಬಂಧ? ಆ ಪ್ರಶ್ನೆಗೆ ಗುರುರಾಜ ಕಿಶೋರ್ ಮತ್ತು ಟಾನಿಯಾ ಬ್ಯಾನರ್ಜಿ ಎಂಬ ಟೆಕ್ಕಿಗಳ ದುರಂತದ ಕತೆಯೇ ಉತ್ತರ ನೀಡಬಲ್ಲದು.

ಗುರುರಾಜ್ ಮತ್ತು ಟಾನಿಯಾ ಅವೀವಾ 24/7 ಎಂಬ ಬಿಪಿಓ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಮಧ್ಯಮ ವರ್ಗಕ್ಕಿಂತಲೂ ಕೆಳವರ್ಗದಿಂದ ಬಂದಿದ್ದ 27 ರ ಹರೆಯದ ಗುರುರಾಜನಿಗೆ ತನಗಿಂತಲೂ ಐದು ವರ್ಷ ಹಿರಿಯವಳಾದ, ತನಗಿಂತಲೂ ಉನ್ನತ ವರ್ಗದಿಂದ ಬಂದಿದ್ದ ಟಾನಿಯಾಳ ಬಗ್ಗೆ ವ್ಯಾಮೋಹ ಹುಟ್ಟಿಕೊಂಡಿತು.

ಟಾನಿಯಾ ಕೇಳಿದ್ದನ್ನೆಲ್ಲ ಗುರುರಾಜ ನೀಡುತ್ತಿದ್ದನಾದ್ದರಿಂದ ಆಕೆ ಕೂಡ ಹಲವು ತಿಂಗಳ ಕಾಲ ಅವನೊಂದಿಗೆ ಸಂಬಂಧ ಹೊಂದಿದ್ದಳು. ಆಗ ಆಕೆಗೆಂದೇ ಬ್ಯಾಂಕ್ ಸಾಲ ಮಾಡಿ ಗುರುರಾಜ್ ಹೊಂಡಾ ಸಿಟಿಯಂತಹ ಐಷಾರಾಮಿ ಕಾರನ್ನು ಖರೀದಿಸಿದ್ದ.

ಆದರೆ ಟಾನಿಯಾಳಿಗೆ ಹೈಸೊಸೈಟಿ ಬದುಕು ಬೇಕಿತ್ತು. ಆಧುನಿಕ ಶೈಲಿಯ ಬಟ್ಟೆಗಳನ್ನು ತೊಟ್ಟು ಪಾರ್ಟಿಗಳಿಗೆ ಹೋಗುವ ಹವ್ಯಾಸವಿತ್ತು, ಸಿಗರೇಟು ಮತ್ತು ಕುಡಿತದಂತಹ ಚಟಗಳೂ ಇದ್ದವು. ಇವ್ಯಾವುದೂ ಗುರುರಾಜನಿಗೆ ಸರಿ ಕಂಡುಬರಲಿಲ್ಲ, ಆಗ ಆಕೆಯನ್ನು ನಿಗ್ರಹಿಸಲು, ತನ್ನ ಇಚ್ಛೆಗೆ ತಕ್ಕಂತೆ ಅವಳ ವ್ಯಕ್ತಿತ್ವವನ್ನು ರೂಪಿಸಲು ಯತ್ನಿಸಿದ. ಪಾರ್ಟಿ-ಗಿರ್ಟಿ ಬೇಡ ಅಂದ, ಸರಿಯಾದ ಬಟ್ಟೆ ಧರಿಸು ಎಂದು ತಾಕೀತು ಮಾಡಿದ, ಇನ್ನು ಮುಂದೆ ಸಿಗರೇಟು, ಗುಂಡು ಎಲ್ಲಾ ಸ್ಟಾಪ್ ಅಂದ. ಇದ್ಯಾವುದಕ್ಕೂ ಒಪ್ಪದ ಟಾನಿಯಾ "ನನಗೆ ನೀನೇ ಬೇಡ, ಹೋಗು" ಅಂದಳು. ಅಷ್ಟೊತ್ತಿಗಾಗಲೇ ಮೋಜಿನ ಬದುಕಿನ ಆಶೆ ಅವಳನ್ನು ಎಷ್ಟು ಆವರಿಸಿಕೊಂಡಿತ್ತೆಂದರೆ ಒಮ್ಮೆ ಆಕೆ ವೇಶ್ಯಾವಾಟಿಕೆ ಜಾಲದಲ್ಲಿ ಸಕ್ರಿಯವಾಗಿದ್ದಳೆಂಬ ಆರೋಪದ ಮೇಲೆ ಅವಳನ್ನು ಕೋಲ್ಕತ್ತಾದ ಪೊಲೀಸರು ಬಂಧಿಸಿದ್ದರು. ಜೈಲಿನಲ್ಲಿ ಒಂದು ತಿಂಗಳನ್ನು ಕಳೆದು ಬೆಂಗಳೂರಿಗೆ ವಾಪಸ್ಸಾಗಿದ್ದ ಟಾನಿಯಾ ಇಲ್ಲೂ ಪರಪುರುಷರೊಂದಿಗೆ ಸಂಬಂಧಗಳನ್ನು ಹೊಂದಿದ್ದಳು.

ಆಕೆಗೂ, ತನಗೂ ಎಂದಿಗೂ ಕೂಡಿಬರುವುದಿಲ್ಲ ಎಂಬುದನ್ನು ಒಪ್ಪದ ಗುರುರಾಜ್ ಅವಳ ಬೆನ್ನು ಹತ್ತಿದ. "ನನ್ನನ್ನು ಮದುವೆಯಾಗು" ಎಂದು ಗೋಳು ಹೊಯ್ದುಕೊಂಡ. ಒಂದು ದಿನ ರಾತ್ರಿ ಅವರಿಬ್ಬರೂ ಕೆಲಸ ಮುಗಿಸಿ ಆಫೀಸಿನಿಂದ ಹೊರಬಿದ್ದಾಗ ಆಕೆಯನ್ನು ತನ್ನ ಕಾರಿನಲ್ಲಿ ಮನೆಗೆ ಡ್ರಾಪ್ ಮಾಡುವುದಾಗಿ ಗುರುರಾಜ್ ಹೇಳಿದ. ಟಾನಿಯಾ ಅವನ ಕಾರ್ ಹತ್ತಿದಳು. ನಿರ್ಜನ ಪ್ರದೇಶವಾದ ಸದಾಶಿವನಗರದ ಸಿ.ವಿ. ರಾಮನ್ ರಸ್ತೆಯಲ್ಲಿ ಕಾರ್ ನಿಲ್ಲಿಸಿದ ಗುರುರಾಜ್ ಮತ್ತೊಮ್ಮೆ "ನಿನ್ನ ನಡವಳಿಕೆಗಳನ್ನು ಬದಲಾಯಿಸು, ನನ್ನನ್ನು ಮದುವೆಯಾಗು" ಎಂದು ಒತ್ತಾಯಿಸಿದ. ಅವರಿಬ್ಬರ ನಡುವೆ ಜಗಳ ಪ್ರಾರಂಭವಾಗಿ "ನನಗೆ ನನ್ನ ಸ್ವಾತಂತ್ರ್ಯ ಬೇಕು. ನೀನ್ಯಾರು ನನ್ನನ್ನು ಪ್ರಶ್ನಿಸೋದಕ್ಕೆ" ಎಂದು ಟಾನಿಯಾ ಅವನ ಕಪಾಳಕ್ಕೆ ಬಾರಿಸಿದಳು. ಇದರಿಂದ ರೊಚ್ಚಿಗೆದ್ದ ಗುರುರಾಜ್ ತನ್ನ ಕಾರಿನಲ್ಲಿದ್ದ ಚಾಕುವಿನಿಂದ ಅವಳನ್ನು ಇರಿದ, ಇರಿದ, ಇರಿದ....34 ಬಾರಿ ಆಕೆಯನ್ನು ಇರಿದು ಕೊಂದು ಹಾಕಿದ.


ಆನಂತರ ಆಕೆಗೆಂದು ಆತ ಖರೀದಿಸಿದ್ದ ಕಾರಿನಲ್ಲೇ ಅವಳ ಹೆಣವನ್ನು ಹೊತ್ತು ಸಕಲೇಶಪುರದತ್ತ ಹೊರಟ, ದಾರಿ ಮಧ್ಯೆ ಚಾಕು ಮತ್ತು ಟಾನಿಯಾಳ ಮೊಬೈಲ್ ಫೋನ್ ಅನ್ನು ಬಿಸಾಡಿದ ಗುರುರಾಜ್ ಅವಳ ದೇಹವನ್ನು ಶಿರಾಡಿ ಘಾಟ್‌ನಲ್ಲಿ ಎಸೆದ. ಕಾರ್ ರೇಸ್‌ಗಳಲ್ಲಿ ಭಾಗವಹಿಸಿದ್ದ ಅನುಭವ ಹೊಂದಿದ್ದ ಗುರುರಾಜ್ ಕಾರ್ ಅನ್ನು ವೇಗವಾಗಿ ಚಲಿಸುತ್ತಾ ಅಂದೇ ರಾತ್ರಿ ಬೆಂಗಳೂರಿಗೆ ಹಿಂದಿರುಗಿದ.

ಕೆಲ ಗಂಟೆಗಳ ಕಾಲ ನಿದ್ದೆ ಮಾಡಿದ ನಂತರ ಎದ್ದು ರಕ್ತಸಿಕ್ತವಾಗಿದ್ದ ತನ್ನ ಕಾರ್ ಅನ್ನು ತೊಳೆದು, ಏನೂ ಆಗಿಲ್ಲವೆಂಬಂತೆ ತನ್ನ ಆಫೀಸಿಗೆ ಗುರುರಾಜ್ ಹಾಜರಾದ. ಅವನ ದುರದೃಷ್ಟಕ್ಕೆ ಟಾನಿಯಾಳ ಶವ ಪತ್ತೆಯಾಗಿ, ಅವಳೊಂದಿಗೆ ಕೊನೆಗೆ ಇದ್ದವನು ಗುರುರಾಜ್ ಎಂಬುದು ಪೊಲೀಸರಿಗೆ ಗೊತ್ತಾಯಿತು. ಈ ಪ್ರಕರಣ ನಡೆದದ್ದು 2006 ರ ಜುಲೈ ತಿಂಗಳಲ್ಲಿ, ಈಗ ಜೈಲಿನಲ್ಲಿರುವ ಗುರುರಾಜ್ ಹೇಳುವುದಿಷ್ಟೇ "ನಾನು ಅವಳನ್ನು ತುಂಬಾ ಪ್ರೀತಿಸುತ್ತಿದ್ದೆ."

ಇದು ಒಥೆಲೊ ಕಾಂಪ್ಲೆಕ್ಸ್ ಅಲ್ಲದೇ ಮತ್ತೇನು? ■


# ರಣರಂಗವಾಗಿರುವ ಸುರಪುರವೂ ಜೈಲು ಸೇರಿದ ವೆಂಕಟಪ್ಪನಾಯಕನೂ

ಚುನಾವಣೆಯ ದಿನಾಂಕ ಹತ್ತಿರ ಬರುತ್ತಿರುವಂತೆಯೇ ಕಲಬುರ್ಗಿ ಜಿಲ್ಲೆಯ ಸುರಪುರ ಮತಕ್ಷೇತ್ರ ರಣಾಂಗಣವಾಗಿ ಪರಿವರ್ತಿತವಾಗುತ್ತಿದೆ. ಎರಡು ಅವಧಿಗಳ ಕಾಲ ರಾಜುಗೌಡ ಉರ್ಫ್ ನರಸಿಂಹ ನಾಯಕನ ಕೈಗೆ ಸುರಪುರ ಮತಕ್ಷೇತ್ರವನ್ನು ಜನ ಇಟ್ಟಾಗಿನಿಂದ ನಿದ್ದೆಗೆಟ್ಟಿರುವ ಮಾಜಿ ಶಾಸಕ ದೊರೆ ವೆಂಕಟಪ್ಪನಾಯಕ ಹತಾಶನಾಗಿದ್ದಾನೆ. ಇಷ್ಟು ದಿನಗಳವರೆಗೆ ತನ್ನನ್ನು ಪ್ರಶ್ನೆ ಮಾಡುವವರು ಯಾರಿದ್ದಾರೆ, ಜನರಿರುವುದೇ ತನ್ನ ಆಜ್ಞೆ ಪರಿಪಾಲಿಸಲಿಕ್ಕಾಗಿ ಎಂದು ತಿಳಿದುಕೊಂಡಿದ್ದ ವೆಂಕಟಪ್ಪನಾಯಕ ಎಂಬ ದೊರೆಯ ಅಮಲು ಈಗ ಸ್ವಲ್ಪ ಇಳಿದಿದೆ. ಜೊತೆಗೆ ಆತನ ಗತ್ತೂ ಕಡಿಮೆಯಾಗಿದೆ. ಆದರೂ "ಮಳೆ ನಿಂತರೂ ಮಳೆ ಹನಿ ನಿಲ್ಲಲಿಲ್ಲ" ಎಂಬಂತೆ ಅಧಿಕಾರದ ಚುಕ್ಕಾಣಿ ತನ್ನ ಕೈತಪ್ಪಿ ಹೋಗಿ ಕೈ ಕೈ ಹೊಸೆಯುವುದು ಮಾತ್ರ ನಿಂತಿಲ್ಲ. ಹಾಗಾಗಿ ಸದ್ಯದಲ್ಲೇ ನಡೆಯಲಿರುವ ಚುನಾವಣೆಯಲ್ಲಿ ಹೇಗಾದರೂ ಸೈ ಸುರಪುರವನ್ನು ಮತ್ತೆ ತನ್ನ ಉಡಿಗೆ ಹಾಕಿಕೊಳ್ಳಲೇಬೇಕೆಂಬ ತಯಾರಿಯಲ್ಲಿ ವೆಂಕಟಪ್ಪನಾಯಕ ತೊಡಗಿದ್ದಾನೆ.



ವೆಂಕಟಪ್ಪನಾಯಕ

ಸ್ವಭಾವತಃ ವೆಂಕಟಪ್ಪನಾಯಕ ಸನ್ನಡತೆ ಯುವನೆ. ಆದರೆ ಆತನ ಸಹೋದರ ರತ್ನಗಳಾದ ಮೌನೇಶನಾಯಕ ಹಾಗೂ ರಾಮನಾಯಕ ಮತ್ತು ಅವರಿಬ್ಬರಿಗೆ ಪುಷ್ಠಿ ಕೊಡುವವರಂತೆ ತಿರುಗಾಡುವ ಶಾಂತಗೌಡ, ಬಸ್ಸನಗೌಡ ಯಡಿಯಾಪುರ, ಖಲೀಲ ಅಹ್ಮದ ದಖನಿ, ರಾಜಾ ಪಿಡ್ಡಿನಾಯಕ ತರಹದವರ ದೆಸೆಯಿಂದ ತನ್ನ ವರ್ಚಸ್ಸನ್ನು ಕಳೆಕೊಳ್ಳುತ್ತಿದ್ದಾನೆ. ಹಿಂದೊಂದು ಸಂದರ್ಭದಲ್ಲಿ ವೆಂಕಟಪ್ಪನಾಯಕ ತಮ್ಮ ಮನೆಯ ಅಂಗಳದ ಒಳಗಡೆ ಯಾರನ್ನೂ ಬಿಟ್ಟುಕೊಳ್ಳುತ್ತಿರಲಿಲ್ಲ, ಯಾರೂ ಅವರ ಎದುರಾ ಎದುರು ಕುರ್ಚಿಯಲ್ಲಿ ಕುಳಿತುಕೊಳ್ಳುವಂತಿರಲಿಲ್ಲ, ಅಕಸ್ಮಾತ್ ಈ 'ಘನ ಸಂಪ್ರದಾಯ'ದ ಬಗ್ಗೆ ಗೊತ್ತಿಲ್ಲದ ಅಧಿಕಾರಿಗಳು ಅಥವಾ ಪತ್ರಕರ್ತರು ಅವರ ಎದುರು ಕುಳಿತುಕೊಂಡರೆ ಅವರ ಮೇಲೆ ಇಲ್ಲಸಲ್ಲದ ಲಿಗಾಡಿಗಳನ್ನು ತಳುಕು ಹಾಕಿಸಿ, ಬಿದ್ದು ಬಿದ್ದು ನಗುತ್ತಿದ್ದರು. ತಮ್ಮ ಹಿಂಬಾಲಕರೆಂಬ ಸಾಕುನಾಯಿಗಳ ಮೂಲಕ ಅವರಿಗೆ ಚಿತ್ರಹಿಂಸೆ ಕೊಡಿಸಿ ಅಟ್ಟಹಾಸ ಮೆರೆಯುತ್ತಿದ್ದರು.




ರಾಜು ಗೌಡ

ಅದೇನು ಕಾರಣವೋ ಏನೋ ಬಹಳಷ್ಟು ಕಾಲ ಅಧಿಕಾರ ಇವರ ಮನೆಯಲ್ಲೇ ಕಾಲು ಮುರಿದುಕೊಂಡು ಬಿದ್ದುಬಿಟ್ಟಿತ್ತು. ಸಂಸತ್ ಸದಸ್ಯನಾಗಿ ರಾಜಾರಂಗಪ್ಪನಾಯಕ, ಶಾಸಕನಾಗಿ ವೆಂಕಟಪ್ಪನಾಯಕ, ತಾಲ್ಲೂಕು ಪಂಚಾಯತಿ ಅಧ್ಯಕ್ಷನಾಗಿ ಮೌನೇಶನಾಯಕ ಎಂಬ ಒಂದೇ ಮನೆಯ ಸಹೋದರರು ಆಯ್ಕೆಯಾದರೆ ಏನೇನು ಅನಾಹುತಗಳು ಘಟಿಸಬೇಕೋ?! ಅವೆಲ್ಲವೂ ಯಥೇಚ್ಛವಾಗಿ ನಡೆದುಹೋದವು. ಲಾಂಗು, ಮಚ್ಚು, ಕಲ್ಲು, ಕವಣೆ ಇಡೀ ಕ್ಷೇತ್ರದಲ್ಲಿ ಕೆಲವರ್ಷಗಳ ಕಾಲ ಕೇಕೇ ಹಾಕಿ ಕುಣಿದವು. ಇವರ ಆಟಾಟೋಪದ ಮದ ಇಳಿಸಬೇಕಿದ್ದ ಸರಕಾರಿ ಇಲಾಖೆಗಳೂ ಅದೇಕೋ ಗಪ್‌ಚುಪ್ ಕುಳಿತವು. ಪೊಲೀಸ್‌ರಂತಹ ಪೊಲೀಸರಿಗೇ ಇಲ್ಲಿ ರಕ್ಷಣೆ ಕೊಡಬೇಕಾದ ದುರ್ಗತಿ ಒದಗಿಬಂದಿತ್ತು ಎಂಬುದು ಸತ್ಯ ಸಂಗತಿ.

ಇಂಥ ಭಯದ ವಾತಾವರಣ ಬಹುಶಃ ಎಂದಿಗೂ ಸರಿಹೋಗುವುದಿಲ್ಲ ಎಂದು ಜನ ಭಾವಿಸಿದ್ದರು. ಆದರೆ ಕೊಡೆಕಲ್ ಜಿಲ್ಲಾ ಪಂಚಾಯತಿಯಿಂದ ಗೆದ್ದು ಬಂದ ನರಸಿಂಹನಾಯಕ ಎಂಬಾತ ಮೊದಲ ಬಾರಿಗೆ ಇವರ ವಿರುದ್ಧ ಸೆಡ್ಡು ಹೊಡೆದು ನಿಂತ. ಆತನನ್ನು ಗುರುತಿಸಿದ ಜನರು ತಮ್ಮ ಅಷ್ಟು ದಿನದ ನೋವು, ಆಕ್ರೋಶಕ್ಕೆ ಈತನೇ ತಕ್ಕ ಉತ್ತರ ಎಂದು ನಂಬಿದರು. ಆತನ ಪಕ್ಷ-ಗಿಕ್ಷಗಳನ್ನು ಗಣನೆಗೆ ತೆಗೆದುಕೊಳ್ಳದೆ ರಾಜುಗೌಡ ಉರ್ಫ್ ನರಸಿಂಹನಾಯಕನನ್ನು ಸುರಪುರ ಮತಕ್ಷೇತ್ರದಿಂದ ಗೆಲ್ಲಿಸಿದರು.

ಇವತ್ತಿಗೂ ಬೇರೆ ಕ್ಷೇತ್ರಗಳಿಗೆ ಹೋಲಿಸಿದರೆ ನರಸಿಂಹನಾಯಕ ಹೇಳಿಕೊಳ್ಳುವಂಥ ಅಥವಾ ಎದ್ದು ಕಾಣುವಂಥ ಯಾವುದೇ ಕೆಲಸಗಳನ್ನು ಕ್ಷೇತ್ರದಲ್ಲಿ ಮಾಡಿಲ್ಲವಾದರೂ ಆತನ ಸನ್ನಡತೆ, ದೊರೆಗಳಿಗೆ ಸೆಡ್ಡು ಹೊಡೆದು ನಿಂತ ಧೀಮಂತಿಕೆಯಿಂದಾಗಿ ಜನಸಾಮಾನ್ಯ ಆತನೊಂದಿಗೆ ಗುರುತಿಸಿಕೊಳ್ಳುತ್ತಾರೆ. ಇದನ್ನು ಕಂಡು ಒಳಗೊಳಗೆ ಕರುಬುತ್ತಿರುವ, ಹತಾಶ ಮನಸ್ಥಿತಿಗೆ ಇಳಿದಿರುವ, ತಮ್ಮ ಅಸ್ತಿತ್ವದ ಕೊನೆಯ ಹೋರಾಟವೆಂದೇ ತಿಳಿದುಕೊಂಡಿರುವ ವೆಂಕಟಪ್ಪನಾಯಕನ ಹಿಂಬಾಲಕರು ಹಾಗೂ ಸಹೋದರರು ದಾಂಧಲೆಗೆ ಇಳಿದಿದ್ದಾರೆ. ಇವರ ಪುಂಡಾಟದಲ್ಲಿ ಮತ್ತದೆ ತೋಳ್ಬಲ, ಬಡಿಗೆ, ಕಲ್ಲು, ಲಾಂಗು ಮತ್ತು ಮಚ್ಚುಗಳು ರಾರಾಜಿಸುತ್ತಿವೆ. ಹಿಂದೆಲ್ಲ ಒಬ್ಬ ದೊರೆ ಹೇಗೆ ಮತ್ತೊಬ್ಬ ದೊರೆಯ ಮೇಲೆ ದಂಡೆತ್ತಿ ಹೋಗಿ ಆತನ ರಾಜ್ಯವನ್ನು ವಶಪಡಿಸಿಕೊಳ್ಳುತ್ತಿದ್ದರೋ ಹಾಗೇ ತಾವೂ ಮಾಡಬೇಕೆಂದು ತಿಳಿದಿದೆ.

## ಸುರಪುರ



ಜಗಮ್ಮ ನವರ್

ತೀರಾ ಇತ್ತೀಚೆಗೆ ಮಾರ್ಚ್ 26ರಂದು ಚುನಾವಣಾ ಸೂಕ್ತ ಅಭ್ಯರ್ಥಿಯ ತಲಾಷೆಗಾಗಿ ಯಾದಗಿರಿಗೆ ಬಂದಿದ್ದ ಕಾಂಗ್ರೆಸ್ ಸಮಿತಿ ಸದಸ್ಯರನ್ನು ಭೇಟಿಯಾಗಲು ಮೊದಲು ಕಾಂಗ್ರೆಸ್‌ನ ವೆಂಕಟಪ್ಪನಾಯಕರಿಗೆ ಅವಕಾಶ ನೀಡಿತ್ತು. ಮಧ್ಯಾಹ್ನದ ಸಮಯ ತೀರಾ ಇತ್ತೀಚೆಗೆ ಎಂ.ಪಿ.ಪ್ರಕಾಶ್ ಜೊತೆ ಕಾಂಗ್ರೆಸ್ ಮಡಿಲಿಗೆ ಬಿದ್ದ ರಾಜುಗೌಡನಿಗೂ ಸಮಯ ನಿಗದಿ ಮಾಡಿತ್ತು. ಅಂದಂತೆ ಮೊದಲು ಯಾದಗಿರಿಗೆ ತನ್ನ ದಂಡು ತೆಗೆದುಕೊಂಡು ಹೋದವರು ವೆಂಕಟಪ್ಪನಾಯಕ. ಅವರು ಹಿಂತಿರುಗಿ ಬರುವ ವೇಳೆಗೆ ತನ್ನ ದಂಡನ್ನು ಕರಕೊಂಡು ಹೊರಟವರು ರಾಜುಗೌಡ. ಇವರಿಬ್ಬರ ನಡುವೆ ಉರಿಯುತ್ತಿರುವ ದ್ವೇಷದ ಹಗೆಗೆ ಕಡ್ಡಿ ಗೀರುವುದೇ ಬೇಕಿಲ್ಲ, ಇವರಿಬ್ಬರೂ ಮುಖಾಮುಖಿ ಎದುರಾಗುವುದಿರಲಿ, ಇವರ ಅನುಯಾ(ನಾ)ಯಿಗಳು ಸಮೀಪ ಬರುತ್ತಿರುವಂತೆ ದ್ವೇಷದ ಜ್ವಾಲೆ ಭುಗಿಲೆದ್ದು ಬಿಡುತ್ತವೆ.





ದಾಳಿಯಲ್ಲಿ ಪೆಟ್ಟು ತಿಂದವರು


ಅಂದು ನಾಯ್ಕರ್ ಹತ್ತಿರ ನಡೆದ ಮಾರಾಮಾರಿಯನ್ನು ಪ್ರತ್ಯಕ್ಷಕಂಡ ಜನ ಹೇಳುವುದು ಅದೊಂದು ವಿನಾಕಾರಣದ ಹೊಡೆದಾಟ ಎಂದು. "ಜಾಣಜಾಣನಿಗೆ ಮೂರು ದಾರಿ . ಜಾಣ ಕೋಣನಿಗೆ ಎರಡು ದಾರಿ. ಕೋಣ ಕೋಣಗಳಿಗೆ ಒಂದೇ ದಾರಿ" ಎಂಬಂತೆ ಕೊನೆಯ ದಾರಿಯನ್ನೆ ಆಯ್ಕೆ ಮಾಡಿಕೊಂಡ ಇವರಿಬ್ಬರ ಅನುಯಾಯಿಗಳು ಸಿನಿಮೀಯ ಮಾದರಿಯಲ್ಲಿ ಹೊಡೆದಾಟ ಆರಂಭಿಸಿ ಜನಸಾಮಾನ್ಯರಲ್ಲಿ ನಡುಕ ಹುಟ್ಟಿಸಿದ್ದಾರೆ. ಕೊನೆಗೂ ವೆಂಕಟಪ್ಪನಾಯಕನ ಬಂಧನವಾಗಿ ಆತ ಕೃಷ್ಣನ ಕಾರಸ್ಥಾನಕ್ಕೂ ಅಡಿಯಿಟ್ಟು ಬಂದಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮನೀಷ ಖರ್ಬೀಕರ್ ಹಾಗೂ ಡಿವೈಎಸ್‌ಪಿ ಡಿ.ಎಸ್. ಜಗಮ್ಮೈನವರ್ ಬಹಳ ದಿನಗಳ ನಂತರವಾದರೂ ಸೂಕ್ತಕ್ರಮ ಕೈಗೊಂಡು ಸರಕಾರ ಇನ್ನು ಸತ್ತಿಲ್ಲ ಎಂಬುದನ್ನು ಸಾಬೀತು ಪಡಿಸಿದ್ದಾರೆ.



ವೆಂಕಟಪ್ಪನಾಯಕ ಬೆಂಬಲಿಗರ ಆಕ್ರೋಶಕ್ಕೆ ತುತ್ತಾಗಿ ಜಖಂಗೊಂಡ ಬಸ್ಸು

■ ಗೇನುನಾಯಕ ರಾಠೋಡ

# ಪೇಜಾವರರ ಆರೋಪ



"ರಾಜ್ಯದಲ್ಲಿ ಇತರ ಜನಾಂಗದವರಿಗೆ ಲಿಂಗದೀಕ್ಷೆ ಕೊಟ್ಟು ಮತಾಂತರ ಮಾಡುವ ಪ್ರಕ್ರಿಯೆ ನಡೆಯುತ್ತಿದೆ." -ಎಂದು ಪೇಜಾವರ ಆರೋಪಿಸಿದ್ದಾರೆ. ಪೇಜಾವರ ಸ್ವಾಮಿ ತಮ್ಮ ಬ್ರಾಹ್ಮಣ ಜಾತಿಯ ಮಾಧ್ವ ಪಂಗಡದವರ ಕಷ್ಟ-ಸುಖದ ಬಗ್ಗೆ, ಮಧ್ವಾಚಾರ್ಯರ ಫಿಲಾಸಫಿ ಬಗ್ಗೆ ಏನೇ ಮಾತಾಡಿದ್ದರೂ ಪರವಾಗಿರಲಿಲ್ಲ. ಆದರೆ ಈ ಧಾರ್ಮಿಕ ದೊಣ್ಣೆ ನಾಯಕ 'ಬೇರೆ ಜಾತಿಯವರಿಗೆ ಲಿಂಗದೀಕ್ಷೆ ನೀಡುವುದು ಸರಿಯಲ್ಲ' ಎಂಬಂತೆ ಮಾತನಾಡಿರುವುದು ಒಂದು ಶುದ್ಧ ತಲಹರಟೆಯಲ್ಲದೆ ಬೇರೇನೂ ಅಲ್ಲ.

# 'ಲಿಂಗಾಯತರು ಮತಾಂತರಿಗಳು'









ಪೇಜಾವರದ ಮಾಧ್ವ ಮಠಾಧೀಶ ವಿಶ್ವೇಶತೀರ್ಥರ ಕುಚೇಷ್ಟೆಯ ಮಾತುಗಳು ಈಗ ಲಿಂಗಾಯತರ ವಿರುದ್ಧ ತಿರುಗಿವೆ.

"ರಾಜ್ಯದಲ್ಲಿ ಇತರ ಜನಾಂಗದವರಿಗೆ ಲಿಂಗದೀಕ್ಷೆ ಕೊಟ್ಟು ಮತಾಂತರ ಮಾಡುವ ಪ್ರಕ್ರಿಯೆ ನಡೆಯುತ್ತಿದೆ."

-ಎಂದು ಪೇಜಾವರ ಆಕ್ಷೇಪಿಸಿದ್ದಾರೆ. ಮೊನ್ನೆ ಮಾರ್ಚ್ ಹದಿನೈದರಂದು ಮೈಸೂರಿನಲ್ಲಿ ನಡೆದ 26 ನೇ ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ ಉದ್ಘಾಟಿಸಿ ಭಾಷಣ ಮಾಡಿದ ಪೇಜಾವರ ಸ್ವಾಮಿ ತಮ್ಮ ಬ್ರಾಹ್ಮಣ ಜಾತಿಯ ಮಾಧ್ವ ಪಂಗಡದವರ ಕಷ್ಟ-ಸುಖದ ಬಗ್ಗೆ, ಮಧ್ವಾಚಾರ್ಯರ ಫಿಲಾಸಫಿ ಬಗ್ಗೆ ಏನೇ ಮಾತಾಡಿದ್ದರೂ ಪರವಾಗಿರಲಿಲ್ಲ. ಆದರೆ ಈ ಧಾರ್ಮಿಕ ದೊಣ್ಣೆ ನಾಯಕ ಅವತ್ತಿನ ಸಭೆಯಲ್ಲಿ 'ಬೇರೆ ಜಾತಿಯುವರಿಗೆ ಲಿಂಗದೀಕ್ಷೆ ನೀಡುವುದು ಸರಿಯಲ್ಲ' ಎಂಬಂತೆ ಮಾತನಾಡಿರುವುದು ಒಂದು ಶುದ್ಧ ತಲಹರಟೆಯಲ್ಲದೆ ಬೇರೇನೂ ಅಲ್ಲ.

ಅಲ್ಲಿ ಪೇಜಾವರ ಸ್ವಾಮಿಯ ಸಿಟ್ಟು, ಅಸಹನೆ ವ್ಯಕ್ತವಾಗಿರುವುದು ಕರ್ನಾಟಕದ ಪ್ರಮುಖ ಲಿಂಗಾಯತ ಮಠಾಧೀಶರಾದ ಚಿತ್ರದುರ್ಗದ ಮುರುಘಾಮಠದ ಶಿವಮೂರ್ತಿ ಶರಣರ ಮೇಲೆ. ಜೊತೆಗೆ ಭಾಲ್ಕಿಯ ಸ್ವಾಮೀಜಿ, ಯಾದವ, ಲಂಬಾಣಿ ಮತ್ತಿತರ ಮಠಾಧೀಶರೂ ಅವರ ಗುರಿಯಾಗಿದ್ದಾರೆ.

ಹೊಸ ಬಸವ ಧರ್ಮ ಸ್ಥಾಪನೆ ಇದಕ್ಕೆ ಒಂದು ಕಾರಣ. ಇನ್ನೊಂದು, ಶಿವಮೂರ್ತಿ ಶರಣರು 'ಜಾತಿ ಭೇದವಿಲ್ಲದೆ ಯಾರು ಬೇಕಾದರೂ ಲಿಂಗದೀಕ್ಷೆ ಪಡೆದು ಬಸವ ಧರ್ಮ ಸ್ವೀಕರಿಸಬಹುದೆಂದು' ಹೇಳಿ ಪ್ರಚಾರ ಕಾರ್ಯ ನಡೆಸುತ್ತಿರುವುದೂ ಕೂಡ ಪೇಜಾವರನಂತಹ ಬ್ರಾಹ್ಮಣ ಪುರೋಹಿತಶಾಹಿಗಳ ಹೊಟ್ಟೆಯಲ್ಲಿ ಖಾರ ಕಲೆಸಿದಂತಾಗಿದೆ.

## ಧಾರ್ಮಿಕ ಗೂಂಡಾಗಿರಿ

ಹಾಗೆ ನೋಡಿದರೆ ಅನ್ಯಧರ್ಮೀಯರ ಆಂತರಿಕ ವಿಚಾರದಲ್ಲಿ ಪೇಜಾವರ ತಲೆ ಹಾಕುತ್ತಿರುವುದು ಇದೇ ಮೊದಲೇನಲ್ಲ. ವಿಶ್ವಹಿಂದೂ ಪರಿಷತ್ತಿನ ಉಪಾಧ್ಯಕ್ಷರಾಗಿ ಬಾಬರಿ ಮಸೀದಿ ಬೀಳಿಸುವ ನೀಚ ಕಾರ್ಯ ನಡೆಸಿದ್ದೇ ಅಲ್ಲದೆ ಹಂಪಿ ಇಸ್ಲಾಮೀಕರಣವಾಗುತ್ತಿದೆ ಎನ್ನುವವರೆಗೂ ಈ ಪೇಜಾವರರ ಮುಸ್ಲಿಂ ದ್ವೇಷ ವ್ಯಕ್ತವಾಗಿದೆ. ತೀರಾ ಇತ್ತೀಚೆಗೆ ತಿರುಪತಿಯಲ್ಲಿ ಕ್ರಿಶ್ಚಿಯನ್ ಧರ್ಮಪ್ರಚಾರ ನಡೆಯುತ್ತಿದೆ ಎಂದು ಹುಯಿಲೆಬ್ಬಿಸಿ ಉಪವಾಸ ಕೂರಲು ತಯಾರಾಗಿದ್ದರು. ದಿನಬೆಳಗಾದರೆ ಹಿಂದೂ ಐಕ್ಯತೆ ಬಗ್ಗೆ ಶಂಖ ಊದುತ್ತಲೇ ಉಡುಪಿಯಲ್ಲೇ ಅಷ್ಟಮಠಾಧೀಶನೊಬ್ಬ ಚಾರಿತ್ರಿಕ ಕನಕ ಗೋಪುರ ಕೆಡವಿದಾಗ ಖಂಡಿಸದೆ ಸುಮ್ಮನಾಗಿದ್ದರು.

ಹೀಗೆ ಅನ್ಯ ಧರ್ಮ-ಜಾತಿಗಳವರಿಗೆ ಕಿರುಕುಳ ನೀಡಿ ತಮ್ಮ ಜನ್ಮ ಪಾವನಗೊಳಿಸಿಕೊಂಡ ನಂತರ ಕೊನೆಗೆ ತಮ್ಮದೇ ಮಾಧ್ವ ಮಠದವರ ವಿರುದ್ಧ 'ಸಮುದ್ರೋಲ್ಲಂಘನ'ದ ವಿವಾದ ಸೃಷ್ಟಿಸಿದ್ದರು. 2008 ರ ಜನವರಿಯಲ್ಲಿ ಪುತ್ತಿಗೆ ಮಠಾಧೀಶರಾದ ಸುಗುಣೇಂದ್ರ ತೀರ್ಥರು ಪರ್ಯಾಯ ಪೀಠವೇರುವ ಸಂದರ್ಭದಲ್ಲಿ ಅವರು ಸಮುದ್ರ ದಾಟಿ ಅಮೆರಿಕಾಗೆ ಹೋಗಿದ್ದನ್ನೇ ನೆಪ ಮಾಡಿಕೊಂಡು ಪರ್ಯಾಯ ಪೀಠವೇರದಂತೆ ರಂಪ ಮಾಡಿದ್ದರು. ಉಪವಾಸ ಮುಷ್ಕರದ ಬೆದರಿಕೆಯನ್ನು ಹಾಕಿದ್ದರು. ಕೊನೆಗೆ ಈಗ ಸ್ವತಃ ಪೇಜಾವರರೇ ವಿದೇಶಗಳಲ್ಲಿ ಮಾಧ್ವತತ್ವ ಪ್ರಚಾರಕ್ಕೆ ಮಠ ಸ್ಥಾಪಿಸುವುದಾಗಿ ಘೋಷಿಸಿದ್ದಾರೆ.

## ಈ ಇಬ್ಬಂದಿತನಕ್ಕೆ ಏನೆನ್ನಬೇಕು?

ಸುಗುಣೇಂದ್ರ ತೀರ್ಥರು ವಿದೇಶಕ್ಕೆ ಹೋಗಿದ್ದು ತಪ್ಪು ಎಂದಾದರೆ




## ಅನಂತಪದ್ಮನಾಭನಾದ ಕತೆ

ಉಡುಪಿಯ ಅಷ್ಟಮಠಗಳ ವಠಾರದ ವಿದ್ವಾಂಸ ಬನ್ನಂಜೆ ಗೋವಿಂದಾಚಾರ್ಯ ಇತ್ತೀಚೆಗೆ ತರಂಗ ವಾರಪತ್ರಿಕೆಯಲ್ಲಿ (ಜನವರಿ 24 ರ ಸಂಚಿಕೆ ಪುಟ 10) 'ಅಷ್ಟಯತಿ ಕರಾರ್ಚಿತ: ಉಡುಪಿಯ ಕಡಗೋಲ ಕೃಷ್ಣ' ಎಂಬ ದೀರ್ಘಲೇಖನದಲ್ಲಿ ಈ ವಿಚಾರ ಪ್ರಸ್ತಾಪಿಸಿದ್ದಾರೆ.

ಆತನ ಮಾತುಗಳಲ್ಲೇ ಹೇಳಬೇಕೆಂದರೆ "ಇತಿಹಾಸ ಏನೇ ಇರಲಿ. ಚಂದ್ರೇಶ್ವರ ಮತ್ತು ಅನಂತೇಶ್ವರ ಉಡುಪಿಯ ಎರಡು ಪ್ರಾಚೀನ ದೇವಾಲಯಗಳು. ಅನಂತೇಶ್ವರ ಇತ್ತೀಚಿನ ಹೆಸರು. ಅನಂತಾಸನ, ಅನಂತಪದ್ಮನಾಭ ಕೂಡ. ಹಿಂದಿನ ಹೆಸರು ಮಹಾದೇವನ ಗುಡಿ ಅಥವಾ ಪಡು ದೇವಸ್ಥಾನ, ಚಂದ್ರೇಶ್ವರ ಮೂಡು ದೇವಸ್ಥಾನ' ಎಂದು ಒಪ್ಪಿಕೊಳ್ಳುತ್ತಾರೆ.

ಎಲ್ಲರಿಗೂ ಗೊತ್ತಿರುವಂತೆ ಈ ಅತ್ಯಂತ ಪ್ರಾಚೀನ ದೇಗುಲದ ಅತೀ ಒಳಭಾಗದಲ್ಲಿ ಈಗಲೂ ಒಂದು ಲಿಂಗವಿದೆ. ಅಂದರೆ ಮೂಲತಃ ಶಿವನ ದೇವಸ್ಥಾನವಿದು. ಅಷ್ಟೇ ಯಾಕೆ ಉಡುಪಿಯ ಮೂಲ ಹೆಸರು ಶಿವಳ್ಳಿ ಎಂಬುದಾಗಿತ್ತು.

ಕೆಲವು ವಿದ್ವಾಂಸರು ಈ ಬಗ್ಗೆ ಹೇಳುವುದೇನೆಂದರೆ 'ಉಡುಪ ಅಂದರೆ ಚಂದ್ರ, ಉಡುಪಿ ಅಂದರೆ ಚಂದ್ರನಿಗೊಲಿದ ಈಶ್ವರ. ಅರ್ಥಾತ್ ಚಂದ್ರನನ್ನು ಧರಿಸಿದವನು' ಎಂದು.



ಬನ್ನಂಜೆ

ಆದರೆ ಇವತ್ತಿನ ಅಷ್ಟಮಠಾಧೀಶರ ಮಾಧ್ವ ತತ್ವದ ಅಟ್ಟಹಾಸದಲ್ಲಿ ಲಿಂಗಾಯತರ ಅನಂತೇಶ್ವರ (ಶಂಕರ-ನಾರಾಯಣ ಲಿಂಗ) ದೇಗುಲ ಹಾಗೇ ನಿಧಾನವಾಗಿ ಬ್ರಾಹ್ಮಣೀಕರಣಗೊಂಡು ಈಗ ಅನಂತಪದ್ಮನಾಭ ದೇಗುಲವಾಗಿ ಹೋಗಿದೆ.

ಇದೇ ಪರಂಪರೆಯಲ್ಲಿ ಬಂದಿರುವ ಪೇಜಾವರ ಸ್ವಾಮಿ, ಬಸವ ಧರ್ಮಾನುಯಾಯಿಗಳ 'ಲಿಂಗದೀಕ್ಷೆ'ಯನ್ನು ಖಂಡಿಸಿ ಮಾತನಾಡುವುದರಲ್ಲಿ ಅಚ್ಚರಿ ಪಡಬೇಕಿಲ್ಲ.

# ಪೇಜಾವರರ ಫಾರಿನ್ ಮಠ

# ಪುತ್ತಿಗೆ ಮಠದ ಭಕ್ತರ ಪ್ರಶ್ನೆಗಳು

ವಿದೇಶಕ್ಕೆ ಹೋದರೆಂದು ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥರಿಗೆ ಪರ್ಯಾಯ ಪೀಠಾರೋಹಣಕ್ಕೆ ಅಡ್ಡಿಪಡಿಸಿದ ಪೇಜಾವರ ಈಗ ತಾನೇ ಸಮುದ್ರದಾಚೆ ಫಾರಿನ್ ಮಠ ಸ್ಥಾಪಿಸಲು ರೆಡಿಯಾಗಿದ್ದಾರೆ.

ಪೇಜಾವರರ ಈ ಗಂಟೆಗೊಂದು ನಾಟಕದ ಮಾತಿನಿಂದ ಕೆರಳಿ ಕ್ಷುದ್ರರಾಗಿರುವ ಪುತ್ತಿಗೆ ಮಠದ ಕೆಲ ಭಕ್ತರು ಕರಪತ್ರವೊಂದನ್ನು ಪ್ರಕಟಿಸಿ ಪೇಜಾವರರ ನಿಜಬಣ್ಣ ಏನೆಂದು ಬಹಿರಂಗಪಡಿಸಿದ್ದಾರೆ.

ಇದನ್ನು ನೀವೂ ಒಮ್ಮೆ ಪರಾಂಭರಿಸಿ.

1. ಸಾಗರದಾಟಿದವರಿಗೆ ಕೃಷ್ಣಪೂಜೆ ಇಲ್ಲವೆನ್ನುವ ಪೇಜಾವರರ ಮುಖವಾಡವಾಗಿ ಬಾಯಿ ತೆರೆಯುವ ಪ್ರಭುಂಜನ ಆಚಾರ್ಯರು ಪೇಜಾವರರ ಪರಂಪರೆಯಲ್ಲಿ ಬಂದ ಶ್ರೀ ವಿಜಯಧ್ವಜರು ಸಮುದ್ರಯಾನದ ಅಭಿಲಾಷೆಗಾಗಿ ಹಡಗಿನಲ್ಲಿ ಪ್ರಯಾಣ ಮಾಡಿ ಅಪಘಾತಕ್ಕೊಳಗಾಗಿ ಬೇರೆ ಖಂಡದಲ್ಲಿ ಹಲವಾರು ದಿನಗಳಿದ್ದು ಅಲ್ಲಿ ಸ್ವತಃ ಅಗ್ನಿ ಇತ್ಯಾದಿಗಳನ್ನು ಸ್ವಹಸ್ತಗಳಿಂದ ಸ್ಪರ್ಶಿಸಿ ದೇವರಿಗೆ ನಿವೇದನೆ ಇಲ್ಲದ ಆಹಾರವನ್ನು ಸ್ವೀಕರಿಸಿ ಸದಾಚಾರ ಉಲ್ಲಂಘಿಸಿ ಉತ್ತರಾದಿ ಮಠದ ಸಮಕಾಲೀನ ಸ್ವಾಮೀಜಿಯವರಿಂದ ಆಜ್ಞೆಗೆ ಒಳಪಟ್ಟು ಭಾಗವತಕ್ಕೆ ವ್ಯಾಖ್ಯಾನ ಮಾಡಿ ಪರಿಶುದ್ಧರಾದರೆಂದು 'ಗುರುಚರ್ಯ' ಗ್ರಂಥದಲ್ಲಿ ಉಲ್ಲೇಖವಿದೆ. ಆನಂತರ ಉಡುಪಿಯ ಕೃಷ್ಣನನ್ನು ತಮ್ಮ ಪರ್ಯಾಯದಲ್ಲಿ ಪೂಜಿಸಿದ್ದಾಗಿ ಪೂರ್ಣಬೋಧ ವಂಶ ಕಥಾಕಲ್ಪತರು ಹೇಳುತ್ತದೆ. ಆ ಎರಡು ಗ್ರಂಥಗಳು ಅಪ್ರಮಾಣ್ಯವೇ? ಇಲ್ಲ ಪೇಜಾವರರ ಪರಂಪರೆಯು ಶಾಸ್ತ್ರ ಉಲ್ಲಂಘನೆಯೇ?

2. ಅಷ್ಟ ಮಠಗಳಿಗೆ ಸಂಬಂಧವಿಲ್ಲದ ಭಂಡಾರುಕೇರಿ ಮಠದ ಶ್ರೀ ವಿದ್ಯಾಮಾನ್ಯರನ್ನು ಕೃಷ್ಣನನ್ನು ಮುಟ್ಟಿ ಪೂಜಿಸುವಂತೆ ಮಾಡಿದ ಪೇಜಾವರರ ಸಂಪ್ರದಾಯ ವಿರೋಧಿ ಕೃತ್ಯಕ್ಕೆ ಆಗ ಬಹಿಷ್ಕಾರದ ಒತ್ತಾಯ ಏಕೆ ಮಾಡಲಿಲ್ಲ ಹೇಳಿ? ಪಲಿಮಾರು ಮಠಕ್ಕೆ ದ್ವಂದ್ವ ಮಠ ಆಗ ಇರಲಿಲ್ಲವೇ? (700 ವರ್ಷಗಳ ಸಂಪ್ರದಾಯದಲ್ಲಾಗಲೀ, ಶಾಸ್ತ್ರದಲ್ಲಾಗಲೀ ಈ ರೀತಿಯ ಉದಾಹರಣೆ ನಡೆದಿಲ್ಲ)

3. ಬದನೇಕಾಯಿಯನ್ನು (ವಾದಿರಾಜಗುಳ್ಳ) ಕೃಷ್ಣನಿಗೆ ನಿವೇದನೆ ಮಾಡಿ ಯತಿಗಳೆಲ್ಲರೂ ಸ್ವೀಕರಿಸುವಂತೆ ಹೊಸ ಸಂಪ್ರದಾಯವನ್ನು ವಾದಿರಾಜರು ತಂದರು. ಮಧ್ವಾಚಾರ್ಯರ ನಂತರ 300 ವರ್ಷಗಳ ಕಾಲ ಈ ಸಂಪ್ರದಾಯ ಇರಲಿಲ್ಲ ಎನ್ನುವುದು ಗಮನಾರ್ಹ. ವಾದಿರಾಜರ ಈ ಕೆಲಸವು ಸಂಪ್ರದಾಯ ವಿರೋಧ ಹಾಗೂ ಶಾಸ್ತ್ರ ವಿರೋಧವಲ್ಲವೇ?

4. ಆಚಾರ್ಯ ಮಧ್ವರು ಸ್ವತಃ ಪ್ರತಿಷ್ಠಾಪಿಸಿದ ಕೃಷ್ಣ ದ್ವಾರಕೆಯ ಸಮುದ್ರದಲ್ಲಿ ಎರಡು ಸಾವಿರ ವರ್ಷಗಳ ಕಾಲ ಮುಳುಗಿದ್ದ ಎನ್ನುವುದು ಸಾರ್ವಜನಿಕರಿಗೆ ಗೊತ್ತಿದೆ. ಕಾಗಕ್ಕ-ಗುಬ್ಬಕ್ಕನ ಕಥೆ ಹೇಳಬೇಡಿ. ಆ ಸಮುದ್ರದಿಂದ ಬಂ ಕೃಷ್ಣನನ್ನು ಪೇಜಾವರರು ಮುಟ್ಟಿದ್ದಾರೆ ತಿಳಿದಿರಲಿ.

5. ಪರ್ಯಾಯದ ಅವಧಿ ಎರಡು ತಿಂಗಳಿಗೆ ನಿಗದಿಪಡಿಸಿದ್ದು ಆಚಾರ್ಯ ಮಧ್ವರು. ಆದರೆ ಅದನ್ನು ಎರಡು ವರ್ಷಕ್ಕೆ ವಿಸ್ತರಿಸಿದ ವಾದಿರಾಜ ಸೋದೇ ಮಠಕ್ಕೆ ಆ ಅಧಿಕಾರ ಯಾವ ಸಂಪ್ರದಾಯ/ಶಾಸ್ತ್ರ ನೀಡಿ ಮಹಾಸ್ವಾಮೀ?

6. ಸರ್ಕಾರ ಅನುಮತಿ ಇಲ್ಲದೇ ಲೇವಾದೇವಿ ಮಾಡುವುದು ಬೊಕ್ಕಸ ಬರಬಹುದಾದ ಆದಾಯ ತಪ್ಪಿಸಿ ಕ್ರಿಮಿನಲ್ ಆದ ಪೇಜಾವರರಿಗೆ ಯಾವುದ ಬುದ್ಧಿವಾದ ಹೇಳದೇ ಆ ಕೇಸ್‌ನ ಡಾ. ವೆಂಕಟೇಶ್ ಇವರ ಮೇ ಮಾರಣಾಂತಿಕ ಹಲ್ಲೆ ನಡೆಸಿ ಆರೋಪಕ್ಕೆ ಒಳಗಾಗಿರುವ ಪೇಜಾವರರ ಪೀಠತ್ಯಾಗ ಮಾಡುವಂತೆ ತಿಳಿಯ ಹೇಳದೆ ಇರುವುದು ಸಾರ್ವಜನಿಕರಿ ಗೊತ್ತಾಗದ ಸ್ವಜನಪಕ್ಷಪಾತವೇ? ಇಲ್ಲಾ ಪ್ರಭುಂಜನಾಚಾರ್ಯರು ಪೇಜಾವರರಿಂ ಲಕ್ಷ ರೂ.ಗಳ ಎರಡು ಪ್ರಶಸ್ತಿ ಸ್ವೀಕರಿಸಿದ್ದಕ್ಕೆ ತೀರಿಸುವ ಋಣವೋ?

7. ಮಹಾಭಾರತ ತಾತ್ಪರ್ಯ ನಿರ್ಣಯ (ಮಧ್ವಾಚಾರ್ಯರ ಕೃ ಬೆಂಗಳೂರಿನ ವಿದ್ಯಾಪೀಠದ ಕಿಂಗ್ ಪೇಜಾವರರು ತಮ್ಮ ಕೈಯಿಂದ ಅನುವಾದಿ ಮೊದಲ ಸಂಪುಟ ಮಾತ್ರ ಪ್ರಭುಂಜನರಿಂದ ಬರೆಸಿ ಆ ಬರಹ ಸಾರ್ವಜನಿಕರಿಂ ತಿರಸ್ಕೃತಗೊಂಡಾಗ ಮೊದಲನೆಯ ಸಂಪುಟದಿಂದ ಕೊನೆಯ ಸಂಪುಟ ವರೆಗೆ ಅಲ್ಲಿಂದ ಕಿತ್ತೆಸೆದು ಡಾ. ಹಯವದನ ಪುರಾಣಿಕರಿಂದ ಪುನಃ ಸಮಗ್ರವಾ ಬರೆಸಿದ್ದು ನಾವ್ಯಾರೂ ಮರೆತಿಲ್ಲ. ಪ್ರಭುಂಜನರ ಕೆಟ್ಟ ಬರಹವನ್ನು ಪೇಜಾವರ ಆಗ ಇಷ್ಟಪಡಲಿಲ್ಲ ಎನ್ನುವುದು ನಗ್ನಸತ್ಯ.

ಜಾವರರು ವಿದೇಶದಲ್ಲಿ ಮಠ
ಸುವುದು ಏನ
ಾಗುತ್ತವ?
ಪೇಜಾವರರ ಇಂಥ
ವಿಶೂಲಿಸಿಂಧು ನಿಲುವುಗಳು
ವೆರಡಲ್ಲ.

## ಲಿಂಗದೀಕ್ಷೆಗೆ ವಿರೋಧ ಯಾಕೆ

ಕರ್ನಾಟಕದ ಬಹುಸಂಖ್ಯಾತ
ಾಲಿ ಜನಾಂಗಗಳಲ್ಲಿ
ವಾಗಿರುವ ಲಿಂಗಾಯತರು
ಜಾವರನಂಥ ಬ್ರಾಹ್ಮಣ
ಾಧೀಶರ
ಯಾಳುಗಳೇನಲ್ಲ. ಲಿಂಗಾಯತ
ವಾ ವೀರಶೈವರು ಒಂದು
ತ್ಯೇಕ ಧರ್ಮವಾಗಿದ್ದು ಅದು
ದೂ ಧರ್ಮವೇನಲ್ಲ.
ರಾರು ಒಳ ಜಾತಿ
ಗಡಗಳನ್ನು ಹೊಂದಿರುವ
ಗಾಯತ ಧರ್ಮವು ತನ್ನದೇ
ರ್ಮಿಕ ಪರಂಪರೆ, ಸಂಸ್ಕೃತಿ,
ಾರವಿಚಾರಗಳನ್ನು ಹೊಂದಿದೆ.
ಶೇರೀತಿ ರಾಜ್ಯದ
ೂಲೆಮೂಲೆಗಳಲ್ಲಿ
ಗಾಯತರ ಮಠಗಳಿವೆ. ಅದರದೇ ಆದ ಗುರುಪರಂಪರೆಯನ್ನು
ೊಂದಿವೆ. ಸಾರಾಂಶದಲ್ಲಿ ಹೇಳಬೇಕೆಂದರೆ ಲಿಂಗಾಯತರಾಗಲಿ,
ಪರ ಧರ್ಮವಾಗಲೀ ಮಧ್ವ ಬ್ರಾಹ್ಮಣ ಪೇಜಾವರರ
ುಯಾಯಿಗಳೇನಲ್ಲ. ವಸ್ತುಸ್ಥಿತಿ ಹೀಗಿದ್ದರೂ ಕೂಡ ಲಿಂಗದೀಕ್ಷೆ
ಪೇಜಾವರ ಆಕ್ಷೇಪಣೆ ಮಾಡುತ್ತಿರುವುದೇಕೆ?

ಚಿತ್ರದುರ್ಗದ ಪ್ರಖ್ಯಾತ ಮುರುಘಾಮಠದ ಶ್ರೀಶಿವಮೂರ್ತಿ
ುರುಘರಾಜೇಂದ್ರ ಶರಣರು 2004ರ ಮೇ 1ರಂದು ಕೂಡಲಸಂಗ
ದಲ್ಲಿ ಒಂದು ಬೃಹತ್ ಸಮಾವೇಶ ನಡೆಸಿ 'ಬಸವ ಧರ್ಮ' ಸ್ಥಾಪನೆಯನ್ನು
ೋಷಿಸಿದ್ದರು. ಬಸವ ತತ್ವಗಳಲ್ಲಿ ನಂಬಿಕೆಯಿರುವ ಯಾವುದೇ ಜಾತಿ
ಾಂಗದವರು ಲಿಂಗದೀಕ್ಷೆ ಪಡೆಯುವ ಮೂಲಕ 'ಬಸವ ಧರ್ಮ'
ರಬಹುದೆಂದು ಬಹಿರಂಗವಾಗಿ ಆಹ್ವಾನವಿತ್ತಿದ್ದರು. ಮಾಂಸಹಾರಿ
ಾದವರಿಗೂ ಬಸವ ಧರ್ಮದ ಬಾಗಿಲು ತೆರೆದಿದ್ದರು.

ಶರಣರ ಈ ಜನಪರ ಆಶಯಕ್ಕೆ ವ್ಯಾಪಕ ಪ್ರತಿಕ್ರಿಯೆಗಳು ಬಂದಿದ್ದವು.
ುತೇಕ ಜನ ಇದನ್ನು ಅಭಿನಂದಿಸಿ ಬೆಂಬಲಿಸಿದ್ದರೆ,
ಾನಂದಮೂರ್ತಿ, ಎಚ್.ಎಸ್. ಮರುಳಸಿದ್ದಪ್ಪ ನಂತಹ
ಘ ಪರಿವಾರಿಗಳು ಟೀಕಿಸಿದ್ದರು. ಅದೇನೆ ಇರಲಿ
ಣರ ನೇತೃತ್ವದಲ್ಲಿ ನಾನಾ ಜಾತಿ ಸಮುದಾಯಗಳ
ಸಾವಿರಾರು ಜನ ಲಿಂಗದೀಕ್ಷೆ ಪಡೆದು ಬಸವ ಧರ್ಮ
ರತೊಡಗಿದ್ದಾರೆ.

ಇದರಿಂದ ಪೇಜಾವರ ಸ್ವಾಮಿಗ್ಯಾಕೆ ಹೊಟ್ಟೆ
ಉರಿಸಿದಂತಾಗಬೇಕು?




ಇದೇನೊ ಕಾನೂನುಬಾಹಿರ ಕೃತ್ಯವೆಂಬಂತೆ 'ರಾಜ್ಯದಲ್ಲಿ ಇತರ ಜಾತಿಗಳವರಿಗೆ ಲಿಂಗದೀಕ್ಷೆ ನೀಡಿ ಮತಾಂತರ ಮಾಡಿಸಲಾಗುತ್ತಿದೆ' ಎಂದು ಚೀರಿಕೊಳ್ಳುತ್ತಿದ್ದಾರೆ. ಅಂದರೆ ಇದರರ್ಥ ಪೇಜಾವರ ನಂಬುವ ಹಿಂದೂ ಧರ್ಮದ ಶೋಷಣೆ, ಜಾತಿಭೇದದಿಂದ ಬಿಡುಗಡೆ ಬಯಸಿ ಯಾರೂ ಬಸವ ಧರ್ಮದತ್ತ ಹೋಗಕೂಡದೆಂದಲ್ಲವೆ?

ಪೇಜಾವರರ ಧರ್ಮ ಸಂಕಟ ಇಲ್ಲಿಗೂ ನಿಲ್ಲುವುದಿಲ್ಲ.

ಮೈಸೂರಿನ ಅದೇ ಸಭೆಯಲ್ಲಿ ಲಿಂಗದೀಕ್ಷೆ ಕಾರ್ಯಕ್ರಮಕ್ಕೆ ಪರ್ಯಾಯವಾಗಿ ತಾವೂ ಆಸಕ್ತ ಬ್ರಾಹ್ಮಣೇತರರಿಗೆ ವೈಷ್ಣವ ದೀಕ್ಷೆ ಕೊಡಿಸುವುದಾಗಿ ಚಾಲೆಂಜ್ ಮಾಡುವವರಂತೆ ಮಾತನಾಡಿದ್ದಾರೆ.

ಆದರೆ ಅಲ್ಲೂ ತಮ್ಮ ಪರಂಪರಾಗನುಗತ ಜಾತಿ ಬುದ್ಧಿಯ ಒಂದು ಭೇದಭಾವಕ್ಕೆ ಅವಕಾಶ ಮಾಡಿಕೊಂಡಿದ್ದಾರೆ.

ಅದೇನೆಂದರೆ ಪೇಜಾವರರ ವೈಷ್ಣವ ಧರ್ಮಕ್ಕೆ ಸೇರುವ ಬ್ರಾಹ್ಮಣರಲ್ಲದವರು ಉಡುಪಿಯ ಮಠಗಳ ಭಕ್ತರಾಗುವಂತಿಲ್ಲ. ಬದಲಾಗಿ ಈ ನವಶೂದ್ರ ವೈಷ್ಣವ ಮಧ್ವಾ ಬ್ರಾಹ್ಮಣರಿಗೆಂದೇ ಒಂದು ಪ್ರತ್ಯೇಕ ಮಠ ಸ್ಥಾಪಿಸುತ್ತಾರಂತೆ ಪೇಜಾವರರು.

ಬಸವ ಧರ್ಮದ ಮುರುಘಾ ಶರಣರಿಗೂ, ಹಿಂದೂ ವೈಷ್ಣವ ಧರ್ಮದ ಪೇಜಾವರರಿಗೂ ಇರುವ ವ್ಯತ್ಯಾಸ ಈಗ ಗೊತ್ತಾಯಿತಾ?

ಲಿಂಗದೀಕ್ಷೆ ಪಡೆಯುವ ಯಾವುದೇ ಜಾತಿಯ ಜನ ಒಮ್ಮೆ ಬಸವ ಧರ್ಮಕ್ಕೆ ಸೇರಿದರೆ ಅವರು ತಾರತಮ್ಯವಿಲ್ಲದ ಬಸವ ಧರ್ಮೀಯರೇ ಆಗುತ್ತಾರೆ. ಮತ್ತೆ ಅವರ ನಡುವೆ ಜಾತಿ ಭೇದ ಬರಕೂಡದು ಎಂಬುದು ಶರಣರ ನಿಲುವು.

ಆದರೆ ಯಾರಾದರೂ ಅದೇ ಪೇಜಾವರರ ವೈಷ್ಣವ ದೀಕ್ಷೆ ಪಡೆದರೂ ಅವರಿಗೆ ಉಡುಪಿಯ ಬ್ರಾಹ್ಮಣ ಮಠಗಳಿಗೆ ಪ್ರವೇಶ ಸಿಗುವುದಿಲ್ಲ. ಅಂಥವರು ಅಷ್ಟಮಠಗಳಿಗೆ ಮಠಾಧೀಶರಾಗುವಂತೆಯೇ ಇಲ್ಲ.


ಗುರುಸೇಂದ್ರ ತೀರ್ಥರು

ಹೇಗಿದೆ ಆಧುನಿಕ ಮನು ಪೇಜಾವರರ ಹಿಂದೂ ಧರ್ಮೋದ್ಧಾರ ಕಾಯಕ!


ಈ ಚೆಂದಕ್ಕೆ 'ಲಿಂಗದೀಕ್ಷೆ' ಕಾರ್ಯಕ್ರಮವನ್ನು ಪೇಜಾವರ ವಿರೋಧಿಸಬೇಕೇಕೆ?

■ ಬಿಳಿದಾಳೆ ಈಶ

8. ಭಾವಿಸಮೀರ ಶ್ರೀವಾದಿರಾಜರ ಬಗ್ಗೆ ತೀರಾ
ಮಟ್ಟದಲ್ಲಿ ಬರೆದ ಪ್ರಭುಂಜನರೇ (ಹಿಂದಿನ ಹೆಸರು
ಬಡೂರಾವ್) ಸಾರ್ವಜನಿಕರಿಂದ ತೀವ್ರ ವಿರೋಧ
ದಾಗ ಕ್ಷಮಾಪಣೆ ಕೋರಿ ಮುಜುಗದಿಂದ ಪಾರಾದರು.
ಯರ ಸ್ತೋತ್ರದ ಬಗ್ಗೆ ಹಗುರವಾಗಿ ಮಾತನಾಡಿ ಚಿತ್ರದುರ್ಗ
ನಿಕರ ಕ್ಷಮೆ ಯಾಚಿಸಿದ್ದರು, ನನ್ನ ಸಂಗ್ರಹದಲ್ಲೇ ಇದೆ
ದು ಹೇಳುತ್ತಲೇ ಅಪೂರ್ವ ದಾಖಲೆ ಎಂದೆಲ್ಲಾ
ೋನಾಮ ಕೊಟ್ಟು ಕಾಗದವಿಲ್ಲದ ಕಾಲದ ಕಾಗದ ಸೃಷ್ಟಿಸಿ ಸಂಶಯಕ್ಕೆ
ದವಾಗಿದ್ದು ಇವೆಲ್ಲಾ ನಿಮ್ಮನ್ನು ಪ್ರಭುಂಜನಾಚಾರ್ಯರು ಒಬ್ಬ ಪ್ರಾಮಾಣಿಕ
ಶೋಧಕ ಎಂದು ಸ್ವೀಕರಿಸುವಲ್ಲಿ ಅಡ್ಡಿಯಾಗುತ್ತಿದೆ. ಡಾ. ಬಿ.ಎನ್.ಕೆ.
ರ್ಮ ಕೂಡಾ ತಮ್ಮ ಕೃತಕ ಸಂಯೋಜನೆಯ ಬಗ್ಗೆ ತಮ್ಮ ಗ್ರಂಥಗಳಲ್ಲಿ
ಲ್ಲಿ ಹೇಳಿರುವುದು ಇದಕ್ಕೆ ಪೂರಕ.

9. ಜಗತ್ತಿಗೆಲ್ಲಾ ಒಬ್ಬನೇ ಸೂರ್ಯ, ಒಬ್ಬನೇ ಚಂದ್ರ.
ಕರ್ಮಭೂಮಿಗೊಬ್ಬ ಸೂರ್ಯ ಭೋಗ ಭೂಮಿಗೊಬ್ಬ ಸೂರ್ಯ
ದೆಲ್ಲಾ ಇರುವುದಿಲ್ಲ. ಇಲ್ಲಿ ಪ್ರದಹಿಸುವ ವಾಯುದೇವರು ವಿದೇಶದಲ್ಲಿ
ಹಿಸುವ ವಾಯುದೇವರು ಒಬ್ಬರೇ. ಜಗದ್ಗುರು ಮಧ್ವಾಚಾರ್ಯರನ್ನು
ರ್ಮಭೂಮಿಗೆ ಮಾತ್ರ ಸೀಮಿತಗೊಳಿಸಿ ಭೋಗ ಭೂಮಿಗೆ ಮತ್ತೊಬ್ಬ
ದ್ಗುರುವನ್ನು ಎಲ್ಲಿಂದ ತರುತ್ತೀರಿ? ಆಚಾರ್ಯ ಮಧ್ವರ ಸರ್ವಜ್ಞತ್ವಕ್ಕೆ
ಎಟೇಪನ್ ಕೊಡಲು ಪೇಜಾವರರಿಗೆ ಅದಾರು ಜಿ.ಪಿ.ಎ. ಕೊಟ್ಟದ್ದು?
ಹದೇವರು ಇಡೀ ಭೂಮಂಡಲವನ್ನು ಕೋರೆಯಿಂದ ಎತ್ತಿದಾಗ ಆ
ಡಲದಲ್ಲಿ ಅಮೆರಿಕಾ, ಆಸ್ಟ್ರೇಲಿಯಾ, ಇಂಗ್ಲೆಂಡ್ ಇರಲಿಲ್ಲವೇ? ನಿಮ್ಮಂಥ
ಲಭೂತವಾದಿಗಳಿಂದಲೇ ಖಗೋಳ ಶಾಸ್ತ್ರದಲ್ಲಿ ನಮ್ಮ
ತೀರಾ ಹಿಂದುಳಿದಿದ್ದು, ವಿಜ್ಞಾನದಲ್ಲಿ ಕೂಡಾ ವಿದೇಶಿಯರ
ಯುಲ್ಲಿ ಯಾವುದೇ ಗಣನೀಯ ರೀತಿಯಲ್ಲಿ ಸಾಧನೆ
ದರೇ ಹೋದದ್ದು. ಮಧ್ವಸರೋವರದಲ್ಲಿ ಪ್ರಾತಃಕಾಲ
ಪೂಜೆಯ ಮುಂಚೆ ಸ್ನಾನ ಮಾಡಿ ಬರುವ ಎಂಟೂ
ಠದ ಸ್ವಾಮಿಗಳನ್ನು ಸ್ಪರ್ಶಿಸುವ ಸೂರ್ಯ ಅಗಸಾನೇ
ಶದಿಂದ ಬಂದವ ಎಂದು ನೆನಪಿರಲಿ.

10. 2010ರಲ್ಲಿ ಬೆಂಗಳೂರನ್ನು ಸಿಂಗಪೂರ್ ಮಾಡಿದಾಗ
ರ್ಮಭೂಮಿ ಭೋಗಭೂಮಿಯಾಗಿ ಪರಿವರ್ತಿತವಾದಾಗ
ಪೇಜಾವರರು ಬೇರೆ ಕಡೆ ಸೈಟ್ ಕೊಡಬಹುದು.


ವಿಷ್ಣುವಿನ ವರಾಹವತಾರ

ಆದರೆ ಬೆಂಗಳೂರಿನ ಬಾಕಿ ಸದಾಚಾರಿಗಳಿಗೆ ಪೇಜಾವರರು ಬೇರೆ ಯಾವುದಾದರೂ ವ್ಯವಸ್ಥೆ ಮಾಡಿರುತ್ತಾರಾ?

11. ಪುರಂದರದಾಸರು, ವ್ಯಾಸರಾಜರು, ರಾಘವೇಂದ್ರರು, ಕನಕದಾಸರು ಮೊದಲಾದ ಮಹನೀಯರು 400 ವರ್ಷಗಳ ಹಿಂದೆಯೇ ಕೀಳು ಮನಸ್ಸಿನ ಮಡಿವಂತಿಕೆಯ ಪಂಡಿತರನ್ನು ಗಣನೆಗೆ ತೆಗೆದುಕೊಳ್ಳದೇ ಹರಿಜನರ ಮನೆಗೆ ಹೋಗಿ ಅವರ ಮನಸ್ಸು ಗೆದ್ದದ್ದು ನಿಜವಾದರೂ ಪ್ರಚಾರಕ್ಕಾಗಿ ಅದನ್ನು ಉಪಯೋಗಿಸಿಕೊಳ್ಳಲಿಲ್ಲ. ಕೇವಲ ಪ್ರಚಾರಕ್ಕಾಗಿ 50 ವರ್ಷಗಳಿಂದ ಹರಿಜನರ ಕೇರಿಗೆ ಹೋಗಿದ್ದು ಬಿಟ್ಟರೆ ಪೇಜಾವರರು ಹರಿಜನರಿಗಾಗಿ ಯಾವುದಾದರೂ ಹಾಸ್ಟಲ್ ಕಟ್ಟಿಕೊಟ್ಟಿದ್ದಾರಾ? ಕಾಲೇಜ್ ಕಟ್ಟಿಸಿರುತ್ತಾರಾ? ಇಲ್ಲಾ ಜಾತ್ಯತೀತ ಸಂವಿಧಾನದ ಸರ್ಕಾರದ ಅನುದಾನ ಪಡೆದ ತಮ್ಮ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಹರಿಜನ ಅಧ್ಯಾಪಕರನ್ನಾಗಲೀ, ಕುರುಬ ಸಮುದಾಯದ ಅಧ್ಯಾಪಕರನ್ನಾಗಲೀ ನೇಮಿಸಿಕೊಂಡಿದ್ದಾರಾ? ಶಿಕ್ಷಣ ಇಲಾಖೆಯ ನಿಯಮಾವಳಿಯನ್ನು ಗಾಳಿಗೆ ತೂರಿ ಕೇವಲ ಸ್ವಜನರನ್ನು ಇಟ್ಟುಕೊಂಡು ಮೆರೆಯುತ್ತಿರುವ ಪೇಜಾವರರಿಗೆ ಕಿವಿ ಹಿಂಡುವುದು ಬಿಟ್ಟು ಪುತ್ತಿಗೆಯವರ ತಂಟೆಗೆ ಬಂದಿದ್ದೇ ಆದರೇ ಸಾರ್ವಜನಿಕರು ಸುಮ್ಮನೇ ಇರುವುದಿಲ್ಲ ಎಚ್ಚರವಿರಲಿ.

12. ಮಧ್ವಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಉಡುಪಿಯ ಎಂಟೂ ಮಠಗಳ 750 ವರ್ಷಗಳ ಇತಿಹಾಸದಲ್ಲಿ ಯಾವ ಸ್ವಾಮಿಗಳು ಮಾಡದ, ಯಾವ ಸಂಪ್ರದಾಯದಲ್ಲೂ ಹೇಳದ ಮಹಿಳೆಗೆ ಸಂನ್ಯಾಸವನ್ನು ಕೊಡುವ ಅಧಿಕಾರ ಪೇಜಾವರರು ಹೇಗೆ ಸ್ವಯಂ ರೂಢಿಸಿಕೊಂಡರೋ ಹಾಗೇ ಪುತ್ತಿಗೆಯವರು ಮಾಡಿದ್ದಾರೆ. ಇದರಲ್ಲಿ ತಪ್ಪೇನು.

ಸ್ವಾಮಿ ವಿವೇಕಾನಂದರು, ಮಹಾತ್ಮ ಗಾಂಧೀಜಿಯವರು, ರಾಷ್ಟ್ರಪತಿಗಳಾಗಿದ್ದ ಅಬ್ದುಲ್ ಕಲಾಂ ಅವರಾಗಲೀ, ಬನ್ನಂಜೆ ಗೋವಿಂದಾಚಾರ್ಯರಾಗಲೀ ಶುದ್ಧ ಪರಿಶುದ್ಧ ಭಾರತ ಸಂಸ್ಕೃತಿಯ ಸದಾಚಾರದ ಸಂಕೇತವಾಗಿ ವಿದೇಶದಿಂದ ಬಂದಮೇಲು ಸಾರ್ವಜನಿಕರಿಂದ ಮಾನ್ಯವಾದ ಹಾಗೇ ಪುತ್ತಿಗೆಯವರು ಪರಿಶುದ್ಧವಾಗಿರುತ್ತಾರೆ. ಅಷ್ಟಮಠಗಳ ಅಭಿಪ್ರಾಯಕ್ಕಿಂತ ಸಾರ್ವಜನಿಕ ಅಭಿಪ್ರಾಯ ದೊಡ್ಡದು ಎನ್ನುವ ತಿಳಿವು ಪ್ರಭುಂಜನರಿಗೆ, ಪೇಜಾವರರಿಗೆ ಈಗಲಾದರೂ ಅರಿವಾಗಲಿ. ■



# ಪೇಜಾವರಗೆ ಕೆಲ ಪ್ರಶ್ನೆಗಳು

'ಲಿಂಗಾಯತರು ಮತಾಂತರಿಗಳು' ಎಂದು ಆರೋಪಿಸಿರುವ ಪೇಜಾವರ ಸ್ವಾಮಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲಿ.

1. ಲಿಂಗಾಯತ ಧರ್ಮ ಅರ್ಥಾತ್ ಬಸವ ಧರ್ಮದಲ್ಲಿ ನಂಬಿಕೆಯಿಟ್ಟು ಯಾರಾದರೂ ಲಿಂಗದೀಕ್ಷೆ ಪಡೆದರೆ ಅದು ತಪ್ಪಾ?
2. ರಾಜ್ಯಾದ್ಯಂತ ಹರಡಿರುವ ಲಿಂಗಾಯತ ಮಠಗಳಲ್ಲಿ ಜಾತಿ ಭೇದವಿಲ್ಲದೆ ಲಕ್ಷಾಂತರ ವಿದ್ಯಾರ್ಥಿಗಳಿಗೆ ಆಶ್ರಯ ನೀಡಿ ವಿದ್ಯಾಭ್ಯಾಸಕ್ಕೆ ನೆರವು ನೀಡಲಾಗುತ್ತಿದೆ.

   ನಿಮ್ಮ ಪ್ರಕಾರ ಇದೂ ಮತಾಂತರದ ಪ್ರಯತ್ನವೆ?
3. ಸಿದ್ಧಗಂಗಾ ಮಠದ ಡಾ. ಶಿವಕುಮಾರ ಸ್ವಾಮಿಗಳು ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗ, ಕುರುಬ, ಗೊಲ್ಲ, ಮುಸ್ಲಿಂ ಹಾಗೂ ದಲಿತ ವಿದ್ಯಾರ್ಥಿಗಳಿಗೆ ಅನ್ನದಾನ-ವಿದ್ಯಾದಾನ ಮಾಡುತ್ತಿದ್ದಾರೆ. ಇವರಾಗಲಿ ಅಥವಾ ಇನ್ಯಾರೆ ವೀರಶೈವ ಮಠಾಧೀಶರಾಗಲಿ ಒತ್ತಾಯದ ಮತಾಂತರದ ಪ್ರಯತ್ನ ಮಾಡಿರುವುದಕ್ಕೆ ಪುರಾವೆ ಇದೆಯೇ?
4. ಮೈಸೂರಿನ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಮೈಸೂರು, ಚಾಮರಾಜನಗರ, ಕೊಳ್ಳೆಗಾಲ ಪ್ರಾಂತ್ಯದಲ್ಲಿ ಅನೇಕ ಆಸಕ್ತ ಅನ್ಯಜಾತಿಗಳವರಿಗೆ ಲಿಂಗದೀಕ್ಷೆ ನೀಡಿ ವೀರಶೈವರನ್ನಾಗಿ ಪರಿವರ್ತಿಸಿರುವುದು ನಿಜ. ಸ್ವಯಂ ಪ್ರೇರಿತರಾಗಿ ಜನ ಲಿಂಗಾಯತ ಧರ್ಮಕ್ಕೆ ಸೇರಿದರೆ ತಪ್ಪೇನು?
5. ಹಿಂದೂ ಧರ್ಮವು ಮೂಲಭೂತವಾಗಿ ಮೇಲು-ಕೀಳೆಂಬ ಅಸಮಾನತೆಯನ್ನು ಆಚರಿಸುವ ಧರ್ಮ. ಇದನ್ನು ಧಿಕ್ಕರಿಸಿ ಹುಟ್ಟಿಕೊಂಡಿದ್ದೇ ಲಿಂಗಾಯತ ಧರ್ಮ. ಅಂದಿನ ಬಸವಣ್ಣನ ಪರಂಪರೆಯನ್ನೇ ರಾಜ್ಯದ ಬಹುತೇಕ ವೀರಶೈವ ಮಠಗಳು ಆಸಕ್ತರಿಗೆ ಲಿಂಗದೀಕ್ಷೆ ನೀಡುವ ಮೂಲಕ ಮುಂದುವರೆಸುತ್ತಿದ್ದಾರೆ. ಆದರೆ ಪೇಜಾವರರು ಈ ಮೇಲು-ಕೀಳು ನಿವಾರಿಸಲು ಏನು ಮಾಡಿದ್ದಾರೆ?
6. ವೀರಶೈವ ಮಠಾಧೀಶರಂತೇ ಪೇಜಾವರರು ಕೂಡ ಬ್ರಾಹ್ಮಣೇತರರಿಗೆ ಜನಿವಾರ ಹಾಕಿಸಿ ತಮ್ಮ ಸಮಾನರೆಂದು ಒಪ್ಪಿಕೊಳ್ಳಲು ಯಾಕೆ ಪ್ರಯತ್ನಿಸಬಾರದು?
7. ಹಿಂದೂಗಳೆಲ್ಲಾ ಒಗ್ಗಟ್ಟಾಗಬೇಕೆನ್ನುವ ಪೇಜಾವರ ತಮ್ಮ ವಿದ್ಯಾ ಕೇಂದ್ರಗಳಲ್ಲಿ ಬ್ರಾಹ್ಮಣರಲ್ಲದ ವಿದ್ಯಾರ್ಥಿಗಳನ್ನು ಯಾಕೆ ಸೇರಿಸಿಕೊಳ್ಳುತ್ತಿಲ್ಲ? ಉಡುಪಿಯಲ್ಲಿ ದೇವಸ್ಥಾನಕ್ಕೆ ಬರುವ ಹಿಂದೂ ಭಕ್ತರಲ್ಲೇ ಜಾತಿಭೇದ-ಪಂಕ್ತಿಭೇದ ಆಚರಿಸುವುದೇಕೆ?
8. ಹಿಂದೂಗಳೆಲ್ಲಾ ಒಂದಾಗಿ ಎಂದು ಹೇಳುವ ಪೇಜಾವರ ಹಿಂದೂಗಳಿರಲಿ ಅದಕ್ಕೂ ಮೊದಲು ಬ್ರಾಹ್ಮಣರೆಲ್ಲಾ ಒಂದೇ ಅನ್ನಲು ತಯಾರಿದ್ದಾರಾ?

   ಹಾಗಿದ್ದರೆ ಇವತ್ತೂ ಕೂಡಾ ಬ್ರಾಹ್ಮಣರೇ ಆಗಿರುವ ಸ್ಮಾರ್ತರ ಬಗ್ಗೆ ಕೀಳೆಂಬ ಭಾವನೆ ಯಾಕೆ ಬೆಳೆಸಿದ್ದಾರೆ?
9. ಪೇಜಾವರ ನೀಡಲು ಹೊರಟಿರುವ ವೈಷ್ಣವ ಧರ್ಮದ ದೀಕ್ಷೆಯನ್ನು ಶೂದ್ರನ್ಯಾರಾದರೂ ಸ್ವೀಕರಿಸಿದರೆ ಅಂತವರನ್ನು ತಮ್ಮ ಸಮಾನರೆಂದು ಪರಿಗಣಿಸಲು ಅವರು ಸಿದ್ಧರಿದ್ದಾರಾ?
10. ಪೇಜಾವರ ಮಠಕ್ಕೆ ಬ್ರಾಹ್ಮಣರಲ್ಲದ ಶೂದ್ರರೊಬ್ಬರನ್ನು ಅಥವಾ ದಲಿತರೊಬ್ಬರನ್ನು ಉತ್ತರಾಧಿಕಾರಿಯಾಗಿ ಆರಿಸಿ ನಿಮ್ಮ 'ಹಿಂದೂ ಒಗ್ಗಟ್ಟನ್ನು' ಸಾಬೀತು ಮಾಡಲು ಸಿದ್ಧರಿದ್ದೀರಾ?

ಈ ಪ್ರಶ್ನೆಗಳಿಗೆ ಪೇಜಾವರರು ಮೊದಲು ಉತ್ತರಿಸಿ ಆಮೇಲೆ ಬೇಕಿದ್ದರೆ ಬಸವ ಧರ್ಮ ಹಾಗೂ ಲಿಂಗದೀಕ್ಷೆ ಬಗ್ಗೆ ಮಾತಾಡಲಿ ■

# ಗರಿಗರಿ ಬಟ್ಟೆ ತೊಟ್ಟ ಪುಢಾರಿಗಳೂ ಗಪ್‌ಚುಪ್ ಕುಳಿತ ಗುರುಮಿಠಕಲ್ ಜನರೂ



ಬಾಬುರಾವ್ ಚಿಂಚನಸೂರ್


ಕೌಳೂರು ಮಲ್ಲಣ್ಣಗೌಡ


ನಾಗಣ್ಣಗೌಡ

ಸುಮಾರು ಮೂವತ್ತಾರು ವರ್ಷಗಳಿಂದ ಮಲ್ಲಿಕಾರ್ಜುನ ಖರ್ಗೆ ಪ್ರತಿನಿಧಿಸುತ್ತಿದ್ದ ಗುರುಮಿಠಕಲ್ ಮೀಸಲು ಕ್ಷೇತ್ರ ಈಗ ಸಾಮಾನ್ಯ ಕ್ಷೇತ್ರವಾಗಿ ಪರಿವರ್ತಿತಗೊಂಡಿರುವುದು ಹಲವರಿಗೆ ವರದಾನವಾಗಿದೆ. ಸ್ವತಃ ಖರ್ಗೆ ತಾವು ಈ ಬಾರಿಯೂ ಅಲ್ಲಿಂದಲೇ ಸ್ಪರ್ಧಿಸುತ್ತಿದ್ದಾರೋ ಇಲ್ಲವೋ ಎಂಬುದು ಇನ್ನೂ ಅನಿಶ್ಚಿತವಾಗಿದೆ. ಆದರೂ ಹಲವು ಪುಢಾರಿಗಳು "ಕ್ಷೇತ್ರ ಸಾಮಾನ್ಯವಾದರೇನಂತೆ? ನೀವೇ ಮತ್ತೆ ನಮ್ಮ ಕ್ಷೇತ್ರದಿಂದ ಚುನಾವಣೆಗೆ ನಿಂತುಕೊಳ್ಳಿ" ಎಂದು ಅವಲತ್ತುಕೊಳ್ಳುತ್ತಿದ್ದಾರೆ. ಒಂದು ವೇಳೆ ಖರ್ಗೆ ಏನಾದರೂ ತನ್ನ ಬಾಲಬಡುಕರ ಮಾತು ಕೇಳಿ ಗುರುಮಿಠಕಲ್‌ದಿಂದ ಈ ಬಾರಿ ಚುನಾವಣೆಗೆ ನಿಂತುಕೊಂಡರೆ ಸಾಮಾನ್ಯ ಜನವರ್ಗದಲ್ಲಿ ಹೊಗೆಯಾಡುತ್ತಿರುವ ರೋಷ ಬೆಂಕಿಯಾಗಿ ಅವರನ್ನೇ ಭಸ್ಮ ಮಾಡುವ ಅಪಾಯವಿದೆ.

ಮಲ್ಲಿಕಾರ್ಜುನ ಖರ್ಗೆ ಬಿಟ್ಟುಕೊಟ್ಟರೆ ಮಾತ್ರ ಗುರುಮಿಠಕಲ್ ಮತಕ್ಷೇತ್ರದ ಕುದುರೆಯನ್ನೇರಲು ಕಾಂಗ್ರೆಸ್ ಪಕ್ಷದ ಹಲವರು ಆಗಲೆ ಖರ್ಗೆ ಎಂಬ ಗ್ರಹದ ಸುತ್ತ ಗಿರಕಿಹೊಡೆಯಲು ಆರಂಭಿಸಿದ್ದಾರೆ. ಆದರೆ ಇವರ್‍ಯಾರಿಗೂ ಖರ್ಗೆಯನ್ನು ಈ ಬಗ್ಗೆ ಕೇಳುವ ತಾಕತ್ತು ಇಲ್ಲ ಎಂಬುದು ಗಮನಾರ್ಹ. ಅವರಲ್ಲಿ ಬಹುಮುಖ್ಯವಾಗಿ ಕೇಳಿಬರುತ್ತಿರುವ ಹೆಸರೆಂದರೆ ಸ್ಥಳೀಯ ಬ್ಲಾಕ್ ಕಾಂಗ್ರೆ ಅಧ್ಯಕ್ಷನಾದ, ಖರ್ಗೆಯ ಕಟ್ಟಾ ಅನುಯಾಯಿಯಾದ ಬೋರಬಂಡ ಸಾಬಣ್ಣ. ಈ ಸಾಬಣ್ಣ ಕೋಲಿ ಸಮಾಜಕ್ಕೆ ಸೇರಿದ ಯುವಕ.



ಮಾಜಿ ಜೆಡಿಸಿಸಿ ಬ್ಯಾಂಕ್ ಅಧ್ಯಕ್ಷನಾದ ಕೌಳೂರು ಮಲ್ಲಣ್ಣಗೌಡ ಎಂಬ ಕಾಂಗ್ರೆಸಿಗ ಗುರುಮಿಠಕಲ್ ಕ್ಷೇತ್ರದ ಕುದುರೆಯನ್ನೇರಲು ಎಲ್ಲಾ ತಯಾರಿ ಮಾಡಿಕೊಂಡಿದ್ದಾರೆ ಅನಿಸುತ್ತದೆ. ಹಾಗೆ ನೋಡಿದರೆ ಖರ್ಗೆ ಪ್ರತಿನಿಧಿಸಿದ ಮತಕ್ಷೇತ್ರದ ಸ್ಥಾನವನ್ನು ಈ ಕೌಳೂರು ಮಲ್ಲಣ್ಣಗೌಡ ಸಮರ್ಥವಾಗಿ ಪ್ರತಿನಿಧಿಸಬಲ್ಲರು ಎಂಬುದರಲ್ಲಿ ಅನುಮಾನವಿಲ್ಲ. ಇವರು ಜನರ ಜೊತೆ ಸಾಮಾನ್ಯವಾಗಿ ಬೆರೆಯುವ ರೀತಿ, ಸರಳ ಹಾಗೂ ಸಹಜ ನಡೆನುಡಿಗಳು, ಸಾಮಾನ್ಯ ಜನರೊಂದಿಗೆ ಸ್ಪಂದಿಸುವ ರೀತಿ ಇವರನ್ನು ಜನಾನುರಾಗಿ ನಾಯಕನನ್ನಾಗಿ ರೂಪಿಸಿವೆ. ಹಿಂದೊಮ್ಮೆ ಜನತಾ ಪಕ್ಷದಿಂದ ಜಿಲ್ಲಾ ಪಂಚಾಯತಿಗೆ ಖರ್ಗೆ ಹಾಕಿದ ಕ್ಯಾಂಡಿಡೇಟ್ ವಿರುದ್ಧವೇ ಸಡ್ಡು ಹೊಡೆದು ಗೆದ್ದುಬಂದದ್ದು ಕೌಳೂರರ ಹೆಗ್ಗಳಿಕೆ. ನಿಜಕ್ಕೂ ಖರ್ಗೆ ತನ್ನ ಮತಕ್ಷೇತ್ರವನ್ನು ಪ್ರೀತಿಸುತ್ತಿದ್ದರೆ, ಅಲ್ಲಿನ ಜನಕ್ಕೆ ಒಳಿತನ್ನು ಬಯಸುತ್ತಿದ್ದರೆ ಕೌಳೂರು ಮಲ್ಲಣ್ಣಗೌಡನಿಗೆ ಟಿಕೆಟ್ ನೀಡಬಹುದು ಎನಿಸುತ್ತದೆ. ಹಿಂದೆ ಯಾದಗಿರಿ ಮತಕ್ಷೇತ್ರಕ್ಕೆ ಬರುತ್ತಿದ್ದ ಸೈದಾಪುರ ಕಂದಾಯ ವಲಯದ ಹಳ್ಳಿಗಳೂ ಇದೀಗ ಗುರುಮಿಠಕಲ್ ಮತಕ್ಷೇತ್ರಕ್ಕೆ ಸೇರ್ಪಡೆಯಾದುದೂ ಕೂಡ ಕೌಳೂರ ಅವರಿಗೆ ಲಾಭವಾಗಿ ಪರಿಣಮಿಸಲಿವೆ.

ಬಿಜೆಪಿಯಿಂದ ಸ್ಪರ್ಧಿಸಲು ವಿಶ್ವನಾಥರೆಡ್ಡಿ ಮುದ್ನಾಳನ ಸುಪುತ್ರ ವೆಂಕಟರೆಡ್ಡಿ ಮುದ್ನಾಳ ಗುರುಮಿಠಕಲ್ ಮತಕ್ಷೇತ್ರದತ್ತ ವಾಲಿದ್ದಾನೆ. ತನ್ನ ಇನ್ನೊಬ್ಬ ಸಹೋದರನ ಮಗ ಡಾ. ವೀರಬಸವಂತರೆಡ್ಡಿ ಯಾದಗಿರಿಯ ಮತಕ್ಷೇತ್ರಕ್ಕೆ ಶಾಸಕನಾಗಿದ್ದರೂ ಧೃತರಾಷ್ಟ್ರನಂತೆ ಪುತ್ರ ವ್ಯಾಮೋಹದಲ್ಲಿ ಮುಳುಗಿರುವ ವಿಶ್ವನಾಥರೆಡ್ಡಿ ಮುದ್ನಾಳಗೆ ಸ್ವತಃ ತನ್ನ ಮಗನನ್ನೆ ಶಾಸಕತ್ವದ ಸ್ಥಾನಕ್ಕೆ ಏರಿಸಿನೋಡುವ ಬಯಕೆ. ಈ ವೆಂಕಟರೆಡ್ಡಿಯಾದರೋ ಬೆನ್ನೆಲುಬಿಲ್ಲದ ರಾಜಕಾರಣಿ. ತನ್ನ ತಂದೆಯ ಹಿಂದಿನ ಚರಿಶ್ಮಾವೆ ಇವನಿಗೆ ಶ್ರೀರಕ್ಷೆ.

ಅಂದಹಾಗೆ, ಬಹಳ ಜನ ತಿಳಕೊಂಡಿದ್ದಂತೆ ವಿಶ್ವನಾಥರೆಡ್ಡಿ ಮುದ್ನಾಳ ಆದರ್ಶವಾದಿ ರಾಜಕಾರಣಿಯಲ್ಲ, ಹಾಗೆಯೇ ಪ್ರಾಮಾಣಿಕ ತುಡಿತಗಳನ್ನುಳ್ಳ ಮನುಷ್ಯನೂ ಅಲ್ಲ, ಆತ ಏನು ಮಾಡಿದರೂ ಅದು ದಿಖಾವಟ್ ಕೇಳಿಯೇ ಮಾಡುತ್ತಾನೆಂಬುದು ಈಗ ಗುಟ್ಟಾಗಿ ಉಳಿದಿಲ್ಲ. ಯಾದಗಿರಿಯ ತನ್ನ ಗೋದಾಮಿನಲ್ಲಿ ಕುಳಿತು ಏನೇ ಆಟ ಆಡಿ, ಮಾಟ ಮಾಡಿ ಮುಸ್ಲಿಂ ಜನಾಂಗವನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಗುರುಮಿಠಕಲ್ ಕ್ಷೇತ್ರವನ್ನು ತನ್ನ ಮುಷ್ಠಿಯಲ್ಲಿಟ್ಟುಕೊಳ್ಳಬೇಕೆಂಬ ವಿಶ್ವನಾಥರೆಡ್ಡಿ ಮುದ್ನಾಳನ ಹರಕತ್ತುಗಳೆಲ್ಲ ತಿರುಕನ ಕನಸಿನಂತಾಗುತ್ತದೆ ಎಂಬುದರ ಬಗ್ಗೆ ಯಾವ ಅನುಮಾನವೂ ಇಲ್ಲ.

ಇನ್ನು ಜೆಡಿಎಸ್ ಪಕ್ಷದ ವತಿಯಿಂದ ಸ್ಪರ್ಧಿಸಬಯಸಿರುವ ನಾಗಣ್ಣಗೌಡ ಕಂದಕೂರ ದೇವೇಗೌಡರ ತೀರಾ ಆತ್ಮೀಯವಲಯಕ್ಕೆ ಸೇರಿದಾತ. ಸುಮಾರು 35 ವರ್ಷಗಳ ಕಾಲ ಖರ್ಗೆಯ ವಿರುದ್ಧ ಆಗಾಗ ಸೆಡ್ಡು ಹೊಡೆಯುತ್ತ ಖರ್ಗೆ ಕೊಟ್ಟ ಏನೆಲ್ಲ ಕಿರುಕುಳಗಳಿಗೂ ತಲೆಬಾಗದೆ ನಿಂತಿದ್ದಾನೆ. ಗುರುಮಿಠಕಲ್ ಕ್ಷೇತ್ರದಲ್ಲಿ ಬರುವ ಹಳ್ಳಿಗಳ ಬಹುತೇಕ ಗೌಡರು, ಸಾವುಕಾರು ಖರ್ಗೆಯ ಧೋತ್ರದ ಚುಂಗು ಹಿಡಕೊಂಡು ತಮ್ಮ ಅಸ್ತಿತ್ವವನ್ನೆ ಮರೆತಿದ್ದಾರೆ. ಆದರೆ ಈ ಗೌಡ ಮಾತ್ರ ಖರ್ಗೆಯ ಆಟಾಟೋಪಗಳಿಗೆ ಹಣಿಯದೆ, ಈಗ ಸ್ವಲ್ಪ ಹೈರಾಣಾಗಿದ್ದರೂ ಕೆಚ್ಚು ಇಟ್ಟುಕೊಂಡು ಸ್ಪರ್ಧಿಸಲು ಬಯಸಿದ್ದಾನೆ. ಟಿಕೆಟ್ ಸಿಕ್ಕುವುದಂತೂ ಖಾತ್ರಿಯಾಗಿದ್ದರಿಂದ ಆಗಲೇ ಮತಕ್ಷೇತ್ರದ ಊರುಗಳಲ್ಲಿ ಭರ್ಜರಿ ತಿರುಗಾಟ ಆರಂಭಿಸಿದ್ದಾನೆ. ಖರ್ಗೆ ಸಾಯೋತನಕ ಮತಕ್ಷೇತ್ರ ಖಾಲಿಯಾಗಲಿಕ್ಕಿಲ್ಲ ಎಂದು ತಿಳಕೊಂಡಿದ್ದ ನಾಗಣ್ಣಗೌಡನಿಗೆ ಕ್ಷೇತ್ರ ಮರುವಿಂಗಡಣೆಯಾಗಿ ಗುರುಮಿಠಕಲ್ ಸಾಮಾನ್ಯ ಕ್ಷೇತ್ರವಾದದ್ದು ಹರ್ಷ ಹುಟ್ಟಿಸಿದೆ. ಜೊತೆಗೆ ಈ ಬಾರಿ ಶತಾಯಗತಾಯ ಗೆದ್ದು ಬರಲೇಬೇಕೆಂದು ಪಣತೊಟ್ಟಿದ್ದಾನೆ.

ಇವರಲ್ಲದೆ ಕಾಂಗ್ರೆದಿಂದ ಬಾಬುರಾವ್ ಚಿಂಚನಸೂರ ಎಂಬ ಚಿತ್ತಾಪುರದ ರಾಜಕಾರಣಿ ಇಲ್ಲಿಂದ ಸ್ಪರ್ಧಿಸಲು ಹೊಣಕಿಹಾಕಿದ್ದಾನೆ. ಚಿತ್ತಾಪುರ ಎಸ್.ಸಿ.ಮೀಸಲು ಕ್ಷೇತ್ರವನ್ನು ಖರ್ಗೆಯ ಪದತಲಕ್ಕೆ ಅರ್ಪಿಸುತ್ತ ತಾನು ಹಿಂಬಾಗಿಲ ಮೂಲಕ ಗುರುಮಿಠಕಲ್ ಪ್ರವೇಶಿಸಬೇಕೆಂದಿರುವುದು ಸುಳ್ಳಲ್ಲ. ಗುರುಮಿಠಕಲ್‌ದವರೇ ಆಗಿರುವ ನ್ಯಾಯವಾದಿ ಜಿ. ನಾರಾಯಣರಾವ್, ಉಟಕೂರದ ಭೀಮರೆಡ್ಡಿ ಹೆಸರೂ ಕೇಳಿಬರುತ್ತಿದೆ.

ಇಷ್ಟು ವರ್ಷಗಳವರೆಗೂ ಚಡ್ಡಿಯನ್ನು ಹಾಕಿಕೊಂಡು ಓಡಾಡುತ್ತಿದ್ದ ಯಲ್ಹೇರಿಯ ನೀಲಕಂಠನೂ ಹೊಸ ಚಡ್ಡಿ ಹೊಲಿಸಿಕೊಂಡು ಕ್ಷೇತ್ರದ ಉದ್ದಕ್ಕೂ ಆಗಲೇ ಓಡಾಡುತ್ತಿದೆ.


ಕ್ಷೇತ್ರದ ಮತದಾರ ಮಾತ್ರ ಈ ಎಲ್ಲರ ತಾಲೀಮು ನೋಡುತ್ತ ತಾನು ಯಾರನ್ನು ಆಯ್ಕೆ ಮಾಡಿದರೆ ಸೂಕ್ತವಾದೀತು? ಎಂದು ಆಲೋಚಿಸುತ್ತ ಮೌನ ಪ್ರೇಕ್ಷಕನಾಗಿ ಕುಳಿತಿರುವುದು ಕುತೂಹಲ ಮೂಡಿಸುತ್ತಿದೆ.

■ವಿಶ್ವಾರಾಧ್ಯ ಸತ್ಯಂಪೇಟೆ

# ಸಿಮೆಂಟ್ ಫ್ಯಾಕ್ಟರಿಗಳಿಂದ ತತ್ತರಿಸಿದ ಸೇಡಂ

ಯಾರೇನು ಲಭೋ ಲಭೋ ಅಂದರೂ ಸೇಡಂಗೆ 'ದಾಲ್ಮಿಯಾ ಸಿಮೆಂಟ್ ಕಂಪನಿ' ಕಾಲಿಡುವುದಂತೂ ತಪ್ಪಿದ್ದಲ್ಲ ಎನ್ನುವ ಸ್ಥಿತಿ ಈಗ ಇಲ್ಲಿ ನಿರ್ಮಾಣವಾಗಿದೆ. ಇದಕ್ಕೆ ಬಹು ಮುಖ್ಯ ಕಾರಣ ರಾಜ್ಯದ ನಾಮರ್ಧ ರಾಜಕಾರಣಿಗಳು. ಈ ಜನನಾಯಕರು ಎಷ್ಟು ಕಮೀಷನ್ ಕೇಳುತ್ತಾರೋ ಅಷ್ಟನ್ನು ನೀಡಿದರೆ ಸಾಕು ಅವರೆಲ್ಲ ಕಣ್ಮುಚ್ಚಿ ತಮ್ಮ 'ಅವ್ವ'ನನ್ನು ಬೇಕಾದರೂ ಮಾರಿ ಬಿಡಬಲ್ಲರು. 'ಸುಮಾರ' ಸ್ವಾಮಿ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಸರಕಾರ ನಡೆದದ್ದೇ ಪರ್ಸೆಂಟೇಜ್ ಲೆಕ್ಕಾಚಾರದಲ್ಲಿ, ಅಂಥ ಸಂದರ್ಭದಲ್ಲಿ ದಾಲ್ಮೀಯಾ ಕಂಪನಿ ಮಿಲಿಯನ್ ಟನ್ ಸಾಮರ್ಥ್ಯದ ಸಿಮೆಂಟ್ ಉತ್ಪಾದಿಸುವ 40 ಮೆಗಾವ್ಯಾಟ್ ಪವರ್ ಪ್ಲಾಂಟ್‌ಗೆ ಅನುಮೋದನೆ ಪಡಕೊಂಡಿತು.

ಇತ್ತೀಚಿಗೆ ಈ ಕಂಪನಿ ಸೇಡಂ ತಾಲೂಕಿನ ಕೊಂಕನಳ್ಳಿ ಮತ್ತು ಹೊಸಳ್ಳಿ ಸೀಮಾಂತರದಲ್ಲಿ ರೈತರ ಕಣ್ಣೀರೊರೆಸಲು ಎಂಬಂತೆ ಜಿಲ್ಲಾಧಿಕಾರಿ ಪಂಕಜಕುಮಾರ ಪಾಂಡೆ ನೇತೃತ್ವದಲ್ಲಿ ಸಭೆಯೊಂದನ್ನು ಆಯೋಜಿಸಿತ್ತು, ಆದರೆ ಅಂದು ಸಹಜವಾಗಿಯೇ ಭಾವನಾತ್ಮಕವಾದ ರೈತರು ರೊಚ್ಚಿಗೆದ್ದಾಗ ಪಂಕಜಕುಮಾರ ಪಾಂಡೆಯ ಗನ್‌ಮ್ಯಾನ್ ಅನವಶ್ಯಕವಾಗಿ ಗಾಳಿಯಲ್ಲಿ ಗುಂಡು ಹಾರಿಸಿ ಭಯದ ವಾತಾವರಣ ಸೃಷ್ಟಿಸಿದ್ದ. ಆದರೆ ಆತನನ್ನು ತರಾಟೆಗೆ ತಕ್ಕೊಳ್ಳದ ಜಿಲ್ಲಾಧಿಕಾರಿ ತನ್ನ ಮನಬಂದಂತೆ ವರ್ತಿಸಿ ತಾನು ಉದ್ಯಮಿಗಳೆಂಬ ತಿಮಿಂಗಲ ಪರ ಎಂಬುದನ್ನು ತೋರಿಸಿಕೊಂಡ.


...ಯಲ್ಲಿ ಗುಂಡು ಹಾರಿಸುತ್ತಿರುವ ಜಿಲ್ಲಾಧಿಕಾರಿಯ ಗನ್ ಮ್ಯಾನ್

ಈ ಮಧ್ಯೆ ಶರಣಪ್ರಕಾಶ ಪಾಟೀಲ ಮತ್ತು ಚಂದ್ರಶೇಖರ ರೆಡ್ಡಿ ಮದನಾ ಎಂಬ ಪುಢಾರಿ ಗೂಂಗಳು ಕೊಂಚ ಹಾರಾಡಿದಂತೆ ನಾಟಕವಾಡಿ ಸದರಿ ಕಂಪನಿಯಿಂದ ಹೆಚ್ಚಿನ ಮೊತ್ತದ ಭಕ್ಷೀಸು ಗಿಟ್ಟಿಸಿಕೊಂಡದ್ದನ್ನು ಬಿಟ್ಟರೆ ಬೇರೇನೂ ಆಗಲಿಲ್ಲ. ಯಾಕೆಂದರೆ ಜನತಾದಳ ಸರಕಾರವೇ ಅನುಮತಿ ನೀಡಿದ ದಾಲ್ಮಿಯಾ ಸಿಮೆಂಟ್ ಕಂಪನಿಯನ್ನು ಅದೇ ಪಕ್ಷದ ಮದನಾ ವಿರೋಧಿಸುತ್ತಾನೆಂದರೆ ಏನರ್ಥ?

ಇದೇನೆ ಇರಲಿ: ಇಪ್ಪತ್ತೆಂಟು ವರ್ಷಗಳ ಹಿಂದೆ ರಾಜಶ್ರೀ ಸಿಮೆಂಟ್ ಕಂಪನಿ ಕೂಡ ದಾಲ್ಮಿಯಾ ಕಂಪನಿ ಬಂದಂತೆ ಕಳ್ಳ ಹೆಜ್ಜೆಗಳನ್ನಿಟ್ಟುಕೊಂಡು ಬಂದಿತ್ತು. ತರುವಾಯ ವಾಸದತ್ತ ಹಾಗೂ ಸೌತ್ ಇಂಡಿಯಾ ಸಿಮೆಂಟ್ ಕಂಪನಿಗಳೂ ಕೂಡ ಅದೇ ಜಾಡಿನಲ್ಲಿ ಬಂದು ಠಿಕಾಣಿ ಹೂಡಿಕೊಂಡಿದ್ದವು. ಇವು ಈ ನೆಲದಲ್ಲಿ ಕಾಲೂರುವುದಕ್ಕಿಂತ ಮುಂಚೆ ಎಲ್ಲರ ಬಾಯಲ್ಲಿ ನೀರೂರುವಂಥ ಆಶ್ವಾಸನೆಯ ಸುರಿಮಳೆಯನ್ನೇ ಕರೆಯಿಸಿದ್ದವು. ಸೇಡಂ ಅನ್ನು ರಾಜ್ಯದ ಮಾದರಿ ತಾಲೂಕು ಮಾಡುವ ಭರವಸೆಯನ್ನು ನೀಡಿದ್ದವು. ಆದರೆ ಇದುವರೆಗೆ ಆ


ಶರಣಪ್ರಕಾಶ ಪಾಟೀಲ


ಚಂದ್ರಶೇಖರ ರೆಡ್ಡಿ


ಜಿಲ್ಲಾಧಿಕಾರಿ ಪಂಕಜಕುಮಾರ.

ಕಂಪನಿಗಳೆಲ್ಲ ಮಾಡಿದ್ದೇನು? ಎಂದು ನೋಡಿದರೆ ದಿಗಿಲಾಗುತ್ತದೆ.

ಸಿಮೆಂಟ್ ಕಂಪನಿಗಳು ನೀರನ್ನು ಜಾಸ್ತಿ ಉಪಯೋಗಿಸುವುದರಿಂದ ಈ ಹಿಂದೆ ತುಂಬ ಹರಿಯುತ್ತಿದ್ದ ಕಮಲಾವತಿ ಹಾಗೂ ಕಾಗಿಣಾ ನದಿಗಳು ಇವತ್ತು ಅಕ್ಷರಶಃ ಬರಿದಾಗಿವೆ. ಇದರಿಂದ ಬೋರವೆಲ್ ಬಾವಿಗಳಲ್ಲಿಯೂ ನೀರು ಬತ್ತಿಹೋಗಿದೆ. ಅಂತರಜಲ ಮಟ್ಟ ಕುಸಿಯುತ್ತಿದ್ದಂತೆ ಭೂತಾಯಿಯ ಒಡಲು ಬರಿದಾಗಿ ಅದೆಲ್ಲ ಕರಲು ಬಿದ್ದಿದೆ. ಮಣ್ಣೂ ಅಲ್ಲದ, ಉಸುಕೂ ಅಲ್ಲದ ಈ ಬಂಜರು ಭೂಮಿಯಲ್ಲಿ 'ಜಾಕ್' ಎಂಬ ಸಸ್ಯ ಮಾತ್ರ ಸಮೃದ್ಧವಾಗಿ ಬೆಳೆದಿದೆ. ಈ ಸಸ್ಯದಿಂದಾಗಿ ಎಲ್ಲೆಡೆ ದುರ್ವಾಸನೆ ಹೆಚ್ಚಾಗಿ ಸೊಳ್ಳೆಗಳ ಕಾಟ ಹೆಚ್ಚಾಗಿದೆ. ಸಿಮೆಂಟ್ ಕಾರ್ಖಾನೆಗಳು ಸೂಸುವ ಧೂಳಿನಿಂದ ಇಲ್ಲಿನ ಶೇಕಡಾ 50 ರಷ್ಟು ಜನರಿಗೆ ಈಗಾಗಲೇ ಅಸ್ತಮಾ ರೋಗ ಬಂದಿದೆ. ದನಕರುಗಳಿಗೆ-ಪಶುಪಕ್ಷಿಗಳ ಮೇಲೆಯೂ ಈ ಧೂಳಿನಿಂದ ವ್ಯತಿರಿಕ್ತ ಪರಿಣಾಮ ಉಂಟಾಗಿದೆ. ಅಷ್ಟೇ ಅಲ್ಲ, ಪರಿಸರದ ಜೊತೆ ಸೇರುವ ಧೂಳು ಸಸ್ಯಗಳ ಜೈವಿಕ ಕ್ರಿಯೆಗ[...] ಸಂಚಕಾರ ತಂದೊಡ್ಡಿವೆ. ಕೃಷಿ ಇಲಾಖೆಯ ತಜ್ಞರ[...] ಶೇಕಡಾ 65 ಪರ್ಸೆಂಟ್ ಬೆಳೆಗಳ ಮೇಲೆ ಪರಿಣಾಮ[...] ಬೀರುತ್ತಿದೆ ಎಂದು ತಮ್ಮ ವರದಿಯಲ್ಲಿ ಹೇಳಿದ್ದಾರೆ[...] ಇದರಿಂದ ಸಹಜವಾಗಿ ಬೆಳೆಗಳ ಇಳುವರಿಯೂ[...] ಕಡಿಮೆಯಾಗುತ್ತ ನಡೆದಿದೆ. ರೈತರ ಹೊಟ್ಟೆಯ ಮೇಲೂ[...] ಇದರ ಕರಾಳಛಾಯೆ ಬಿದ್ದಿದೆ. ಇವೆಲ್ಲ ಸಂಗತಿಗಳು[...] ನಿಜಕ್ಕೂ ಎಲ್ಲರನ್ನು ತಲ್ಲಣಗೊಳಿಸುವಂಥವು.

ಆದರೆ ಇದರ ಖಬರು ಇಲ್ಲದ ಬೇವಾಸಿ[...] ಪುಢಾರಿಗಳು ಚುನಾವಣೆಗಳು ಬಂದಾಗ ಈ ಕಂಪನಿಗ[...] ಮಾಲೀಕರ ಜೇಬಿಗೆ ಜೋತು ಬೀಳುತ್ತಾರೆ. ಚುನಾವಣೆಯ[...] ಸಂದರ್ಭದಲ್ಲಿ ಯಾವುದೇ ಪಕ್ಷದ ನಾಯಕನಿಗೂ ಇವರು[...] ಲಕ್ಷಾಂತರ ಹಣ ಸಂದಾಯ ಮಾಡುತ್ತಾರೆ. ಗೆಲ್ಲುವ[...] ಕುದುರೆ ಎಂದು ತೋರಿಸಿದ ಕ್ಯಾಂಡಿಡೇಟ್‌ಗಂತೂ ಹಣದ[...] ಹೊಳೆಯನ್ನೇ ಹರಿಸುತ್ತಾರೆ. ಹೀಗೆ ಕಾರ್ಖಾನೆಗಳ ಹೊಲಸಿ[...] ಹೊಂಡದಲ್ಲಿ ಈಜಿ ಗೆದ್ದು ಬಂದ ಶಾಸಕ ಕಂಪನಿ ಮಾಲೀಕ[...] ಹಿತ ಕಾಯುತ್ತಾನಲ್ಲದೆ ಕ್ಷೇತ್ರದ ಜನಸಾಮಾನ್ಯರ ಹಿ[...] ಕಾಯುತ್ತಾನೆಯೇ?

ಈ ಕಾರ್ಖಾನೆಗಳ ಮುಖ್ಯಸ್ಥರು ಎಂಥ ಕರಾಮತ್ತಿ[...] ಜನರೆಂದರೆ ತಮ್ಮ ಉದ್ದೇಶಿತ ಕಂಪನಿಯನ್ನು ಬೇಕೆಂದೇ[...] ಗ್ರಾಮಪಂಚಾಯತಿಯ ಮಟ್ಟದ ಊರುಗಳಲ್ಲಿ ಬರುವಂ[...] ನೋಡಿಕೊಳ್ಳುತ್ತಾರೆ. ಇದಕ್ಕೆ ಪಟ್ಟಣಗಳಲ್ಲಿ ಕಾರ್ಖಾ[...] ಸ್ಥಾಪಿಸಿದರೆ ಹೆಚ್ಚಿನ ತೆರಿಗೆ ಕಟ್ಟಬೇಕಾದಿತೆಂಬುದು ಒಂದು[...] ಗ್ರಾಮ ಮಟ್ಟದಲ್ಲಿ ಕಂಪನಿ ಸ್ಥಾಪಿಸುವುದರಿಂದ[...] ಸರಕಾರದಿಂದ ಹಲವಾರು ಸವಲತ್ತುಗಳನ್ನೂ[...] ಪಡೆಯಬಹುದೆಂಬುದು ಇನ್ನೊಂದು ಕಾರಣ. ಈ[...] ಕಾರಣಗಳಿಂದಾಗಿಯೇ ವಾಸವದತ್ತ ರಾಜಶ್ರೀ ಹಾಗೂ[...] ಸೌತ್ ಇಂಡಿಯಾ ಸಿಮೆಂಟ್ ಕಂಪನಿಗಳ[...] ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಸ್ಥಾಪಿತವಾದವು[...] ಹೋಗಲಿ ಆಯಾ ಗ್ರಾಮಪಂಚಾಯತಿಗಾದರೂ ಅವ[...] ಕರಕಟ್ಟಿದವೆ ಎಂದು ನೋಡಿದರೆ ಅದೂ ಇಲ್ಲ. ಏನೇನೋ[...] ಸಬೂಬು ಹೇಳಿ ತಮ್ಮ ಕೈ ಜಾಡಿಸಿಕೊಂಡಿವೆ. ಕೊನೆಗೂ[...] ಮದನಾ ಪ್ರಯತ್ನದಿಂದ ಕಾರ್ಖಾನೆಯಿರುವ ಪ್ರದೇಶವನ್ನು[...] ಪುರಸಭೆಯ ವ್ಯಾಪ್ತಿಗೆ ತಂದು ಹೈಕೋರ್ಟ್[...] ಮೆಟ್ಟಿಲೇರಿದಾಗ ಎರಡು ಕೋಟಿ ಮೂವತ್ತೈದು ಲ[...] ರೂಪಾಯಿಗಳನ್ನು ಪೀಕಿದವು.

ಕಾರ್ಖಾನೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ಅವಕಾ[...] ಕೊಡುತ್ತೇವೆ ಎಂದು ಬೊಗಳೆ ಬಿಡುವ ಮಾಲೀಕರು[...] ಬರು ಬರುತ್ತಾ ನಮ್ಮಲ್ಲಿ ಸೆರಮಿಕ್ ಇಂಜಿನಿಯರ್, ಪ್ರೊಡಕ್ಷನ್ ಇಂಜಿನಿಯರ್, ಬಾಯ್‌ಲರ್ ಆಪರೇಟರ್ ಇಂಜಿನಿಯರ್, ಮೈನಿಂಗ್ ಇಂಜಿನಿಯರ್ ಪಾಸಾದ ಅರ್ಹ ಅಭ್ಯರ್ಥಿಗಳು ಬೇಕು ಎನ್ನುತ್ತಾರೆ. ವಾಸ್ತವದಲ್ಲಿ ಈ ಕೋರ್ಸ್‌ಗಳನ್ನು ಹೇಳಿಕೊಡುವ ಇಂಜಿನಿಯರಿಂಗ್ ಕಾಲೇಜುಗಳ[...] ನಮ್ಮ ಭಾಗದಲ್ಲಿ ಇರಲಿಲ್ಲ. ಆದ್ದರಿಂದ ಉತ್ತರ ಭಾರತ[...] ಜನ ಸಾಗರದಂತೆ ಹರಿದು ಬಂದು ನಮ್ಮ ನೆಲದ[...] ತಮ್ಮ ಜಂಡಾ ಊರಿಬಿಟ್ಟಿದ್ದಾರೆ. ನಮ್ಮ ಭಾಗ[...] ಜನಗಳೇನಿದ್ದರೂ ಗೇಟು ಕಾಯುವ, ಕಸಬಳಿಯುವ[...] ಬಹಳವಾದರೆ ಆಫೀಸ್ ಕಾರಕೂನನಾಗುವ ಹುದ್ದೆಗಳನ್ನ[...] ಮಾತ್ರ ಪಡೆದು ಸಂತೃಪ್ತರಾಗಬೇಕಾದ ಪರಿಸ್ಥಿತಿ ಇದ[...] ಈ ಬಗ್ಗೆ ಸರಿಯಾಗಿ ಆಲೋಚಿಸಿ ಸಮರ್ಥ ಅಭ್ಯರ್ಥಿ[...]ಗಳನ್ನು ಕಾರ್ಖಾನೆಗೆ ಒದಗಿಸಬೇಕಾದ ಧರ್ಮಸಿಂಗ[...] ಮತ್ತು ಖರ್ಗೆ ಎಂಬ ಮುಂದಾಲೋಚನೆ ಇಲ್ಲದ[...] ತದ್ಬೋಡಿಗಳು ಬುದ್ದುಗಳಾಗಿದ್ದಾರೆ. ಅಥವಾ ಬುದ್ದುಗಳಂತೆ[...] ವರ್ತಿಸುತ್ತಿದ್ದಾರೆ.

ಇಂಥ ಇಕ್ಕಟ್ಟಿನ ಸಂದರ್ಭದಲ್ಲಿ ರೈತರು ತಾವೆ[...] ಸಂಘಟಿತರಾಗಿ ಕಾರ್ಖಾನೆಗಳೆಂಬ ಖದೀಮರ ವಿರು[...] ಟೊಂಕಕಟ್ಟಿ ನಿಲ್ಲಬೇಕಿದೆಯಲ್ಲವೇ?



# ಬಡವನ ಕಾಲು ಮುರಿದ ಸಿ.ಟಿ. ರವಿ

ಚಿಕ್ಕಮಗಳೂರಿನ ಮಾಜಿ ಶಾಸಕ ಸಿ.ಟಿ. ರವಿಯ ಆಟಾಟೋಪಗಳು ಮಿತಿ ಮೀರುತ್ತಿವೆ. ಅಲ್ಪಸಂಖ್ಯಾತರ ಬಗ್ಗೆ ಕಿಡಿಕಾರುವ ಈತ, ದತ್ತಾತ್ರೇಯ ವಿಗ್ರಹ ಸ್ಥಾಪನೆಗೆ ಅನುಮತಿ ನೀಡದಿದ್ದರೆ ಬೆಂಕಿ ಹಚ್ಚಿಕೊಂಡು ಆತ್ಮಾಹುತಿಯಾಗುತ್ತೇನೆಂದು ನಾಟಕವಾಡುವ ಈತ, ನಗರದ ಅಭಿವೃದ್ಧಿಗೆ ರಸ್ತೆ ಅಗಲ ಆಗದಿದ್ದರೂ ಸರಿ ತನ್ನ ಭಂಟರ ಅಂಗಡಿಗಳನ್ನು ನೆಲಸಮ ಮಾಡಬಾರದೆಂದು ಹಠ ಹಿಡಿಯುವ ಈತ ಈಗ ಒಬ್ಬ ಬಡವನ ಕಾಲು ಮುರಿದು ಆತನ ಬದುಕನ್ನೇ ನಾಶಗೊಳಿಸಿದ್ದಾನೆ.

ಅದು ನಡೆದದ್ದು ಹೀಗೆ:

ಚುನಾವಣೆಗಳು ಇನ್ನೂ ನಡೆಯದಿದ್ದರೂ ತಾವಾಗಲೇ ಗೆದ್ದು ಅಧಿಕಾರ ಹಿಡಿದಿದ್ದೇವೆ ಎಂಬ ಅಮಲನ್ನು ತಮ್ಮ ತಲೆಯಲ್ಲಿ ತುಂಬಿಕೊಂಡಿದ್ದಾರೆ ಬಿಜೆಪಿ ಪಕ್ಷದ ಮತ್ತದರ ಒಡನಾಡಿ ಸಂಘಟನೆಗಳ ಚೆಡ್ಡಿಗಳು. ಅಂತಹ ಅಮಲಿನಲ್ಲೇ ಹಲವು ಚೆಡ್ಡಿ ಪುಂಡರು ಮೊನ್ನೆ ಸಿ.ಟಿ. ರವಿಯೊಂದಿಗೆ ಚಿಕ್ಕಮಗಳೂರಿನ ಸಿಂದಿಗೆರೆಗೆ ಸಭೆಯೊಂದಕ್ಕೆ ಹೋಗಿದ್ದಾರೆ. ಅಲ್ಲಿ ಸೇರಿದ್ದ ಜನರನ್ನು ನೋಡಿ ಮತ್ತಷ್ಟು ಉತ್ತೇಜನಗೊಂಡ ಅವರೆಲ್ಲಾ ಇನ್ನಷ್ಟು 'ಅಮಲ'ನ್ನು ಏರಿಸಿಕೊಂಡಿದ್ದಾರೆ.

ಮದ್ಯದ ಅಮಲಿನಲ್ಲಿ ಚಿಕ್ಕಮಗಳೂರಿಗೆ ತಮ್ಮ ಜೀಪಿನಲ್ಲಿ (ಸಂಖ್ಯೆ **KL 05 - D 5034**) ಹಿಂದಿರುಗುತ್ತಿದ್ದಾಗ ವಾಹನದ ಮೇಲೆ ಹಿಡಿತ ಕಳೆದುಕೊಂಡು ರಸ್ತೆ ಬದಿ ನಿಂತಿದ್ದ ತಿಮ್ಮಶೆಟ್ಟಿ ಎಂಬುವವರ ಮೇಲೆ ಅದನ್ನು ಹರಿಸಿದ್ದಾರೆ. ಈ ಅಪಘಾತದಿಂದಾಗಿ ತಿಮ್ಮಶೆಟ್ಟಿಯವರ ಎಡಗಾಲು ಮಧ್ಯದಲ್ಲೇ ಕತ್ತರಿಸಿ ಹೋಗಿದೆ. ಅವರ ಬಲಗಾಲು ಕೂಡ ನಜ್ಜುಗುಜ್ಜಾಗಿದೆ.

ಸಿಂದಿಗೆರೆಯಲ್ಲಿರುವ ತಮ್ಮ ಮಗಳ ಮನೆಗೆ ಬಂದಿದ್ದ ತಿಮ್ಮಶೆಟ್ಟಿ ತುಂಬಾ ಬಡವರು. ಅವರಿಗೆ 30 ಗುಂಟೆ ಜಮೀನು ಹೊರತುಪಡಿಸಿದರೆ ಬೇರೆ ಯಾವುದೇ ಆದಾಯದ ಮೂಲವಿಲ್ಲ, ಒಂದು ಗಂಡು ಮಗು ಮತ್ತು ಇಬ್ಬರು ಹೆಣ್ಣುಮಕ್ಕಳನ್ನು ಹೊಂದಿರುವ ತಿಮ್ಮಶೆಟ್ಟಿ ಈಗ ಅಂಗವಿಕಲರಾಗಿರುವುದರಿಂದ ಅವರ ಕುಟುಂಬ ಈಗ ಅನಾಥವಾಗಿದೆ. ಬದುಕಿನ ದಿಕ್ಕು ಕಾಣದೆ ಕಂಗಾಲಾಗಿದೆ.

ಇದೊಂದು ಆಕಸ್ಮಿಕ ಅಪಘಾತ, ಅದರಲ್ಲಿ ರವಿಯ ಪಾತ್ರ ಇರಲಿಲ್ಲ ಎಂದು ಹೇಳಿ ಸುಮ್ಮನಾಗುವಂತಿಲ್ಲ, ಯಾಕೆಂದರೆ ಅಪಘಾತಕ್ಕೆ ಕಾರಣನಾದ ವಾಹನ ಚಾಲಕ ಮತ್ತು ತನ್ನೊಂದಿಗಿದ್ದ ಪುಂಡರ ನೆರವಿಗೆ ರವಿ ನಿಂತಿದ್ದಾನೆ. ಅಪಘಾತ ಸಂಭವಿಸುತ್ತಿದ್ದಂತೆ ಅಲ್ಲಿ ಸೇರಿದ ಜನರ ಆಕ್ರೋಶವನ್ನು ಕಂಡ ರವಿ ತನ್ನ ಹಿಂಬಾಲಕರೆಲ್ಲ ಸುರಕ್ಷಿತವಾಗಿ ನಾಪತ್ತೆಯಾಗುವಂತೆ ನೋಡಿಕೊಂಡಿದ್ದಾನೆ. ಆದರೆ ತಾನು ಮಾತ್ರ ಮೊಸಳೆ ಕಣ್ಣೀರು ಹಾಕಿದ್ದಾನೆ. ಅವನ ಈ ಕುತಂತ್ರವನ್ನು ಅರಿತ ಜನ ರವಿಗೆ ಛೀಮಾರಿ ಹಾಕಿದ್ದಾರಲ್ಲದೆ, ವಾಹನದ ಚಕ್ರಗಳನ್ನು ಪಂಕ್ಚರ್ ಮಾಡಿ ಮುಂದೆ ಹೋಗದಂತೆ ತಡೆದಿದ್ದಾರೆ. ಆಗ ವಿಧಿ ಇಲ್ಲದೆ ಪೊಲೀಸರನ್ನು ಸ್ಥಳಕ್ಕೆ ಕರೆಸಿಕೊಂಡ ರವಿ ನೆಪಮಾತ್ರಕ್ಕೆ ಸಣ್ಣ ಕೇಸೊಂದನ್ನು ಅವರು ದಾಖಲಿಸಿಕೊಳ್ಳುವಂತೆ ನೋಡಿಕೊಂಡು ಅಲ್ಲಿಂದ ಪರಾರಿ ಆಗಿದ್ದಾನೆ.

ಬಡವರ ಬಗ್ಗೆ, ಅನ್ಯಾಯದ ಬಗ್ಗೆ ಪುಂಖಾನುಪುಂಖವಾಗಿ ಭಾಷಣ ಬಿಗಿಯುವ ರವಿಯ ನಿಜವಾದ ಕಾಳಜಿಗೆ ಈ ಪ್ರಕರಣ ಒಂದು ಸೈಜ ಉದಾಹರಣೆಯಾಗಿದೆ.

ಅದೆಲ್ಲ ಬದಿಗಿರಲಿ, ಹಿಂದೂ ಧರ್ಮ, ಹಿಂದೂತ್ವವಾದ ಎಂದೆಲ್ಲಾ ಬಡಬಡಾಯಿಸುವ ರವಿ ರಾಜಕೀಯವನ್ನು ಪ್ರವೇಶಿಸುವ ಮುನ್ನ ಸಾಮಾನ್ಯರಲ್ಲಿ ಸಾಮಾನ್ಯನಾಗಿದ್ದವ. ಆತನೇ ಹೇಳುವಂತೆ "ಸಾಮಾನ್ಯ ರೈತನ ಮಗ" ("ರೈತರ ಮುಂದಾ ಪೋಚಿದ ಮಗ" ಎಂದು ಜನ ಇವತ್ತು ಆಡಿಕೊಳ್ಳುತ್ತಿರುವುದು ಬೇರೆ ವಿಷಯ). ಆದರೆ ಈತ ಶಾಸಕನಾದ ಮೂರು ವರ್ಷಗಳಲ್ಲೇ ಕೋಟ್ಯಾಧೀಶನಾಗಿದ್ದಾನೆ. ಈ ಪವಾಡ ಹೇಗೆ ಸಾಧ್ಯವಾಯಿತು? ಮಾತೆತ್ತಿದರೆ ಪ್ರಾಮಾಣಿಕತೆಯ ಬಗ್ಗೆ, ಭ್ರಷ್ಟಾಚಾರದ ಬಗ್ಗೆ ಭಾಷಣ ಬಿಗಿಯುವ ಈತನ ಪಕ್ಷದ ಹರಕುಬಾಯಿ ನಾಯಕರು ಈ ಪ್ರಶ್ನೆಗೆ ಉತ್ತರ ನೀಡುವರೇ?

ಮೊನ್ನೆ ಇದೇ ರವಿ ಸಭೆಯೊಂದರಲ್ಲಿ, "ಜಾತಿವಾದಿಗಳನ್ನು, ಭೀತಿವಾದಿಗಳನ್ನು ತಿರಸ್ಕರಿಸಿ. ಪ್ರೀತಿವಾದಿಗಳನ್ನು ಪುರಸ್ಕರಿಸಿ" ಎಂದು ಭಾಷಣ ಬಿಗಿದಿದ್ದಾನೆ. (ತಾನು ಯಾರನ್ನು ಪ್ರೀತಿಯಿಂದ ಕಂಡಿದ್ದಾನೆ ಎಂದು ಆತನನ್ನೇ ಕೇಳಿದರೆ ಉತ್ತರಕ್ಕಾಗಿ ತಡಕಾಡಬೇಕಾಗುತ್ತದೆ ಎಂದೂ ಜನ ಆಡಿಕೊಳ್ಳುತ್ತಿದ್ದಾರೆ ಬಿಡಿ).

ಆದರೆ ಸ್ವತಃ ರವಿ ಎಂತಹ ಭೀತಿವಾದಿ ಮತ್ತು ಜಾತಿವಾದಿ ಎಂಬುದಕ್ಕೆ ಬೇಕಾದಷ್ಟು ಉದಾಹರಣೆಯು ಸಿಗುತ್ತವೆ. ಅಲ್ಪಸಂಖ್ಯಾತರ ಬಗ್ಗೆ ಈತನ ನಿಲುವುಗಳು ಭಯೋತ್ಪಾದಕವಾಗಿರುತ್ತವೆ ಎಂಬುದು ಈಗ ಎಲ್ಲರಿಗೂ ಗೊತ್ತಿರುವ ವಿಷಯ. ಇನ್ನು ಜಾತಿವಾದಕ್ಕೆ ಬಂದರೆ ರವಿಯನ್ನು ಮೀರಿಸುವವರೇ ಚಿಕ್ಕಮಗಳೂರಿನಲ್ಲಿ ಸಿಗುವುದಿಲ್ಲ.

ತನ್ನ ಒಕ್ಕಲಿಗ ಜಾತಿಬಂಧುಗಳಿಗೆ ಜಿಲ್ಲಾ ಬಿಜೆಪಿಯಲ್ಲಿ ಮಣೆ ಹಾಕಿರುವ ರವಿಗೆ ಇತರೆ ಜಾತಿಯವರನ್ನೆಲ್ಲ ತುಳಿದ ಕೀರ್ತಿ ಇದೆ. ಅಷ್ಟೇ ಅಲ್ಲ, ಈತ ಎಷ್ಟರಮಟ್ಟಿಗೆ ಜಾತಿವಾದಿ ಎಂದರೆ ಯಡಿಯೂರಪ್ಪನ ಸರ್ಕಾರಕ್ಕೆ ಕುಮಾರಸ್ವಾಮಿ ಬೆಂಬಲವನ್ನು ನೀಡದೆ ಸರ್ಕಾರ ಉರುಳಿದಾಗ "ಕುಮಾರಸ್ವಾಮಿ ನಮ್ಮ ಜಾತಿಯವನೆಂದು ಹೇಳಿಕೊಳ್ಳಲಿಕ್ಕೆ ನಾಚಿಕೆಯಾಗುತ್ತಿದೆ" ಎಂದಿದ್ದ.

ಇನ್ನು ಲಿಂಗಾಯತರಾದ ಎಚ್. ನಂಜೇಗೌಡರನ್ನು ಬಿಜೆಪಿಯ ಜಿಲ್ಲಾಧ್ಯಕ್ಷ ಮಾಡುತ್ತೇನೆಂದು ನಂಬಿಸಿ ಆತನಿಗೆ ಕೈಕೊಟ್ಟು ತನ್ನ ಒಕ್ಕಲಿಗ ಜಾತಿಯ ಎಂ.ಎಸ್. ಭೋಜೇಗೌಡ ಆಗುವಂತೆ ನೋಡಿಕೊಂಡಿದ್ದ. ಹಾಗೆಯೇ



ಲಿಂಗಾಯತ ನಿರಂಜನನನ್ನು ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನನ್ನಾಗಿ ಮಾಡುತ್ತೇನೆಂದು ಹೇಳಿ ಕೊನೇಕ್ಷಣದಲ್ಲಿ ತನ್ನ ಕುಲಬಾಂಧವ ಸಿ.ಎಚ್. ಲೋಕೇಶನಿಗೆ ಪಟ್ಟ ಕಟ್ಟಿದ್ದ. ಹಿರೇಮಗಳೂರು ತಮ್ಮಯ್ಯನನ್ನು ಚಿಕ್ಕಮಗಳೂರು ನಗರಸಭೆಯ ಅಧ್ಯಕ್ಷನನ್ನಾಗಿ ಮಾಡುತ್ತೇನೆಂದು ಹೇಳುತ್ತಲೇ ಕೋಟೆ ಕೃಷ್ಣನನ್ನು ಅಧ್ಯಕ್ಷನನ್ನಾಗಿ ಕೂರಿಸಿದ. ತನ್ನ ಒಕ್ಕಲಿಗ ಜಾತಿಯ ಹೊರತಾಗಿ ಬೇರೆ ಜಾತಿಯ ಜನರು ರವಿಗೆ ನೆನಪಾಗುವುದು ಚುನಾವಣೆಗಳು ಎದುರಾದಾಗ ಮಾತ್ರ. ಇಂತಹ ರವಿ "ಜಾತಿವಾದಿಗಳನ್ನು ವಿರೋಧಿಸಿ" ಎಂದು ಕೊಟ್ಟಿರುವ ಕರೆಯನ್ನು ಚಾಚೂತಪ್ಪದೆ ಪಾಲಿಸಲು ಈಗ ಚಿಕ್ಕಮಗಳೂರಿನ ಜನತೆ ಕಾಯುತ್ತಿದ್ದಾರೆ ಎಂಬುದು ಸುಳ್ಳಲ್ಲ!


ಇಡೀ ಜಿಲ್ಲೆಯಲ್ಲಿ ತಾನೊಬ್ಬನೇ ಬಿಜೆಪಿಯ ನಾಯಕನಾಗಿರಬೇಕೆಂಬ ಕುತಂತ್ರ ಬುದ್ಧಿಯ ರವಿ ಆ ನಿಟ್ಟಿನಲ್ಲಿ ತಯಾರಿ ನಡೆಸಿದ್ದಾನೆ. ಬರುವ ಚುನಾವಣೆಗಳಲ್ಲಿ ಬಿಜೆಪಿ ಗೆದ್ದು ಬಂದರೆ ಜಿಲ್ಲೆಯಿಂದ ಮಂತ್ರಿ ಸ್ಥಾನಕ್ಕೆ ತನ್ನನ್ನು ಹೊರತುಪಡಿಸಿ ಬೇರೊಬ್ಬ ಲೀಡರ್ ಇರಬಾರದೆಂದು ಆತ ಹೂಡಿರುವ ಷಡ್ಯಂತ್ರ ಆತನ ಗುರು ಯಡಿಯೂರಪ್ಪನನ್ನೂ ಮೀರಿಸುವಂತದ್ದು. ಉದಾಹರಣೆಗೆ ಮೂಡಿಗೆರೆಯ ಮಾಜಿ ಶಾಸಕ ದಲಿತ ಎಂ.ಪಿ. ಕುಮಾರಸ್ವಾಮಿಯ ವಿರುದ್ಧ ದೊಡ್ಡಯ್ಯ ಎಂಬಾತನನ್ನು ಎತ್ತಿಕಟ್ಟಿದ್ದಾನೆ. ಅಷ್ಟೇ ಅಲ್ಲ ತರೀಕೆರೆಯಲ್ಲಿ ಓಂಕಾರಪ್ಪನ ವಿರುದ್ಧ ದೋರ್‌ನಾಳ್ ಸುರೇಶನನ್ನು, ಕಡೂರಿನಲ್ಲಿ ಡಾ. ವಿಶ್ವನಾಥ್ ವಿರುದ್ಧ ಬೀರೂರು ದೇವರಾಜ್‌ನನ್ನು ಛೂ ಬಿಟ್ಟಿದ್ದಾನೆ. ಅಷ್ಟೇ ಅಲ್ಲದೆ ಸಮ್ಮಿಶ್ರ ಸರ್ಕಾರದಲ್ಲಿ ತನಗೇ ಸೆಡ್ಡು ಹೊಡೆದ ಮುಖ್ಯ ಸಚೇತಕನಾದನೆಂಬ ಈರ್ಷ್ಯೆಯಿಂದಾಗಿ ಶೃಂಗೇರಿ ಕ್ಷೇತ್ರದ ಮಾಜಿ ಶಾಸಕ ಜೀವರಾಜನ ವಿರುದ್ಧ ಶ್ರೀರಾಮ ಸೇನೆ ಎಂಬ ಮಂಗಗಳ ತಂಡದ ರವಿಶಂಕರ್ ಎಂಬಾತನನ್ನು ಮುಂದೆಬಿಟ್ಟಿದ್ದಾನೆ.

ಇಷ್ಟೆಲ್ಲಾ ಕುತಂತ್ರಗಳನ್ನು ನಡೆಸಿರುವ ರವಿಗೆ ತನ್ನ ಸ್ವಂತ ಕ್ಷೇತ್ರದಲ್ಲೇ ವೈರಿಗಳು ಹುಟ್ಟಿಕೊಂಡಿದ್ದಾರೆ ಎಂಬುದು ಮಾತ್ರ ಗೊತ್ತಾಗಿಲ್ಲ! ಏಕೆಂದರೆ ಇವತ್ತು ಸಿ.ಎಚ್. ಲೋಕೇಶ್, ರೇಖಾ ಹುಲಿಯಪ್ಪ ಗೌಡ ಮತ್ತು ರವೀಶ್ ಕ್ಯಾತನ್ ಈಗಾಗಲೇ ತಾವೂ ಬಿಜೆಪಿ ಟಿಕೆಟ್ ಆಕಾಂಕ್ಷಿಗಳೆಂದು ಘೋಷಿಸಿಕೊಂಡಿದ್ದಾರಲ್ಲದೆ ರವಿಯ ಬುಡಕ್ಕೆ ನೀರು ಬಿಡಲು ಸಿದ್ಧರಾಗಿದ್ದಾರೆ.

ಒಂದೆಡೆ ಈತನ ಆಟಾಟೋಪಗಳಿಂದ ಬೇಸತ್ತಿರುವ ಜನ, ಇನ್ನೊಂದೆಡೆ ತಮಗೆ ಈತ ಪಾಲು ನೀಡಲಿಲ್ಲವೆಂದು ಕುಸಲುತ್ತಿರುವ ಚೆಡ್ಡಿಗಳು, ಮತ್ತೊಂದೆಡೆ ಪಕ್ಷದಲ್ಲೇ ಈತನ ವಿರುದ್ಧ ಭಿನ್ನಮತ... ಈ ಮೂರೂ ವಲಯದ ವಿರೋಧವನ್ನು ಕಟ್ಟಿಕೊಂಡಿರುವ ರವಿ ಇನ್ನೊಂದು ಅವಧಿಗೆ ಶಾಸಕನಾಗುವುದು ಕನಸಿನ ಮಾತು ಎನ್ನುತ್ತಿದ್ದಾರೆ ಚಿಕ್ಕಮಗಳೂರಿಗರು.

■ ವರದಿಗಾರ

---




# ಮೈಸೂರು: ಸಿಸಿಬಿಯ ಟೆರರಿಸ್ಟ್ ಪೊಲೀಸರು

ಮೈಸೂರಿನ ಸಿಸಿಬಿ ಪೊಲೀಸರು ಮನುಷ್ಯತ್ವ ಕಳೆದುಕೊಂಡುಬಿಟ್ಟಿದ್ದಾರೆ.

ಮಂಡಿ ಮೊಹಲ್ಲಾದ ಯುವಕ ಖಮ್ರಾನ್ ಹಾಗೂ ದೀಪಾ ಎಂಬ ಮರಾಠಿ ಯುವತಿ [illegible] ಮದುವೆಯಾಗಲು ಇತ್ತೀಚೆಗೆ ಮನೆಬಿಟ್ಟು ಹೊರಟುಹೋಗಿದ್ದರು. ಈ ಸಂಬಂಧ ದೀಪಾಳ ತಂದೆ ಬಾಬುರಾವ್ ಮಗಳು ಕಾಣೆಯಾಗಿದ್ದಾಳೆಂದು ಕಂಪ್ಲೇಂಟ್ ಕೊಟ್ಟಿದ್ದರು.

ಅದಕ್ಕೆ ಪೊಲೀಸರು ಮಾಡಿದ್ದೇನು ಗೊತ್ತೆ?

ಖಮ್ರಾನ್‌ನ ಗೆಳೆಯ ಮಹಮದ್ ಗೌಸ್‌ನನ್ನು ಎಳೆದುಕೊಂಡು ಹೋಗಿ ಅಕ್ರಮ ಬಂಧನದಲ್ಲಿಟ್ಟುಕೊಂಡು ಅವನ ಮರ್ಮಾಂಗಕ್ಕೆ ಕರೆಂಟು ಶಾಕ್ ನೀಡಿ ಚಿತ್ರಹಿಂಸೆ ಮಾಡಿದ್ದಾರೆ.

ಎದುರುಬದಿರು ಮನೆಯಲ್ಲಿದ್ದ ಮುಸ್ಲಿಂ ಖಮ್ರಾನ್ ಹಾಗೂ ಮರಾಠಿ ಜನಾಂಗದ ದೀಪಾರ ನಡುವೆ ಪರಿಚಯ ಬೆಳೆದು ಪ್ರೇಮಿಗಳಾಗಿದ್ದಾರೆ. ತಮ್ಮ ಮದುವೆಗೆ ಮನೆಯವರು ಒಪ್ಪಲಾರರೆನಿಸಿತೋ ಏನೋ ಕಳೆದ ವಾರ ಒಂದು ದಿನ ಇವರಿಬ್ಬರೂ ಮನೆಯಿಂದ ಹೊರಬಿದ್ದಿದ್ದಾರೆ. ಅವರೆಲ್ಲಿದ್ದಾರೆಂಬುದು ಈಗಲೂ ಗೊತ್ತಿಲ್ಲ . ಇದರಿಂದ ಆತಂಕಗೊಂಡ ದೀಪಾರ ತಂದೆ ಬಾಬುರಾವ್ ನೇರ ಮಂಡಿ ಮೊಹಲ್ಲಾ ಠಾಣೆಗೆ ಹೋಗಿ ದೂರು ನೀಡಿದ್ದಾರೆ. ಈತ ಸ್ವಲ್ಪ ಹಣವಂತ ಕೂಡ. ಮೈಸೂರಿನ ಪ್ರಭಾ ಟಾಕೀಸಿನ ಹತ್ತಿರ ಬಾಬುರಾವ್‌ದೊಂದು ಅಂಗಡಿ ಇದೆ. ಈ ಬಾಬುರಾವ್‌ನ ಹಣದ ಕರಾಮತ್ತೊ ಏನೋ ಈ ನಾಪತ್ತೆ ಪ್ರಕರಣ ಮಿಂಚಿನ ವೇಗದಲ್ಲಿ ಮೈಸೂರು ಸಿಸಿಬಿಯವರ ಕೈಗೆ ಬಂತು. ಸಿಸಿಬಿಯವರಿಗೆ ಲಂಚ ಕೊಟ್ಟರೆ ರಾಜ್ಯದ ಮುಖ್ಯಮಂತ್ರಿಯನ್ನೇ ಬೇಕಾದರೆ ಎತ್ತಾಕಿಕೊಂಡು ಬಂದು ಚೆಡ್ಡಿ ಬಿಚ್ಚಿ ನಿಲ್ಲಿಸುತ್ತಾರೆ. ಇವರ ಲಂಚಕೋರತನ, ರಾಕ್ಷಸಗುಣ ಅಷ್ಟಿದೆ ಎನ್ನುತ್ತಾರೆ ಜನ. ಅದಿರಲಿ, ಬಾಬುರಾವ್ ಹತ್ತಿರ ಕೊಂಚ ಕಾಸು ಕಿತ್ತ ಸಿಸಿಬಿ ಪೊಲೀಸರು ತನಿಖೆಯಲ್ಲಿ ಏನಾದರೂ ಪ್ರೋಗ್ರೆಸ್ ತೋರಿಸಬೇಕಲ್ಲ, ಹಾಗಾಗಿ ಅಲ್ಲಲ್ಲಿ ವಿಚಾರಿಸಿ ನೋಡಿ ಕೊನೆಗೆ ಈ ಮಹಮದ್ ಗೌಸ್‌ನನ್ನು ಎಳೆ ತಂದಿದ್ದಾರೆ. ಅದೇ ಮಂಡಿ ಮೊಹಲ್ಲಾ ವಾಸಿಗಳಾದ ಚಾಂದ್ ಪಾಶ್-ನಸ್ರತ್ ಭಾನುರ ಮಗನಾದ ಗೌಸ್ ಮನೆಯಲ್ಲೇ **wood crafting** ಕೆಲಸ ಮಾಡಿಕೊಂಡಿದ್ದಾನೆ.

ದೀಪಾಳನ್ನು ಪ್ರೀತಿಸಿದ್ದ ಖಮ್ರಾನ್ ಈ ಗೌಸ್‌ನ ಗೆಳೆಯನೂ ಹೌದು. ಹಾಗಾಗಿ ಗೌಸ್‌ಗೆ ಪರಾರಿಯಾದ ಪ್ರೇಮಿಗಳು ಇರುವ ಜಾಗ ಗೊತ್ತಿರಬಹುದೆಂದು ಯೋಚಿಸಿ ಮಾರ್ಚ್ 20 ರ ಗುರುವಾರ ರಾತ್ರಿ ಸಿಸಿಬಿ ಪೊಲೀಸರು ಹೊರಟಿದ್ದಾರೆ. ಗೌಸ್‌ನ ಮೊಬೈಲ್ 9901256287 ನಂಬರಿಗೆ ಫೋನ್ ಮಾಡಿ 'ಐದು ನಿಮಿಷ ಸ್ಟೇಷನ್ನಿಗೆ ಬಂದು ಹೋಗು' ಅಂದಿದ್ದಾರೆ. 'ಯಾಕೆ' ಅಂತ ಗೌಸ್ ಕೇಳಿದ್ದಕ್ಕೆ ಧಮಕಿ ಹಾಕಿದ್ದಾರೆ. ಕೊನೆಗೆ ತನ್ನ ತಾಯಿ ನಸ್ರತ್ ಜೊತೆ ಗೌಸ್ ಸಿಸಿಬಿಯವರ ಬಳಿ ಹೋದಾಗ ಆಕೆಯನ್ನು ಹೊರಗೇ ಕೂರಿಸಿ ಒಳಗಡೆ ಗೌಸ್‌ನ ವಿಚಾರಣೆ ಶುರು ಮಾಡಿದ್ದಾರೆ.

ಮೈಸೂರಿನ ಪ್ರಖ್ಯಾತ-ಕುಖ್ಯಾತ ಎರಡೂ ಆಗಿರುವ ಇನ್ಸ್‌ಪೆಕ್ಟರ್ ಧರ್ಮೇಶ್ ಕೂಡ ಆಗ ಅಲ್ಲಿದ್ದರು. ಮೈಸೂರಿನ ಅನೇಕ ಸುಸಂಸ್ಕೃತರ, ಸಾಹಿತಿ ಕಲಾವಿದರೊಂದಿಗೆ ಸ್ನೇಹದಿಂದಿರುವ ಧರ್ಮೇಶ್ ಎಷ್ಟು ದಕ್ಷನೋ ಅಷ್ಟೇ ಭ್ರಷ್ಟ ಎಂಬುದು ಅನೇಕರಿಗೆ ಗೊತ್ತಿಲ್ಲ. ಯಾರನ್ನೇ ಆಗಲಿ ವಿಚಾರಣೆ ನಡೆಸುವಾಗ ರಿವಾಲ್ವರ್ ಬಾಯೊಳಗಿಟ್ಟು ಶೂಟ್ ಮಾಡುವುದಾಗಿ ಬೆದರಿಸಿ ಅವರು ಹೆದರಿ ನಡುಗಲು ಶುರು ಮಾಡಬೇಕು. ಅದನ್ನು ನೋಡಿ ಧರ್ಮೇಶ್ ಒಳಗೊಳಗೇ ಖುಷಿ ಪಡಬೇಕು.

ಇದು ಧರ್ಮೇಶ್‌ರ ಮನಸ್ಥಿತಿ!

ಈತನೊಂದಿಗೆ ಕಾನ್ಸ್‌ಟೇಬಲ್‌ಗಳಾದ ಶಶಿಕಾಂತ, ಮಧುಕೇಶ, ಓಂಪ್ರಕಾಶ, ಶಿವಕುಮಾರ, ಅನಿಲ್ ಮುಂತಾದ ಪೊಲೀಸರ ಗುಂಪಿದೆ. ಜನರಿಗೆ ಚಿತ್ರಹಿಂಸೆ ನೀಡಿ ವಿಕೃತ ಆನಂದ ಪಡೆಯುವ ರೋಗಿಷ್ಟರು ಇವರು.


ಗೌಸ್ ವಿಚಾರಣೆ ಮಾಡಿದ್ದೂ ಇದೇ ಪೊಲೀಸರು.

ಪರಾರಿಯಾದ ಪ್ರೇಮಿಗಳೆಲ್ಲಿ ಎಂದು ವಿಚಾರಣೆ ಶುರು ಮಾಡುತ್ತಾ 'ನನಗೇನು ಗೊತ್ತಿಲ್ಲಾ' ಅಂತ ಗೌಸ್ ಉತ್ತರಿಸಿದ ಕಾರಣ ಅವನ ಕೈಕಾಲು ಕಟ್ಟಿಹಾಕಿದ್ದಾರೆ. ನಂತರ ಬೆಲ್ಟ್ ಬಿಚ್ಚಿ ಬೆನ್ನ ಮೇಲೆ ಬಾಸುಂಡೆ ಬರುವಷ್ಟು ಬಾರಿಸಿದ್ದಾರೆ. ಇದರಿಂದ ಗೌಸ್‌ಗೆ ಪ್ರಜ್ಞೆ ತಪ್ಪಿದೆ. ಅವನಿಗೆ ಮತ್ತೆ ಸಂಜೆ ನಾಲ್ಕಕ್ಕೆ ಎಚ್ಚರವಾದಾಗ ಪ್ಯಾಂಟ್ ಬಿಚ್ಚಿಸಿ ತ್ರಿಪಿನ್ ವೈರ್ ತಂದು ನೇರ ಮರ್ಮಾಂಗಕ್ಕೆ ತಾಕಿಸಿ ಕರೆಂಟ್ ಶಾಕ್ ಕೊಟ್ಟಿದ್ದಾರೆ.

ಈ ಹಿಂಸೆ, ಭೀತಿಯಿಂದ ತತ್ತರಿಸಿದ ಗೌಸ್‌ಗೆ ಮತ್ತೆ ಪ್ರಜ್ಞೆ ತಪ್ಪಿದೆ.

ಇದು 21 ನೇ ಶತಮಾನದ ಮೈಸೂರು ಪೊಲೀಸರ ನಡವಳಿಕೆ!

ಕೊನೆಗೆ ರಾತ್ರಿ ಹತ್ತು ಗಂಟೆಯಾದರೂ ಮಗನನ್ನು ಕಳಿಸದ ಕಾರಣ ತಾಯಿ ನಸ್ರತ್ ಅಲ್ಲೇ ಗಲಾಟೆ ಶುರು ಮಾಡಿದಾಗ ಸ್ಥಳೀಯ ಲೀಡರ್ ಜಿಶಾನ್ ಬಂದು ವಿಚಾರಿಸಿದ್ದಾರೆ.



KFD ಪ್ರತಿಭಟನೆ

ಗೌಸ್‌ಗೆ ಬಿಡುಗಡೆ ಸಿಕ್ಕಿದ್ದೇ ಆವಾಗ. ಆದರೆ ಸಿಸಿಬಿ ಸ್ಟೇಷನ್‌ನಿಂದ ಹೊರಬಂದು ನಾಲ್ಕು ಮಾರು ನಡೆಯುವಷ್ಟರಲ್ಲೇ ಗೌಸ್ ಮತ್ತೆ ಪ್ರಜ್ಞೆ ತಪ್ಪಿ ರಸ್ತೆಯಲ್ಲೇ ಬಿದ್ದ.

ಕರ್ನಾಟಕ ಫೋರಂ ಫಾರ್ ಡಿಗ್ನಿಟಿ (KFD) ಕಾರ್ಯಕರ್ತರ ಪ್ರವೇಶವಾಗಿದ್ದೇ ಆಗ.

ಸಾಬರ ಹುಡುಗರಿಗೆ ಹೊಡೆದರೆ ಹೇಳುವವರು ಕೇಳುವವರು ಯಾರೂ ಇರಲ್ಲ ಎಂಬ ಭಾವನೆ ಸಿಸಿಬಿಯವರಿಗಿತ್ತೇನೊ. ಆದರೆ KFD ಹುಡುಗರು ಗುರುವಾರ ರಾತ್ರಿ ಅದನ್ನು ಸುಳ್ಳು ಮಾಡಿ ತೋರಿಸಿಬಿಟ್ಟರು. ರಾತ್ರೋರಾತ್ರಿ ಠಾಣೆಯೆದುರು KFD ಯ ಪ್ರತಿಭಟನೆ ಶುರುವಾಯಿತು. ಕೊನೆಗೆ ಮಾರನೆ ಬೆಳಗ್ಗೆ ಸಿಟಿ ಪೊಲೀಸ್ ಕಮಿಷನರ್ ಖುದ್ದು ಸ್ಥಳಕ್ಕೆ ಬರಬೇಕಾಯಿತು. ಜೊತೆಯಲ್ಲಿ ಮೇಯರ್ ಅಯೂಬ್ ಖಾನ್, ಕಾರ್ಪೊರೇಟರ್ ಸುಹೇಲ್ ಕೂಡಾ ಬಂದರು.

ಸಿಸಿಬಿ ಪೊಲೀಸರ ಕ್ರೌರ್ಯ, ರಾಕ್ಷಸಿತನ ಕಂಡವರೆಲ್ಲಾ ಕ್ಯಾಕರಿಸಿ ಉಗಿದ ಮೇಲೆ ಗೌಸ್‌ಗೆ ಸೂಕ್ತ ಚಿಕಿತ್ಸೆಗೆ ಏರ್ಪಾಡು ಮಾಡಲಾಗಿದೆ.

ಸಿಸಿಬಿ ಕಾನ್ಸಟೇಬಲ್‌ಗಳಾದ ಶಶಿಕಾಂತ, ಮಧುಕೇಶ್, ಓಂಪ್ರಕಾಶ್, ಶಿವಕುಮಾರ ಈಗ ಸಸ್ಪೆಂಡಾಗಿದ್ದಾರೆ.

ಆದರೆ ಇಲ್ಲೂ ಒಂದು ಮೋಸ ನಡೆದಿದೆ. ತನಗೆ ಕರೆಂಟ್ ಶಾಕ್ ನೀಡಿ ಹಿಂಸಿಸಿದವರ್‍ಯಾರೆಂಬುದನ್ನು ಸ್ವತಃ ಗೌಸ್ ಹೇಳಬೇಕಿತ್ತು, ಅದಾಗಬೇಕೆಂದರೆ ಅವತ್ತು ಡ್ಯೂಟಿಯಲ್ಲಿದ್ದ ಸಿಸಿಬಿ ಪೊಲೀಸರನ್ನು ಗೌಸ್ ಎದಿರು ಪರೇಡ್ ಮಾಡಿಸಿ ಆರೋಪಿ ಪೊಲೀಸರನ್ನು ಗುರುತಿಸುವಂತೆ ಕೇಳಬೇಕಿತ್ತು.

ಆದರೆ ಇದ್ಯಾವುದೂ ನಿಯಮಾನುಸಾರ ನಡೆದಿಲ್ಲ. ಅನಿಲ್ ಎಂಬ ಕಾನ್ಸ್‌ಟೇಬಲ್ ಹಿಂಸೆ ಕೊಟ್ಟವರಲ್ಲಿ ಒಬ್ಬನಾಗಿದ್ದರೂ ಅವನು ಸಸ್ಪೆಂಡ್ ಆಗಿಲ್ಲ, ಸ್ವತಃ ಇನ್ಸ್‌ಪೆಕ್ಟರ್ ಧರ್ಮೇಶ್ ಕೂಡಾ ಅಲ್ಲಿದ್ದರು. ಆದರೆ ಇವರಿಬ್ಬರನ್ನು ಬಚಾವ್ ಮಾಡಲಾಗಿದೆ.

ಇಷ್ಟಕ್ಕೂ ಯಾರೋ ಮೆಜಾರಿಟಿಗೆ ಬಂದಿರುವ ಹುಡುಗ-ಹುಡುಗಿ ಪ್ರೀತಿಸಿ ಮದುವೆಯಾಗಲು ಹೋದರೆ ಸಿಸಿಬಿ ಪೊಲೀಸರ್‍ಯಾಕೆ ಮತ್ಯಾರೋ ಅಮಾಯಕರನ್ನು ಎಳೆತಂದು ಹಿಂಸಿಸಬೇಕು. ಕರೆಂಟ್ ಶಾಕ್ [illegible] ಕ್ರೌರ್ಯ ಪ್ರದರ್ಶಿಸಬೇಕು.

ಮೈಸೂರು ಸಿಸಿಬಿ ಪೊಲೀಸರ ಪೊಲೀಸ್‌ಗಿರಿ ಗೂಂಡಾಗಿರಿಗಿಂತಲೂ [illegible]

ಇವರಿಗೆ ಮನುಷ್ಯತ್ವ ಕಲಿಸುವವರ್‍ಯಾರು?

■ ಬಿಳಿವಾಳೆ ಕಾಂತ

# ಮತ್ತೆ ಬಂತು ಏಪ್ರಿಲ್ 14!



ಹೌದು. ಅದೊಂದು ಕಾಲವಿತ್ತು. ಏಪ್ರಿಲ್ 14 ದಲಿತ ಸಂಘಟನೆಗಳ ಸ್ವಾಭಿಮಾನದ ದಿನವಾಗಿತ್ತು. ಕೇರಿಕೇರಿಗಳಲ್ಲಿ ಅಂಬೇಡ್ಕರ್ ಬಗೆಗಿನ ಗೌರವ, ಸ್ವಾಭಿಮಾನವಾಗಿ, ಹೋರಾಟದ ಕಿಚ್ಚಾಗಿ ದಲಿತರ ಹೃದಯಗಳನ್ನು ತಟ್ಟುತ್ತಿತ್ತು. ಅಂದು ತಮ್ಮ ಕೂಲಿಕೆಲಸ ಬಿಟ್ಟು ದಲಿತರು ನಡೆಸುತ್ತಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮಕ್ಕೆ ಹೋಗುತ್ತಿದ್ದರು. ಶತಮಾನಗಳಿಂದ ಶೋಷಕ ವ್ಯವಸ್ಥೆ ಅವರಲ್ಲಿ ಅದುಮಿಟ್ಟ ಅಸಹನೆ, ಆಕ್ರೋಶಗಳನ್ನು ಮೆರವಣಿಗೆಯ ಘೋಷಣೆಗಳಲ್ಲಿ ಹೊರಹಾಕುತ್ತಿದ್ದರು. ಹೋರಾಟದ ಹಾಡುಗಳನ್ನು ಹಾಡುತ್ತಿದ್ದರು. ಅಂಬೇಡ್ಕರರ ಜೀವನ ಮತ್ತು ಹೋರಾಟಗಳನ್ನು ಮೆಲುಕು ಹಾಕುತ್ತಿದ್ದರು. ನಮ್ಮವನೊಬ್ಬ ಇಂತಹ ಮಹಾತ್ಮನಿದ್ದನೆ ಎಂದು ಆಶ್ಚರ್ಯಪಡುತ್ತಿದ್ದರು. ಶೋಷಕರು ತಮ್ಮ ಮೇಲೆ ನಡೆಸುತ್ತಿರುವ ಶೋಷಣೆ, ಅಪಮಾನ, ಹಲ್ಲೆ, ದೌರ್ಜನ್ಯಗಳಿಗೆ ಕಾರಣಗಳೇನು? ಅದಕ್ಕೆ ಅಂಬೇಡ್ಕರ್ ಯಾವ ರೀತಿ ಹೋರಾಟ ಮಾಡಿದರು, ಮುಂದೆ ನಾವೇನು ಮಾಡಬೇಕು ಎಂಬುದನ್ನು ಮನವರಿಕೆ ಮಾಡಿಕೊಳ್ಳುತ್ತಿದ್ದರು.

ಕಳೆದ ಶತಮಾನದ 70ರ ದಶಕದಲ್ಲಿ ಇಂಡಿಯದಾದ್ಯಂತ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಗಾಗಿ ಶೋಷಿತರ ಹೋರಾಟಗಳು ಶುರುವಾದವು. ಇಂತಹ ಕೆಲವು ಹೋರಾಟಗಳು ಅಂಬೇಡ್ಕರರ ಆಲೋಚನೆ ಮತ್ತು ಅವರ ಹೋರಾಟಗಳಿಂದ ಸ್ಫೂರ್ತಿ ಪಡೆದಿದ್ದವು. ಹಿಂದಿ, ತೆಲುಗು, ತಮಿಳು ಭಾಷೆಗಳಿಗೆ ಅಂಬೇಡ್ಕರರ ಬರಹಗಳು ಅನುವಾದವಾದವು. ಕರ್ನಾಟಕದಲ್ಲಿ ದಲಿತ ಹೋರಾಟ ಮೊತ್ತಗಾದ ಮೇಲೆ ಅಂಬೇಡ್ಕರರ ಬರಹಗಳು ಕನ್ನಡಕ್ಕೆ ಬಂದವು. ಜೊತೆಗೆ ವಿವಿಧ ಭಾಷೆಗಳಲ್ಲಿ ಅಂಬೇಡ್ಕರ್ ಕುರಿತ ವೈಚಾರಿಕ ಮತ್ತು ಸೃಜನಾತ್ಮಕ ಸಾಹಿತ್ಯವೂ ಬಂತು.

1990-91ರಲ್ಲಿ ಅಂಬೇಡ್ಕರ್ ಅವರಿಗೆ ಕೇಂದ್ರ ಸರಕಾರ 'ಭಾರತ ರತ್ನ ಪ್ರಶಸ್ತಿ' ಘೋಷಿಸಿ, ಏಪ್ರಿಲ್ 14ನ್ನು ಕೇಂದ್ರ ಸರಕಾರಿ ರಜೆಯನ್ನಾಗಿಯೂ ಘೋಷಿಸಿತು. ಇದರಿಂದ ದಲಿತ ಚಿಂತಕರ ಮತ್ತು ಹೋರಾಟಗಾರರ ಸಂಭ್ರಮ ಸ್ವರ್ಗ ಮುಟ್ಟಿತು. ಅಂಬೇಡ್ಕರರ ವಿಚಾರಗಳನ್ನು ಮತ್ತು ಅವರು ನಡೆಸಿದ ಹೋರಾಟಗಳನ್ನು ಸರಕಾರವೇ ಮುಂದೆ ನಿಂತು ಪರಿಚಯ ಮಾಡಿಸುತ್ತಿರುವಾಗ ನಮಗೇನು ಕೆಲಸ ಎಂದುಕೊಂಡರು. ಅನೇಕ ವಿಶ್ವವಿದ್ಯಾಲಯಗಳಲ್ಲಿ ಅಂಬೇಡ್ಕರ್ ಅಧ್ಯಯನ ಪೀಠ/ಸಂಸ್ಥೆಗಳು ಆರಂಭವಾದವು. ರೋಡು, ಸರ್ಕಲ್, ಕೇರಿ, ಓಣಿ, ಹಾಸ್ಟೆಲ್‌ಗಳಿಗೆ ಅಂಬೇಡ್ಕರ್ ಹೆಸರಿಡಲಾಯಿತು. ಇವೆಲ್ಲವೂ ದಲಿತರಿಗೆ ಭಾವನಾತ್ಮಕವಾಗಿ ಖುಷಿಕೊಟ್ಟವು.

ಆದರೆ ಈ ಕೆಲಸ ಅಂಬೇಡ್ಕರರನ್ನು ದಲಿತರಿಂದ ಮತ್ತು ದಲಿತ ಹೋರಾಟಗಳಿಂದ ಪ್ರತ್ಯೇಕಿಸಿ ದೂರಮಾಡಿತು. ಉದಾಹರಣೆಗೆ, ದಲಿತರು ತಮ್ಮ ಊರುಕೇರಿಗಳಲ್ಲಿ ಮಾಡುವ ಹಬ್ಬಹರಿದಿನಗಳನ್ನು ನೇರವಾಗಿ ಸರಕಾರವೇ ವಹಿಸಿಕೊಂಡು, ಅದನ್ನು ಅವರ ಕೇರಿಯಿಂದ ಪ್ರತ್ಯೇಕಿಸಿ ಮಾಡುತ್ತದೆನ್ನಿ. ಅದಕ್ಕೆ ದಲಿತರನ್ನೂ ಕರೆಯುತ್ತದೆ ಎಂದುಕೊಳ್ಳೋಣ. ಇದು ದಲಿತರಿಗೆ ಮುಜುಗರ, ನಾಚಿಕೆ ಮತ್ತು ಅವಮಾನ ಉಂಟುಮಾಡುವುದಿಲ್ಲವೆ? ಇಂದು ಅಂಬೇಡ್ಕರ್ ಜಯಂತಿಯ ಪರಿಸ್ಥಿತಿ ಕೂಡ ಅದೇ ಆಗಿದೆ. ಅದನ್ನು ಕೇರಿಗಳಿಂದ, ದಲಿತ ಸಂಘಟನೆಗಳಿಂದ ಮತ್ತು ದಲಿತರಿಗೆ ಬೇಕಾಗಿರುವ ವಿಚಾರಗಳಿಂದ ಬೇರ್ಪಡಿಸಿ ಶೋಷಕರ ಕಾರ್ಯಕ್ರಮವನ್ನಾಗಿ ಮಾಡಲಾಗಿದೆ. ಒಂದು ಕಾಲದಲ್ಲಿ ಅಂಬೇಡ್ಕರ್ ಜಯಂತಿ ದಲಿತರನ್ನು ಹೋರಾಟಕ್ಕೆ ಬಡಿದೆಬ್ಬಿಸುತ್ತಿತ್ತು, ಇಂದು ಅದೇ ಅಂಬೇಡ್ಕರ್ ಜಯಂತಿ ದಲಿತರನ್ನು ಹೊಸ ಶೋಷಣೆಗೆ ನಯವಾಗಿ ಹೊಂದಿಸಿಕೊಳ್ಳುವ ಕೆಲಸ ಮಾಡುತ್ತಿದೆ. ಶೋಷಕ ಸರಕಾರ ನಡೆಸುವ ಯಾಂತ್ರಿಕ ಅಂಬೇಡ್ಕರ್ ಜಯಂತಿಗೆ ದಲಿತರು ಬಾಡಿಗೆಯ ಸಭಿಕರಾಗಿ ಹೋಗುತ್ತಿರುವುದು ವಿಷಾದದ ವಿಚಾರ.

ಶೋಷಕ ಸಮಾಜದಲ್ಲಿ ಅಂಬೇಡ್ಕರ್ ಶೋಷಿತರ ಆಶಾಕಿರಣ. ಶೋಷಿತರ ಧ್ವನಿ. ಅವರ ಜೀವನವೇ ಒಂದು ಹೋರಾಟ. ಶೋಷಿತರಿಗೆ, ದಲಿತರಿಗೆ ಹೋರಾಟದ ಪರಂಪರೆ ಬೇಕಾಗಿದೆ. ಅಂಬೇಡ್ಕರ್ ಹೋರಾಟದ ಪರಂಪರೆಯನ್ನು ಆರಂಭಿಸಿದ್ದರು. 70ರ ದಶಕದಲ್ಲಿ ಶುರುವಾದ ದಲಿತ ಹೋರಾಟಗಳು ಆ ಪರಂಪರೆಯನ್ನು ಪ್ರಜ್ಞಾಪೂರ್ವಕವಾಗಿ ಸ್ವೀಕರಿಸಿದ್ದವು. ಆಳುವ ವರ್ಗಕ್ಕೆ ಇದರ ಸೂಕ್ಷ್ಮ ಗೊತ್ತಾಗಿ, ದಲಿತರು ಅಂಬೇಡ್ಕರರ ಹೋರಾಟದ ಪರಂಪರೆಯಿಂದ ಪ್ರಭಾವ ಪಡೆಯದಂತೆ ಮಾಡಿತು. ಕೇಂದ್ರ ಸರಕಾರ 80ರ ದಶಕದಲ್ಲಿ ಹೊಸ ಶೋಷಕ ಆರ್ಥಿಕ ನೀತಿಗಳನ್ನು ಜಾರಿ ಮಾಡಿ ಕೃಷಿಯನ್ನು ಕೈಗಾರಿಕೆಗೆ ಅಧೀನಗೊಳಿಸಿತು. ಪರಿಣಾಮವಾಗಿ ದೇಶದಾದ್ಯಂತ ಮೊದಲ ಹಂತದಲ್ಲಿ ದಲಿತರು ಕೃಷಿ ವಲಯದಲ್ಲಿ ಮೊಟ್ಟಮೊದಲ ಬಾರಿಗೆ ಭಾರೀ ಪ್ರಮಾಣದಲ್ಲಿ ನಿರುದ್ಯೋಗಿಗಳಾದರು.

ಆಳುವ ವರ್ಗ 90ರ ದಶಕದಲ್ಲಿ ನೇರವಾಗಿ ಸಾಮ್ರಾಜ್ಯಶಾಹಿ ಶೋಷಣೆಯ ನೀತಿಗಳನ್ನು ಜಾರಿಗೊಳಿಸಿತು. ಇಡೀ ದೇಶದ ದುಡಿವ ವರ್ಗದ ಜೀವನವನ್ನು ಅಲ್ಲೋಲಕಲ್ಲೋಲ ಮಾಡಿತು. ಜಾಗತೀಕರಣವೇ ಅಭಿವೃದ್ಧಿ ಎಂದಿತು. ಅಂಬೇಡ್ಕರರಿಂದ ರಚನೆಯಾಯಿತೆಂದು ಹೇಳಲಾಗುವ ಸಂವಿಧಾನವನ್ನು ಸಂಪೂರ್ಣ ಗಾಳಿಗೆ ತೂರಿತು. ಇದರ ಪರಿಣಾಮವಾಗಿ ದಲಿತರ ಹಸಿವು ಮತ್ತು ಅಪಮಾನಗಳು ತೀವ್ರಗೊಂಡವು. ದುಡಿವ ವರ್ಗದ ದಲಿತರಲ್ಲಿ ಹತಾಶೆ, ಅಸಹನೆ ಮತ್ತು ಆಕ್ರೋಶಗಳು ಮಡುಗಟ್ಟಿದವು. ಇವನ್ನು ಹೊಟ್ಟೆತುಂಬಿದ ದಲಿತರ ಮೂಲಕ ಶಮನಗೊಳಿಸುವ ಹುನ್ನಾರವಾಗಿ ಅದೇ 90ರ ದಶಕದಲ್ಲಿ ಅಂಬೇಡ್ಕರರಿಗೆ 'ಭಾರತ ರತ್ನ' ಪ್ರಶಸ್ತಿ ಘೋಷಿಸಿತು. ಕಳೆದ 15 ವರುಷಗಳಿಂದ ಕೃಷಿ ವಲಯವನ್ನು ಒಳಗೊಂಡಂತೆ ಉಳಿದೆಲ್ಲ ಕ್ಷೇತ್ರಗಳಲ್ಲಿ ನಿರುದ್ಯೋಗ ಸೃಷ್ಟಿಯಾಗಿದ್ದು, ಇದು ಇಡೀ ಸಮಾಜವನ್ನು ಆವರಿಸಿಕೊಂಡಿದೆ. ದಲಿತರು ಕೂಲಿಗಾಗಿ, ತುತ್ತು ಅನ್ನಕ್ಕಾಗಿ ವಲಸೆ ಹೋಗುತ್ತಿದ್ದಾರೆ ಇಲ್ಲವೆ ಅಸಹಾಯಕರಾಗಿ ನಲುಗಿ ಹೋಗಿದ್ದಾರೆ. ದಲಿತ ಹೋರಾಟಗಳಿಗೆ ಸರಕಾರಗಳೇ ಉಚಿತವಾಗಿ ನಿದ್ದೆ ಮಾತ್ರೆ (ಗುಳಿಗೆ) ಕೊಟ್ಟಿವೆ. ಅವೆಲ್ಲ ಈಗ ಜೋಂಪು ನಿದ್ದೆಯಲ್ಲಿ ಹೊಟ್ಟೆ ತುಂಬಿದವರ ಬಗ್ಗೆ ಮತ್ತು ಹೊಟ್ಟೆ ತುಂಬಿದ ದಲಿತರ ಬಗ್ಗೆ ಚಿಂತಿಸುತ್ತಿವೆ. ಬಡವರಿಗೆ ಪಡಿತರ ಚೀಟಿಗಳನ್ನು ನ್ಯಾಯವಾಗಿ ಕೊಡದ ಸರಕಾರ 'ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ' ಯೋಜನೆಯನ್ನು ಜಾರಿಗೊಳಿಸಿತು. ಈಗ 'ಪರೀಕ್ಷೆಗಳಲ್ಲಿ 60 ಅಂಕಗಳನ್ನು ತೆಗೆಯದಿದ್ದರೆ ವಿದ್ಯಾರ್ಥಿ ವೇತನ ನಿಷಿದ್ಧ' ಎಂಬ ಕಾನೂನಿನ ನೆಪದಲ್ಲಿ ದಲಿತರನ್ನು ಶಿಕ್ಷಣದಿಂದ ಹೊರಗಿಡುವ ತಂತ್ರ ಹೂಡಿದೆ. ಸಾಮಾಜಿಕ ನ್ಯಾಯದ ಹೆಸರೇಳಿಕೊಂಡೇ ಮೀಸಲಾತಿಯನ್ನು ಸರ್ವನಾಶ ಮಾಡುತ್ತಿದೆ. ಮೀಸಲಾತಿಯ ಅಗತ್ಯವನ್ನು ಒತ್ತಿ ಹೇಳಿರುವ ಸಂವಿಧಾನದ ತತ್ವವನ್ನು ಸಮಾಧಿ ಮಾಡಿದೆ. ಜೊತೆಯಲ್ಲೆ ಅಂಬೇಡ್ಕರರನ್ನು 'ಸಂವಿಧಾನ ಶಿಲ್ಪಿ' ಎಂದು ಕೊಂಡಾಡುತ್ತಿದೆ. ಶೋಷಿತರ ಬದುಕು ದಿವಾಳಿಯೆದ್ದು ಹೋಗಿರುವಾಗ ಇದು ಗೊತ್ತಿದ್ದೂ ಗೊತ್ತಿಲ್ಲದಂತೆ ನಟಿಸಿ, ಹೊಟ್ಟೆ ತುಂಬಿದ ದಲಿತರ ಶಹಬ್ಬಾಸ್‌ಗಿರಿ ಪಡೆಯಲು ಕೆಲವು ದಲಿತೇತರ ಚಿಂತಕರು ದಲಿತರನ್ನು ದಾರಿ ತಪ್ಪಿಸುವಂತಹ ಸರಕಾರಿ ನೀತಿಗಳನ್ನು ಬೆಂಬಲಿಸುತ್ತಿದ್ದಾರೆ. ಈ ದಲ್ಲಾಳಿತನ ದಲಿತ ಹೋರಾಟವನ್ನು ನಯವಾಗಿ ಕೊಲ್ಲುತ್ತಿದೆ.

ದಲಿತರಲ್ಲಿ ಹೊಟ್ಟೆ ತುಂಬಿದವರು ಮತ್ತು ಹೊಟ್ಟೆ ತುಂಬದವರು ಎಂಬ ಎರಡು ವರ್ಗಗಳು ನಿರ್ಮಾಣವಾಗಿವೆ. ಹೊಟ್ಟೆ ತುಂಬಿದ ದಲಿತರ ಮೂಲಕ ಆಳುವ ವರ್ಗಗಳು ಅಂಬೇಡ್ಕರ್ ತೋರಿಸಿದ ದಾರಿಯನ್ನು ನಯವಾಗಿ ತಿರುಚುತ್ತಿವೆ. ಹೊಟ್ಟೆ ತುಂಬಿದ ದಲಿತರು ಆಳುವ ವರ್ಗದ ಹಿತಾಸಕ್ತಿಗೆ ಅನುಗುಣವಾಗಿ ಅಂಬೇಡ್ಕರರನ್ನು ವಿವರಿಸುತ್ತಿದ್ದಾರೆ. ಅಂಬೇಡ್ಕರರನ್ನು ಕೇರಿಗಳ ಸಂಕಟಗಳಿಂದ ಬೇರ್ಪಡಿಸಿ ಶೋಷಕರ ಪರ

# ಒಂದು ಪತ್ರ

ಮಾನ್ಯರೇ,


ಸೀತಾರಾಂ ಕೇಸರಿ ನಂತರ ಕಾಂಗ್ರೆಸ್ ಅಧ್ಯಕ್ಷೆಯಾಗಿ ಸೋನಿಯಾರನ್ನು ತಂದು ಕೂರಿಸಿದಾಗ ಈ ಕಾಂಗ್ರೆಸ್ಸಿಗರ ತಲೆಯಲ್ಲಿ ಇರೋದಾದ್ರೂ ಏನು? ಎಂದು ಎಷ್ಟೋ ಮಂದಿ ಬೈದುಕೊಂಡಿದ್ದರು. ಯಾಕೆಂದರೆ, ಪ್ರತಿಸ್ಪರ್ಧಿ ಪಕ್ಷಗಳಲ್ಲಿ ವರ್ಚಸ್ಸುಳ್ಳ, ಘಟಾನುಘಟಿ ನಾಯಕರು ಇರುವಾಗ, ಇನ್ನೇನು ಮುಳುಗುವ ಸ್ಥಿತಿ ತಲುಪಿರುವ ಕಾಂಗ್ರೆಸ್ಸಿನಲ್ಲಿ ಅನೇಕ ಹಿರಿಯ ನಾಯಕರುಗಳು ಇದ್ದೂ ಕೂಡ ಸರಿಯಾಗಿ ಹಿಂದಿ ಭಾಷೆ ಮಾತನಾಡಲು ಬಾರದ, ಆಕರ್ಷಕ ವರ್ಚಸ್ಸು ಇರದ, ವಿರೋಧಿಗಳಿಂದ ವಿದೇಶಿ ಹಾಗೂ ಅನ್ಯಧರ್ಮೀಯಳು ಎಂಬ ಹಣೆಪಟ್ಟಿ ಕಟ್ಟಿಕೊಂಡ ಸೋನಿಯಾರನ್ನು ತಂದು ಕೂರಿಸಿ ಕಾಂಗ್ರೆಸ್ಸಿನ ವಿರೋಧಿಗಳಿಗೆ ಟೀಕಿಸಲು ಹೊಸ ಅಸ್ತ್ರವನ್ನೇ ಕೊಟ್ಟಂತಾಗಿತ್ತು. ಆದರೆ ಇಂತಹ ಟೀಕಾಕಾರರನ್ನು ತನ್ನ ನಡವಳಿಕೆ ಹಾಗೂ ಕಾರ್ಯವೈಖರಿಯಿಂದ ಸೋನಿಯಾ ಗಾಂಧಿ ಬಾಯ್ಮುಚ್ಚಿಸಿ ಬಿಟ್ಟಿದ್ದಾರೆ. ಎದುರಾದ ವಿರೋಧಗಳು, ಅವಮಾನಗಳನ್ನೆಲ್ಲ ಮೆಟ್ಟಿನಿಂತ ಸೋನಿಯಾ ಅಪ್ಪಟ ಭಾರತೀಯ ನಾರಿಯ ಪ್ರತಿನಿಧಿಯಂತೆ ಕಾಣಿಸುತ್ತಿರುವುದಂತೂ ಸತ್ಯ.

ಬದುಕಿನಲ್ಲಿ ಸವಾಲುಗಳನ್ನು, ಅವಮಾನಗಳನ್ನು ಎದುರಿಸುವುದು ಭಾರತೀಯ ನಾರಿಯರಿಗೆ ಪುರಾಣ ಕಾಲದಿಂದಲೇ ಬಂದ ಬಳುವಳಿ. ಸ್ತ್ರೀಗೆ ದೇವತೆಯ ಸ್ಥಾನವನ್ನು ಕೊಟ್ಟು ಗೌರವಿಸುವವರ ನಾಡೆಂದು ಹೇಳಿಕೊಳ್ಳುವವರೆ ಈ ದೇಶದ ಒಬ್ಬ ಪ್ರಧಾನಿಯ ಸೊಸೆ ಹಾಗೂ ಒಬ್ಬ ಪ್ರಧಾನಿಯ ಪತ್ನಿಯೂ ಆಗಿರುವುದರ ಜೊತೆಗೆ ಮುಖ್ಯವಾಗಿ ಓರ್ವ ಮಹಿಳಾ ನಾಯಕಿಯೂ ಆಗಿರುವ ಸೋನಿಯಾರನ್ನು "ಇಟಲಿಯ ನಾಯಿ"ಯೆಂಬುದರಿಂದ ಹಿಡಿದು "ಗಂಡಸತ್ತ ಅಮಂಗಳೆ" (ಈ ಮಾತನ್ನ ಆದರ್ಶದ ಪಾಠ ಹೇಳುವ ನಟಭಯಂಕರ ಶ್ರೀನಾಥನೂ ಕೂಡ ಉದುರಿಸುತ್ತಿದ್ದ) ಎನ್ನುವ ತನಕ ಸಾರ್ವಜನಿಕವಾಗಿ ಹಳಿದು ಅವಮಾನಿಸಲಾಗುತ್ತಿತ್ತು. ಧರ್ಮ, ಸಂಸ್ಕೃತಿಯನ್ನು ಗುತ್ತಿಗೆ ಹಿಡಿದವರಂತೆ ಮಾತನಾಡುವ ಪಕ್ಷದವರೇ ಈ ಟೀಕಾಕಾರರಲ್ಲಿ ಪ್ರಮುಖರು. ಕಾಂಗ್ರೆಸ್ಸಿನ ಮೇಲಿನ ಕೋಪವನ್ನ ಸೋನಿಯಾರ ಮೇಲೆ ಕಾರಿಕೊಳ್ಳುತ್ತಿದ್ದರು.

ಸೋನಿಯಾ ಪ್ರಧಾನಿ ಸ್ಥಾನಕ್ಕೆ ಅಭ್ಯರ್ಥಿಯಾಗಿ ಬಿಂಬಿತವಾದಾಗ ತಾನೋರ್ವ ಗೌರಮ್ಮನ ಅಪರಾವತಾರ ಎಂಬಂತೆ ವರ್ತಿಸುತ್ತಿದ್ದ ಸುಷ್ಮಾ ಸ್ವರಾಜ್ ತೀರಾ ಹೇಸಿಗೆ ಹುಟ್ಟಿಸುವ ರೀತಿಯ ಶಪಥವನ್ನು ಕೈಗೊಂಡು ಬಳಿಕ ಅದನ್ನು ಪೂರೈಸಬೇಕಾದಂತಹ ಪರಿಸ್ಥಿತಿ ಉಂಟಾದಾಗ ಇಂಗು ತಿಂದ ಹೆಣ್ಣು ಮಂಗನಂತೆ ಪೇಚಾಟ ನಡೆಸಿತ್ತು, ಅದೇರೀತಿ ಉಡುಪಿಯ ಅರಳುಮರಳು ಸ್ವಾಮಿಯೊಬ್ಬ ಈ ವಿದೇಶಿ ಮಹಿಳೆ ಪ್ರಧಾನಿಯಾದರೆ ತಾನು ದೇಶ ಬಿಟ್ಟು ಓಡುವೆ ಎಂದು ಹೇಳಿ ಎಲ್ಲರಿಂದ ಉಗಿಸಿಕೊಂಡಿದ್ದ.

ಅನೇಕ ದೇಶಗಳಲ್ಲಿ ಭಾರತೀಯರು ಉನ್ನತ ಸ್ಥಾನ ಗಿಟ್ಟಿಸಿಕೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಅನವಶ್ಯಕವಾಗಿ ಅನ್ಯ ಧರ್ಮೀಯ ಹಾಗೂ ವಿದೇಶಿಯರಾದ ಸೋನಿಯಾ ಮೂಲವನ್ನು ಆಕೆ ಮಹಾ ಅಪರಾಧದ ಹಿನ್ನೆಲೆಯುಳ್ಳ ಏನೇನೋ ಎಂಬಂತೆ ಎತ್ತಿ ಆಡಿ ಸೋನಿಯಾರನ್ನು ಕಂಡಕಂಡಲ್ಲಿ ಬಿಜೆಪಿ ಅವಮಾನಿಸತೊಡಗಿತು. ಈ ಪ್ರಕ್ರಿಯೆ ಎಷ್ಟೊಂದು ಹೀನ ಮಟ್ಟಕ್ಕಿಳಿದಿತ್ತೆಂದರೆ ಬೇರೆ ಯಾರಾದರೂ ಆಗಿದ್ದರೆ ಒಂದೋ ಅದೇ ಧಾಟಿಯ ತಿರುಗೇಟನ್ನು ನೀಡುತ್ತಿದ್ದರು, ಇಲ್ಲಾ ಇವರ ಸಹವಾಸವೇ ಸಾಕೆಂದು ಓಡಿಹೋಗುತ್ತಿದ್ದರು. ಆದರೆ ಸೋನಿಯಾ ಇದನ್ನೆಲ್ಲ ಸಹಿಸಿಕೊಂಡು ತನ್ನ ಜವಾಬ್ದಾರಿ ಕಾರ್ಯವನ್ನ ಯಶಸ್ವಿಯಾಗಿ ನಿರ್ವಹಿಸಿದ್ದು ವಿರೋಧಿಗಳ ಒದರಾಟಕ್ಕೆ ಕಡಿವಾಣ ಹಾಕಿತು.

## ಸೋನಿಯಾ ಎಂಬ ಅಪ್ಪಟ ಭಾರತನಾರಿ



ಸಹಪಾಠಿಯನ್ನು ಪ್ರೀತಿಸಿ ಮದುವೆಯಾಗಿ ತನ್ನ ಪತಿಯ ದೇಶಕ್ಕೆ ಬಂದದ್ದು ಸೋನಿಯಾರ ತಪ್ಪೇ? ವಾಸ್ತವವಾಗಿ ರಾಜೀವರೊಂದಿಗೆ ಸಾಂಸಾರಿಕ ಸಂಬಂಧ ಬಿಟ್ಟರೆ ಸೋನಿಯಾರಿಗೆ ರಾಜಕೀಯವೆಂದರೆ ಗಾವುದ ದೂರ. ಈ ಕಾರಣ ದೇಶದ ಪೌರತ್ವವನ್ನೂ ಕೂಡ ಸೋನಿಯಾ ಕೆಲವರ್ಷಗಳ ಕಾಲ ಪಡೆದಿರಲಿಲ್ಲ. ಬಳಿಕ ಅತ್ತೆ ಹಾಗೂ ಪ್ರೀತಿಯ ಪತಿಯ ಭೀಕರ ಹತ್ಯೆಯ ನಂತರ ಇನ್ಯಾವ ರೀತಿ ರಾಜಕೀಯದಲ್ಲಿ ಆಕೆಗೆ ಆಸಕ್ತಿ ಹುಟ್ಟೀತು? ಅಂತೂ ಏನೂ ಆಗದಿರಲು ಬಯಸಿದ ಸೋನಿಯಾರಿಗೆ ಕೆಲ ಅನಿವಾರ್ಯ ಕಾರಣಗಳು ಹಲವು ಜವಾಬ್ದಾರಿಗಳನ್ನು ಒತ್ತಾಯಪೂರ್ವಕವಾಗಿ ತಂದುಕೊಟ್ಟವು. ಯಾವ ಅನುಭವಗಳೂ ಇರದ ಸೋನಿಯಾ ಅವುಗಳನ್ನು ತೃಪ್ತಿಕರವಾಗಿ ನಿರ್ವಹಿಸಿದ್ದರು ಕೂಡ.

ವಿಶ್ವದ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೊಂದರ ಪ್ರಧಾನಿಯಾಗಲು ರಾಷ್ಟ್ರಪತಿಯಿಂದ ಆಹ್ವಾನ ಬಂದಾಗ ದೇಶದ ಜನತೆ ಇನ್ನೇನು ಸೋನಿಯಾ ಪ್ರಧಾನಿಯಾದರು ಎಂದು ಭಾವಿಸುತ್ತಿರುವಾಗಲೇ ಅದನ್ನು ತಿರಸ್ಕರಿಸಿ ಮನಮೋಹನಸಿಂಗ್‌ರಿಗೆ ಅವಕಾಶ ಮಾಡಿಕೊಟ್ಟದ್ದು ಸೋನಿಯಾರ

ತ್ತು ವಹಿಸುವ ಸಂಕೇತವನ್ನಾಗಿ ಮಾಡಿದ್ದಾರೆ. ೀಡ್ಕರರ ಆಲೋಚನೆಯ ಮತ್ತು ಹೋರಾಟದ ಮುಖ್ಯಭಾಗ ಏನಿತ್ತೊ ಅದನ್ನು ಸಂಪೂರ್ಣ ನಿರ್ಲಕ್ಷಿಸಲಾಗಿದೆ. ಅಂಬೇಡ್ಕರರು ಭೂಮಿ ಮತ್ತು ಸಂಪತ್ತನ್ನು ಕುರಿತು ತಾಳಿದ್ದ ನಿಲುವನ್ನು ಯಾವ ದಲಿತ ...ಕರೂ, ದಲಿತ ಹೋರಾಟಗಳೂ ಪ್ರಸ್ತಾಪ ಮಾಡು... ಅಂಬೇಡ್ಕರ್ ತಮ್ಮ ಜೀವನದುದ್ದಕ್ಕೂ ಮಾಡಿದ ...ರಾಟ ಒಂದು ಭಾಗವಾದರೆ; ಅವರು ಮಾಡಿದ ...ನೆಗಳು ಮತ್ತೊಂದು ಭಾಗ. ಜಾತಿ, ಅಸ್ಪೃಶ್ಯತೆ, ...ರ್ಮ, ಲಿಂಗ, ಸಮುದಾಯ, ಅಲ್ಪಸಂಖ್ಯಾತರು, ...ಕತೆ, ರಾಜಕೀಯ, ಸಮಾಜ, ಭಾಷೆ, ಸಾಹಿತ್ಯ ...ತಿ ಇನ್ನೂ ಮುಂತಾದ ವಿಷಯಗಳಲ್ಲಿ ಅಂಬೇಡ್ಕರ್ ...ರುವ ಅಧ್ಯಯನಗಳು ಇಂದಿಗೂ ಪ್ರಸ್ತುತ. ಆದರೆ ...ರನ್ನು ದಲಿತರ ಚಿಂತಕ ಎಂದು ಸೀಮಿತ ...ಡಿರುವುದು ಅವರಿಗೆ ಮಾಡಿರುವ ಅವಮಾನವೇ

...ಊಳಿಗಮಾನ್ಯ ಶೋಷಣೆಯನ್ನು ಕಾಪಾಡುವ ...ಲ್ಲೇ ರಾಮರಾಜ್ಯದ ಕನಸು ಕಂಡ ಎಂ. ಕೆ. ಗಾಂಧಿ, ...ಮ್ಯುನಿಸಮ್‌ನ ವಿರುದ್ಧ ಬಂಡವಾಳಶಾಹಿ ಸಮಾಜ ...ವದ ಕನಸು ಕಂಡ ನೆಹರು - ಇವರ ನಡುವೆ ...ಬೇಡ್ಕರ್ ಈ ದೇಶದ ಅಪಮಾನಿತರ ಹಾಗೂ ...ೋಷಿತರ ವಿಮೋಚನೆಯನ್ನು ಕುರಿತು ಆಲೋಚಿಸಿದ್ದು ...ಮು ಕ್ರಾಂತಿಕಾರಿ ಹೆಜ್ಜೆ. ಇಡೀ ದೇಶದ ಭೂಮಿ ...ತ್ತು ಸಂಪತ್ತನ್ನು ರಾಷ್ಟ್ರೀಕರಣ ಮಾಡಬೇಕು ಎಂಬುದು ...ಬೇಡ್ಕರರ ಮುಖ್ಯ ಗುರಿಯಾಗಿತ್ತು. ಆ ಮೂಲಕ ...ರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ...ೋಗಲಾಡಿಸಬಹುದು ಎಂಬುದು ಅವರ ...ವಾಗಿತ್ತು. ಆದರೆ ಇದಕ್ಕೆ ತದ್ವಿರುದ್ಧವಾಗಿ ಇಡೀ ...ಶದ ಭೂಮಿ ಮತ್ತು ಸಂಪತ್ತನ್ನು ವಿದೇಶಿ ...ಟಿಕೋರರಿಗೆ ತೆರೆದಿಡಲಾಗಿದೆ. ಇದರಿಂದ ಆಳುವ ...ರ್ಗಗಳು ಮತ್ತು ಹೊಟ್ಟೆ ತುಂಬಿದ ದಲಿತರು ಒಟ್ಟಾಗಿ ...ಬೇಡ್ಕರರ ಆಲೋಚನೆ ಮತ್ತು ಹೋರಾಟಗಳನ್ನು ...ರಿ ತಪ್ಪಿಸಿದ್ದಾರೆ. ಭೂಮಾಲಿಕರು ಮತ್ತು ವಿದೇಶಿ ...ಟಿಕೋರರು ಒಟ್ಟಾಗಿ ತಮ್ಮ ಮೇಲೆ ನಡೆಸುತ್ತಿರುವ ...ೋಷಣೆಯ ವಿರುದ್ಧ ಹೋರಾಡಲು ಹೊಟ್ಟೆ ನಿರ್ಗತಿಕ ...ಲಿತರು ಅಂಬೇಡ್ಕರರನ್ನು ಸ್ಫೂರ್ತಿಯಾಗಿ ಸ್ವೀಕರಿಸ ...ಬೇಕಿದೆ. ಆಳುವ ವರ್ಗದ ಪರವಾಗಿರುವ ಹೊಟ್ಟೆ ...ತುಂಬಿದ ದಲಿತರ ಬಗ್ಗೆ ವಿಶೇಷ ಎಚ್ಚರಿಕೆ ವಹಿಸಬೇಕಿದೆ. ...ತು ದಲಿತರು ನಿಜವಾಗಿಯೂ ಅಂಬೇಡ್ಕರರನ್ನು ...ರವಿಸುವ ರೀತಿ.

■ ಡಾ. ಬಿ.ಎಂ. ಪುಟ್ಟಯ್ಯ

...ಮಹತ್ವದ ತೀರ್ಮಾನಗಳಲ್ಲೊಂದು.
...ಪ್ಪ-ಮಕ್ಕಳು ತನಗೆ ಹತ್ತು ದಿನವೂ ಅಧಿಕಾರ
...ಡೆಸಲು ಬಿಡರು ಎಂದು ತಿಳಿದೂ ಕೂಡ
...ಷ್ಟು ದಿನ ರಾಜ್ಯದ
...ಮುಖ್ಯಮಂತ್ರಿಯಾಗೋಣವೆಂದು ಕೂತ
...ಡಿಯೂರಪ್ಪನಂತವರಿಗಿದ್ದ ಅಧಿಕಾರದ
...ವ್ಯಾಮೋಹ? ಸಹ ಪಿ ಸೋನಿಯಾರಿಗೆ ಇರಲಿಲ್ಲವೇ?
...ೋನಿಯಾ ಕೆಲದಿನಗಳಾದರೂ ಪ್ರಧಾನಿಯಾಗಿ
...ಧಿಕಾರ ನಡೆಸಿ ಅವರ ಟೀಕಾಕಾರರಿಗೆ ತಕ್ಕ
...ತ್ತರ ನೀಡಬೇಕಿತ್ತೆಂಬುದು ಹಲವರ
...ಬಯಕೆಯಾಗಿತ್ತು. ಅಲ್ಲದೇ ಸೋನಿಯಾ
...ಪ್ರಧಾನಿಯಾದಾಗ ಅವರ ವಿರೋಧಿಗಳು
...ವಿದೇಶಿ ಮೂಲ ಕೆದಕಿ ಹುಯಿಲೆಬ್ಬಿಸಿ ಪುನಃ
...ವರನ್ನ ಕೆಳಗಿಳಿಸಿದರೆ ಮರಳಿ ಸಿಂಪತಿಯ
...ಲಾಭ ಸಿಗುವುದು ಸೋನಿಯಾರಿಗೆ ಎಂಬುದು
... ವಿಮರ್ಶಕರ ಅಭಿಮತವಾಗಿತ್ತು.

ಕಳೆದ ವರ್ಷ ಬಂದ 2 ರೂ. ನಾಣ್ಯದಲ್ಲಿ
...ಮುದ್ರಿತವಾದ ಪ್ಲಸ್ ಮಾರ್ಕನ್ನು
...ಶಿಲುಬೆಯೆಂದು ತಪ್ಪಾಗಿ ಅರ್ಥೈಸಿಕೊಂಡ
...ಅನೇಕ ಕಾಮಾಲೆ ಕಣ್ಣುಗಳು ಪತ್ರಿಕೆಗಳ
...ಅಂಕಣಗಳ ಅಂಕಣದಲ್ಲಿ ಇದು ಕ್ರಿಶ್ಚಿಯನ್
...ಸೋನಿಯಾ ನಡೆಸುತ್ತಿರುವ ಯುಪಿಎ ಸರಕಾರದ
...ಹುನ್ನಾರವೆಂದರು. ಅದೇನೋ ಹೇಳುತ್ತಾರಲ್ಲ
...ಬಿದ್ದ ಗಂಡಸಿಗೆ.....

ಇಷ್ಟೆಲ್ಲಾ ಇದ್ದರೂ ಸೋನಿಯಾರದ್ದು ಮಾತ್ರ
...ನಿಷ್ಪ ಭಾವ. ವಿಶ್ವದ ಬಲಾಢ್ಯ ಮಹಿಳೆಯರಲ್ಲಿ
...ಸೋನಿಯಾರ ಹೆಸರು ಇದೆಯಂತೆ. ಬಲಾಢ್ಯತೆ
...ಇದ್ಕೆ, ಯಾವ ಬಗ್ಗೆಯದ್ದೊ ಗೊತ್ತಿಲ್ಲ, ಆದರೆ
...ಮಾನಸಿಕ ಬಲಾಢ್ಯತೆ ವಿಷಯಕ್ಕೆ ಬಂದರೆ
...ಸೋನಿಯಾರ ಬದುಕಿನ ಬಗ್ಗೆ ತಿಳಿದವರು
...ಅವರಿಗೆ ಓಟು ಹಾಕುವುದಂತೂ ಖಂಡಿತ.

■ ರವಿ ಹುತ್ತೂರ (ದ.ಕ.)

# ತೀರ್ಥೋದ್ಭವ ಒಂದು ಕಟ್ಟು ಕತೆ



ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಡಾ. ಸಿ.ಎಸ್. ದ್ವಾರಕಾನಾಥ್ ಕೊಡಗಿಗೆ ಭೇಟಿ ನೀಡಿದ್ದರ ಉದ್ದೇಶ; ಸರ್ಕಾರಿ ಸವಲತ್ತಿನಿಂದ ಮತ್ತು ಸಾಮಾಜಿಕ ಬದುಕಿನಿಂದ ವಂಚಿತರಾಗಿ ನಿಕೃಷ್ಟವಾಗಿ ಬದುಕುತ್ತಿರುವ ಹಿಂದುಳಿದ "ಹಿಂದೂ" ಜಾತಿಗಳ ದುಸ್ಥಿತಿಯನ್ನು ಅರಿತುಕೊಳ್ಳಲು. ಧಾರ್ಮಿಕ ಕ್ಷೇತ್ರ ತಲಕಾವೇರಿಯ ಪುನರ್‌ನವೀಕರಣ ಕಾರ್ಯವೀಕ್ಷಣೆ ಇವರ ಕಾರ್ಯವ್ಯಾಪ್ತಿಗೆ ಹೊರತಾದ ವಿಚಾರವಾಗಿತ್ತು.

ತಲಕಾವೇರಿಗೆ ಬಂದ ಡಾ. ಸಿ.ಎಸ್. ದ್ವಾರಕಾನಾಥ್‌ರವರು ಕಾವೇರಿ ತೀರ್ಥ ಸ್ವೀಕರಿಸಲಿಲ್ಲವೆಂಬ ಕಾರಣಕ್ಕಾಗಿ ಇಲ್ಲಿನ ಸ್ವಯಂಘೋಷಿತ ಹಿಂದೂ ನಾಯಕರಾದ ಸಂಘಪರಿವಾರದವರು, ಇವರಿಗೆ ಮಡಿಕೇರಿಯಲ್ಲಿ ವಿದೇಶಿ ಕೋಕೋಕೋಲಾ ಬಾಟ್ಲಿಯಲ್ಲಿದ್ದ ಕಾವೇರಿ ನೀರ (ತೀರ್ಥ)ನ್ನು ಬಲಾತ್ಕಾರವಾಗಿ ಕುಡಿಸಿ ನಾಮ ಹಚ್ಚಿ ತಮ್ಮ ಅಧಾರ್ಮಿಕ ವಿಕೃತಿಯನ್ನು ಮೆರೆದಿದ್ದರು.


ಬಿಜೆಪಿ, ಸಂಘಪರಿವಾರದ ಕೀಳು ವರ್ತನೆಯನ್ನು ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ಮಾಜಿ ಸಚಿವ ಎಂ.ಸಿ. ನಾಣಯ್ಯ ಮುಂತಾದ ನಾಯಕರು, ಪ್ರಜ್ಞಾವಂತರು, ಸಾಹಿತಿಗಳು, ಬುದ್ಧಿಜೀವಿಗಳು ಬಲವಾಗಿ ಖಂಡಿಸಿದ್ದರು.

ಇವರ ಅಮಾನವೀಯ ಕೃತ್ಯವನ್ನು ಪ್ರತಿಭಟಿಸಲು ರಾಜ್ಯದ ವಿವಿಧೆಡೆಯಿಂದ ಹಿಂದುಳಿದ ಜಾತಿಗಳ ಒಕ್ಕೂಟಗಳ ಪ್ರಗತಿಪರ ಸಂಘಟನೆಗಳು ಮಾರ್ಚ್ 24 ರಂದು ಮಡಿಕೇರಿಯ ಗಾಂಧಿ ಮಂಟಪ ಮೈದಾನಕ್ಕೆ ನದಿಗಳಾಗಿ ಹರಿದುಬಂದವು. ಹಿಂಸೆಯಲ್ಲಿ ನಂಬಿಕೆ ಇಲ್ಲದ, ಅಹಿಂಸೆಯಲ್ಲಿ ನಂಬಿಕೆ ಇರುವಂಥ ಈ ಜನಶಕ್ತಿಯ ಹೋರಾಟಕ್ಕೆ ಗಾಂಧಿ ಮಂಟಪದ 'ಗಾಂಧೀಜಿ' ಕೂಡ ಒತ್ತಾಸೆಯ ಧ್ವನಿಯಾಗಿ ಅವರೊಂದಿಗೆ ನಿಂತುಕೊಂಡಂತಿತ್ತು! ಏಕೆಂದರೆ, ಸಂಘಪರಿವಾರದವರ ಭಜರಂಗದಳದಿಂದ ಉಚ್ಚಾಟಿತನಾಗಿ ಅದೇ ಗುಣಧರ್ಮದ 'ಶ್ರೀರಾಮಸೇನೆ' ಎಂಬ ಹೆಸರಿನಲ್ಲಿ ರೌಡಿಪಡೆ ಕಟ್ಟಿದ ನಾಥುರಾಂ ಗೋಡ್ಸೆ ಸಂತತಿಯ ಪ್ರಮೋದ್ ಮುತಾಲಿಕ್, ಗಾಂಧೀಜಿಯವರನ್ನು ರಾಷ್ಟ್ರದ್ರೋಹಿ ಎಂದು ಕರೆದಿದ್ದರು. ತಮ್ಮ ಕಾರ್ಯಕ್ರಮಗಳಿಗೆ, ಪ್ರತಿಭಟನೆಗಳಿಗೆ ಗಾಂಧೀಜಿಯನ್ನು ಬಳಸಿಕೊಳ್ಳುವ ಬಿಜೆಪಿ ಸಂಘಪರಿವಾರದವರು ಪ್ರಮೋದ್ ಮುತಾಲಿಕ್ ಬಗ್ಗೆ ಮೌನ ವಹಿಸಿದ್ದು ಏನನ್ನು ಸೂಚಿಸುತ್ತದೆ?

ಗಾಂಧಿ ಮಂಟಪ ಬಳಿ ನೆರೆದ ಗಣ್ಯರು ಮೌನ ಹೊಡೆದು ದಶದಿಕ್ಕುಗಳಿಗೂ ತಲುಪುವಂತೆ ಅರ್ಥಪೂರ್ಣವಾಗಿ ಮಾತಾಡಿದರು. ಡಾ. ಸಿ.ಎಸ್. ದ್ವಾರಕಾನಾಥ್ ವಿರುದ್ಧ ಬಿಜೆಪಿ ಮಾಜಿ ಶಾಸಕ ಕೆ.ಜಿ. ಬೋಪಯ್ಯನ ನೇತೃತ್ವದಲ್ಲಿ ನಡೆಸಲಾದ ದೌರ್ಜನ್ಯವನ್ನು ಹಾಗೂ ಈ ಸಂದರ್ಭದಲ್ಲಿ ಪ್ರತ್ಯಕ್ಷದರ್ಶಿಗಳಾಗಿದ್ದ ಪೊಲೀಸರ ನಿಷ್ಕ್ರಿಯತೆಯನ್ನು ಖಂಡಿಸಿ; ಧಾರವಾಡ ರೇವಣ್ಣ ಸಿದ್ದೇಶ್ವರ ಮಠದ ಪೀಠಾಧ್ಯಕ್ಷರಾದ ಬಸವರಾಜ ದೇವರು, ಸಮತಾ ಸೈನಿಕದಳದ ಅಧ್ಯಕ್ಷ ಎಂ. ವೆಂಕಟಸ್ವಾಮಿ, ಸಾಹಿತಿ ಹೆಚ್.ಎಲ್. ಕೇಶವಮೂರ್ತಿ, ರಾಜಕೀಯ ಧುರೀಣ ಎ.ಕೆ. ಸುಬ್ಬಯ್ಯ ಅಹಿಂದ ಮುಖಂಡ ಟಿ.ಪಿ. ರಮೇಶ್, ಸಿಪಿಎಂನ ದುರ್ಗಾಪ್ರಸಾದ್, ಬಿಎಸ್‌ಪಿಯ ಕುಂಞ ಅಬ್ದುಲ್ಲಾ, ಕೆಎಫ್‌ಡಿ ಮುಖಂಡ ಮಜೀದ್ ಖಾನ್, ಜಿ.ಪಂ. ಮಾಜಿ ಅಧ್ಯಕ್ಷೆ ಜಯಮ್ಮ, ಸಾಹಿತಿ ಹಾಗೂ ವಕೀಲರಾದ ಕೆ.ಆರ್.ವಿದ್ಯಾಧರ, ಸಿ.ಪಿ.ಐ.(ಎಂ.ಎಲ್.)ನ ಡಿ.ಎಸ್.ನಿರ್ವಾಣಪ್ಪ ಮಾನವ ಮಂಟಪದ ಉಗ್ರನರಸಿಂಹ ಗೌಡ, ಡಿಎಸ್‌ಎಸ್‌ನ ಜಯಪ್ಪ ಹಾನಗಲ್, ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಕೆ.ಎಲ್. ಅಶೋಕ್, ಪರಿಸರ ಹೋರಾಟಗಾರ ಪೂರ್ಣಾನಂದ ಮುಂತಾದವರು ಮಾತಾಡಿದರು.

ಈ ಸಂದರ್ಭದಲ್ಲಿ ಬಹಳಷ್ಟು ಗಣ್ಯರು ಎ.ಕೆ. ಸುಬ್ಬಯ್ಯನವರು ನುಡಿದ "ನಮಗೆ ಬೇಕಿರುವುದು ದೇವರಾಜ ಅರಸ್ ಮಾದರಿಯ ಸರ್ಕಾರವೇ ಹೊರತು ನರೇಂದ್ರ ಮೋದಿ ಮಾದರಿಯ ಸರ್ಕಾರವಲ್ಲ" ಎಂಬ ಮಾತನ್ನು ಮಂತ್ರದಂತೆ ಪುನರುಚ್ಛರಿಸಿದರು. ರಾಜಕೀಯ ಕ್ಷೇತ್ರದಲ್ಲಿ ಎಂ.ಸಿ. ನಾಣಯ್ಯನವರಂತೆ ಎ.ಕೆ. ಸುಬ್ಬಯ್ಯನವರದ್ದು ಪ್ರತ್ಯೇಕ ಛಾಪು ಇರುವಂಥ ವ್ಯಕ್ತಿತ್ವ. ಖ್ಯಾತ ವಕೀಲರಾಗಿ ಶೋಷಿತರ, ಅಲ್ಪಸಂಖ್ಯಾತರ ಧ್ವನಿಯಾಗಿ, ಸಾಮಾಜಿಕ ಚಿಂತಕರಾಗಿ ತಮ್ಮ ನೇರ ನಡೆ-ನುಡಿಗಳಿಂದ ನಾಡಿನ ಪ್ರಜ್ಞಾವಂತರ ಹಾಗೂ ರಾಜಕೀಯ ತಜ್ಞರ ಗಮನ ಸೆಳೆದವರಾಗಿದ್ದಾರೆ.

ಇಂತಹ ಎ.ಕೆ. ಸುಬ್ಬಯ್ಯ ಪ್ರತಿಭಟನಾ ಸಭೆಯಲ್ಲಿ "ನಾವೆಲ್ಲ ಹಿಂದೂಗಳು ಆದರೆ ಹಿಂದೂತ್ವವಾದಿಗಳಲ್ಲ, ಗೋಡ್ಸೆಯ ಹಿಂದೂತ್ವವಾದವು ಗಾಂಧೀಜಿಯನ್ನು ಬಲಿ ತೆಗೆದುಕೊಂಡಿತು. ಗಾಂಧೀಜಿ ಅಪ್ಪಟ ಹಿಂದೂ ಎನಿಸಿದ್ದರು. ಉಗ್ರ ಹಿಂದೂತ್ವ, ನರೇಂದ್ರ ಮೋದಿಯ ಕಟ್ಟರ್ ಹಿಂದೂ ನಾಯಕತ್ವ ಕರ್ನಾಟಕದೊಳಗೆ ಕಾಲಿಡದಂತೆ ತಡೆಯಬೇಕಿದೆ. ಗೋಪೂಜೆ ಮಾಡಲು ನಿರಾಕರಿಸಿದ ಬಸವರಾಜ ದೇವರ ಮೇಲೆ ಹಲ್ಲೆ ನಡೆಸಿದಂಥ ಸಂಘಪರಿವಾರದ ಚಿಂತನೆಗಳು ದ್ವಾರಕಾನಾಥ್‌ರವರ ಮೇಲೂ ದಾಳಿ ಮಾಡಿವೆ; ದಬ್ಬಾಳಿಕೆ, ದೌರ್ಜನ್ಯ ನಡೆಸಿದೆ. ಇಂಥ ಹಿಂದೂತ್ವವಾದಿಗಳು ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಎಲ್ಲರ ಬದುಕು, ಭವಿಷ್ಯ ನರಕವಾಗಬಲ್ಲದು. ಕೊಡಗಿನ ಗೌಡರು ಹಾಗೂ ಕೊಡವರು ಬಿಜೆಪಿಯ ಸಂಘಪರಿವಾರದ ಹಿಡಿತದಿಂದ ಹೊರಬರಬೇಕಿದೆ. ತಲಕಾವೇರಿಯಲ್ಲಿ ತೀರ್ಥೋದ್ಭವವಾಗುತ್ತದೆನ್ನುವುದು ಪುರೋಹಿತಶಾಹಿ ಹೆಣೆದ ಕಟ್ಟುಕಥೆಯಾಗಿದೆ. ಹಾಗೆ ಶಬರಿ ಮಲೆಯಲ್ಲಿ ಕಾಣಿಸುವ ಮಕರ ಜ್ಯೋತಿ ಕೂಡ ಮನುಷ್ಯ ಸೃಷ್ಟಿಯಾಗಿದೆಯೇ ವಿನಃ ದೈವಿಕ ಸೃಷ್ಟಿಯಲ್ಲ, ಈ ಕುರಿತು ಚರ್ಚೆ, ಸಂಶೋಧನೆಯಾಗಲಿ" ಎಂದರು.



ನಂತರ ಜಿಲ್ಲೆಯ ಹಾಗೂ ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಸಾವಿರಾರು ಜನರು ಬ್ಯಾನರ್ ಹಿಡಿದು ಘೋಷಣೆ ಕೂಗುತ್ತಾ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿದರು. ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಡಾ. ಸಿ.ಎಸ್. ದ್ವಾರಕಾನಾಥ್‌ರವರಿಗೆ ಬಲಾತ್ಕಾರವಾಗಿ ತೀರ್ಥ ಕುಡಿಸಿದವರ ವಿರುದ್ಧ ಮೊಕದ್ದಮೆ ಹೂಡಿ ಕಠಿಣ ಕ್ರಮ ಜರುಗಿಸುವಂತೆ ಒತ್ತಾಯಿಸಿದ ಮನವಿ ಪತ್ರವನ್ನು ಜಿಲ್ಲಾಧಿಕಾರಿ ನಿರಂಜನ್‌ರವರಿಗೆ ನೀಡಿದರು.

ಈ ಸಂದರ್ಭದಲ್ಲಿ ಹಿಂದುಳಿದ ವರ್ಗದ ಜಾತಿಗಳಾದ ಬಲಿಜ, ಕುರುಬ, ಕಾಡುಗೊಲ್ಲ, ಹೆಳವರ, ಹಡಪದ, ಪಿಂಜಾರ ಇನ್ನು ಮುಂತಾದ ಜಾತಿಗೆ ಸೇರಿದ ಮುಖಂಡರು ತಮ್ಮ ಸಮಾಜದ ಬದುಕು, ನೋವು, ಸಂಕಟ, ಅತಂತ್ರ ಸ್ಥಿತಿ, ಶೋಷಣೆ, ಸರ್ಕಾರದ ನಿರ್ಲಕ್ಷ್ಯ ದುಃಖ ದುಮ್ಮಾನದ ವಿವಿಧ ಮಜಲುಗಳನ್ನು ಬಿಚ್ಚಿಟ್ಟರು.

ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಕೊಡಗು ಪ್ರಗತಿಪರ ಚಿಂತಕ ವೇದಿಕೆ, ದಸಂಸನ ವಿವಿಧ ಬಣಗಳು, ಸಮತಾ ಸೈನಿಕದಳ, ರಾಜ್ಯರೈತ ಸಂಘ, ಕರ್ನಾಟಕ ಜನಪರ ವೇದಿಕೆ, ಹಿಂದುಳಿದ ಜಾತಿಗಳ ಒಕ್ಕೂಟ, ಮುಸ್ಲಿಂ ಹಾಗೂ ಕ್ರೈಸ್ತ ಸಂಘಟನೆಯ ಮುಖಂಡರು ಇವರೆಲ್ಲ ಮಾಜಿ ಶಾಸಕ ಕೆ.ಜಿ. ಬೋಪಯ್ಯ ಮತ್ತು ಸಂಘಪರಿವಾರದವರ ಅಧಾರ್ಮಿಕ ದೌರ್ಜನ್ಯವನ್ನು, ಪೊಲೀಸರ ನಿಷ್ಕ್ರಿಯತೆಯನ್ನು ಪ್ರಶ್ನಿಸಿ ಮಾತಾಡಿದರು.

ಕೊಡಗು ಜಿಲ್ಲೆ ಪ್ರಗತಿಪರ ಚಿಂತಕರ ವೇದಿಕೆಯ ಅಲ್ಲಾರಂಡ ವಿಠಲ ನಂಜಪ್ಪ, ಕುಂಞ ಅಬ್ದುಲ್ಲ, ಕೆ.ಆರ್.ವಿದ್ಯಾಧರ ಹಾಗೂ ಇತರ ಜನಪರ ಸಂಘಟನೆಗಳು ಈ ಪ್ರತಿಭಟನಾ ಸಮಾವೇಶವನ್ನು ಯಶಸ್ವಿಯಾಗಿ ಸಂಘಟಿಸಿದ್ದರು.

ಪುರೋಹಿತಶಾಹಿ ವರ್ಗಕ್ಕೆ, ತಲಕಾವೇರಿಯ ಕುಂಡಿಕೆಯ ನೀರು ಮಾತ್ರ ಪವಿತ್ರ ತೀರ್ಥವಾಗಿದೆ. ಆದರೆ ನದಿಯಾಗಿ ಹರಿಯುವ ಕಾವೇರಿ ನೀರು ಶೂದ್ರಾದಿ ವರ್ಗದವರಿಗೆ, ನೀರನ್ನು ಬಳಸುವ ಎಲ್ಲರಿಗೂ ತಕ್ಷಣಕ್ಕೆ ತಾನೇ ಪವಿತ್ರವಾಗಿರುವಂತದ್ದು, ಗಾಳಿ-ನೀರು-ಆಹಾರ (ಮಾಂಸಾಹಾರ ಸಸ್ಯಾಹಾರ) ಕೂಡ ಪವಿತ್ರ ಜೀವನಾವಶ್ಯಕ ಸ್ಥಾನ ಪಡೆದಿರುವಂತದ್ದು. ಇಂತಹ ಸಂಗತಿಗಳನ್ನು ಅರಿತುಕೊಳ್ಳುವಂಥ ಸಜ್ಜನಿಕೆಯಂತೂ ಬರೀ ಬೌದ್ಧಿಕದಾರಿದ್ರ್ಯ ಹೊಂದಿರುವ ಸಂಘಪರಿವಾರದವರಿಗೆ ಇಲ್ಲ.

ಶೋಚನೀಯ ಸ್ಥಿತಿಯಲ್ಲಿರುವ ಕಾಪಾಳರ ಜನಸಂಖ್ಯೆ ಕೊಡಗಿನಲ್ಲಿ 200 ದಾಟಿರಲಿಕ್ಕಿಲ್ಲ, ಇವರ ಮೂಲಭೂತ ಸಮಸ್ಯೆಗಳಿಗೆ ಸಿ.ಎಸ್. ದ್ವಾರಕಾನಾಥ್‌ರವರು ಸ್ಪಂದಿಸಿದ್ದಾರೆ. ಇಂಥದ್ದೇ ಸ್ಥಿತಿಯಲ್ಲಿ ಕೆಂಬಟ್ಟಿ ಹರಿಜನರು, ಮೇದ, ಮಲೆಯ, ಪಂಜರಿ ಎರವ, ಮಡಿವಾಳ ಮುಂತಾದ ಸಣ್ಣ ಜಾತಿಗಳ ಜನರು ಕೊಡಗಿನಲ್ಲಿದ್ದಾರೆ, ಇಂಥವರ ನೆರವಿಗೆ ದ್ವಾರಕಾನಾಥ್ ಮುಂದಾಗಿದ್ದಾರೆ.

ಆದರೆ ಆರೆಸ್ಸೆಸ್ ಚಿಂತನೆಯಲ್ಲಿ ನೊಂದವರಿಗೆ ನೆರವಾಗುವಂಥ ಕಾರ್ಯಕ್ರಮಗಳಿಲ್ಲ, ಮೇಲ್ಜಾತಿಯ ಹಿತರಕ್ಷಣೆ ಮತ್ತು ಬ್ರಾಹ್ಮಣ್ಯದ ವಿಸ್ತರಣೆ ಇದರ ಪ್ರಣಾಳಿಕೆಯಾಗಿದೆ. ಆಯೋಗದ ಅಧ್ಯಕ್ಷರಾದ ಡಾ.ಸಿ. ಎಸ್. ದ್ವಾರಕಾನಾಥ್‌ರವರು ಕಾಪಾಳರಂಥ ನೊಂದವರ ಲೋಕದಲ್ಲಿ ಬೆಳಕು ಮೂಡಿಸಲು ನಿಂತದ್ದು ಸಂಘಪರಿವಾರದ ಚಿಂತನೆಗೆ ತದ್ವಿರುದ್ಧವಾಗಿರುವಂತದ್ದು. 'ತೀರ್ಥ'ದ ನೆಪಹಿಡಿದು ದ್ವಾರಕಾನಾಥ್‌ರವರ ಮೇಲೆ ಬಿಜೆಪಿ ಪಟಾಲಂ ದೌರ್ಜನ್ಯ ಎಸಗಿದಂತಿದೆ.

ಹಿಂಸೆ, ಅಸಹನೆ, ಜನಾಂಗೀಯ ದ್ವೇಷದಲ್ಲಿ ಅಪಾರ ನಂಬಿಕೆ ಇರುವ ಆರೆಸ್ಸೆಸ್ 'ಚಿಂತನಾಗಂಗೆ'ಯ ನೂರಾರು ಜನವಿರೋಧಿ ಕವಲುಗಳಲ್ಲಿ ಬಿಜೆಪಿ ಪಕ್ಷವು ಒಂದಾಗಿದೆ. ತಾವೇ ಸೃಷ್ಟಿಸಿದ ಕಾರ್ಗಿಲ್ ಯುದ್ಧ ಅಮಾಯಕ ಸೈನಿಕರ ಸಾವು ಈ ಮೂಲಕ ಪಡೆದ ಗೆಲುವಿನಿಂದ ಬಿಜೆಪಿ ದೇಶದ ಚುಕ್ಕಾಣಿ ಹಿಡಿಯಿತು. ಇಂಥದ್ದೇ ಹಿಟ್ಲರ್ ಹಾದಿಯಲ್ಲಿ ಸಾಗಿದ ನರೇಂದ್ರ ಮೋದಿ ಅಲ್ಪಸಂಖ್ಯಾತರ ನರಮೇಧ ನಡೆಸಿ ಎರಡನೇ ಬಾರಿಗೆ ಗುಜರಾತಿನ ಮುಖ್ಯಮಂತ್ರಿಯಾದ.

ಯಾವುದೇ ರೀತಿಯ ಅಭಿವೃದ್ಧಿ ಚಿಂತನೆ ಇಲ್ಲದ, ಜನಪರ ಕಾರ್ಯಕ್ರಮವಿಲ್ಲದ, ರೈತರ ಒಳಿತನ್ನು ನಿರ್ಲಕ್ಷಿಸುವ ಸಂಘಪರಿವಾರಕ್ಕೆ ಪ್ರಜಾಪ್ರಭುತ್ವದ ಮೌಲ್ಯದಲ್ಲಿ ನಂಬಿಕೆ ಇಲ್ಲ. ಕೇವಲ ಜನಾಂಗೀಯ ದ್ವೇಷ, ಕೋಮು ಗಲಭೆ, ಮತಾಂತರ ನಿಷೇಧ, ಗೋಹತ್ಯೆ ನಿಷೇಧ, ಸಂವಿಧಾನ ಪರಾಮರ್ಶೆ, ದೇವಸ್ಥಾನಗಳ ಉದ್ಧಾರ, ಚರ್ಚ್, ಮಸೀದಿಯ ಧ್ವಂಸ, ಜನಸಾಮಾನ್ಯರ ನಿರ್ಲಕ್ಷ್ಯ ಇಂಥವುಗಳು ಸಂಘ ಪರಿವಾರದ ಮೂಲಭೂತ ಉದ್ದೇಶಗಳಾಗಿವೆ. ಶೂದ್ರ ಸಮುದಾಯದ ಒಕ್ಕಲಿಗ, ಲಿಂಗಾಯತ, ಕೊಡವರನ್ನು ಬಳಸಿಕೊಂಡು ದಲಿತ ಹಾಗೂ ಹಿಂದುಳಿದ ಜಾತಿಗಳನ್ನು ಅಧಿಕಾರ ಪರಿಧಿಯಿಂದ ದೂರ ತಳ್ಳುವ ಕ್ರಿಯೆಯನ್ನು ವ್ಯವಸ್ಥಿತವಾಗಿ ಜಾರಿಗೆ ತರುತ್ತಿದ್ದಾರೆ. ಅದಕ್ಕೆ ತಾಜಾ ಉದಾಹರಣೆ, ಕುರುಬ ಸಮಾಜದ ರೇವಣ್ಣ ಸಿದ್ದೇಶ್ವರ ಮಠದ ಪೀಠಾಧ್ಯಕ್ಷ ಬಸವರಾಜ ದೇವರು ಹಾಗೂ ಡಾ.ಸಿ.ಎಸ್ ದ್ವಾರಕಾನಾಥ್ ಮೇಲೆ 'ಆರೆಸ್ಸೆಸ್ ಸಿದ್ಧಾಂತ' ನಡೆಸಿದ ಅಮಾನವೀಯ ಹಲ್ಲೆ.

'ಗುಜರಾತ್ ಮಾದರಿ' ಎಂದು ಕನವರಿಸುತ್ತಿರುವ ಕರ್ನಾಟಕದ ಬಿಜೆಪಿ ನಾಯಕರು ಇಲ್ಲಿನ ಕರಾವಳಿ ಪ್ರದೇಶ ಹಾಗೂ ಕೊಡಗು ಜಿಲ್ಲೆಯನ್ನು 'ಸಾವಿನ ಪ್ರಯೋಗ ಶಾಲೆ'ಯನ್ನಾಗಿ ಮಾಡಿ ನರೇಂದ್ರ ಮೋದಿಯಂತೆ ರಾಜ್ಯದ ಚುಕ್ಕಾಣಿ ಹಿಡಿಯುವ ಹುನ್ನಾರದಲ್ಲಿದ್ದಾರೆ. ಇದನ್ನು ತಡೆಯಲು 'ಬಸವಣ್ಣಮಾದರಿ'ಯನ್ನು ಮುಂದಿಟ್ಟು, ಭಾರತದ ಸಂವಿಧಾನವನ್ನು ಗೌರವಿಸುವ, ಜನತಾಂತ್ರಿಕ ವ್ಯವಸ್ಥೆಯಲ್ಲಿ ನಂಬಿಕೆ ಇರುವಂಥ ಪಕ್ಷಗಳು, ಎಡಪಂಥೀಯ ಶಕ್ತಿಗಳು ಕೋಮುವಾದಿ ಪಕ್ಷದ ವಿರುದ್ಧ ನಿಲ್ಲಬೇಕಿದೆ. ನಿಲ್ಲದೆ ನಿರಂತರವಾಗಿ ನಡೆಯಬೇಕಿದೆ ಕರ್ನಾಟಕವಾದ್ಯಂತ..

ಬುದ್ಧ ಒಂದೆಡೆ ಹೇಳಿದಂತೆ "ಧರ್ಮದ ಕೇಂದ್ರ ದೇವರಲ್ಲ, ಮನುಷ್ಯ." ಇಂತಹ ವಿವೇಕ ನಮ್ಮೊಳಗೆ ಜನಪ್ರತಿನಿಧಿಗಳ ಒಡಲಾಳದಲ್ಲಿ ಜೀವನದಾಯಿ 'ತೀರ್ಥ'ವಾಗಿ ತುಂಬಿಕೊಳ್ಳಬೇಕಿದೆ. ಸಮೃದ್ಧಗೊಳ್ಳಬೇಕಿದೆ

■ ಶಿಮುರಾ

# ರಾಜೀವಗಾಂಧಿ ಹುಡುಗ ಪರವಾಗಿಲವೇನ್ಲ ಉಗ್ರಿ

ರಾಹುಲ್ ಗಾಂಧಿ ಕರ್ನಾಟಕವನ್ನು ನೋಡಿ ಹೋಗಲು ಬಂದಿರುವ ಸುದ್ದಿ ಕಾಳಮಾವನಿಗೂ ತಿಳಿಯಿತು. ಯಾವುದೋ ತಬ್ಬಲಿ ಮಗುವಿನ ವೃತ್ತಾಂತ ಕೇಳುವಂತಹ ಕುತೂಹಲದಿಂದ,

"ರಾಜೀವಗಾಂಧಿ ಮಗನಿಗೆ ವಯಿಸೆಟ್ಟ ಉಗ್ರಿ?" ಎಂದ.

"ಆಗ್ಲೆ ಮದಿವಿಗೆ ಬಂದವುನೆ ಕಣೊ ಮಾವ" ಎಂದು ಜುಮ್ಮಿ ಮಧ್ಯೆ ಬಾಯಿ ಹಾಕಿದಳು.

## ಬಂಡಲು ಸೀಮೆಯ ಕಟ್ಟೆಪುರಾಣ

■ ಬಿ. ಚಂದ್ರೇಗೌಡ

"ಅಂಗರಿನ್ನ ಮದಿವಾಗಿಲ್ಲ ಅನ್ನು?"

"ಆಗಿಲವೇನಪ್ಪ, ಆಗಿದ್ದನೇನ್ಲಾ ಉಗ್ರಿ?" ಎಂದಳು.

"ಇನ್ನು ಇಲ್ಲ ಕಣೆ. ಅವುನು ಮದಿವಾದ್ರೆ ಗೊತ್ತಾಯ್ತಿರಲಿಲ್ವೆ? ಅವುನ್ಯಾರೊ ಗಣೇಸ ಅನ್ನೊ ಸಿನುಮ ಆಗುಟ್ರು ಮದುವೆನೆ ಮಾರಾಜನ ಮಗನ ಮದುವೆ ತರ ಬರದಿರೊ ಪೇಪರ್‌ನೋರು ಇನ್ನೇನಾರ ರಾಹುಲಗಾಂಧಿ ಮದಿವಾದ್ರೆ ಬುಟ್ಟರೇ? ವಾರಗಟ್ಲೆ ಬರಿತರೆ."

"ಅವುರಪ್ಪ ಸತ್ತಾಗ ಸಣ್ಣುಡಗಲವೆ ಅವುನು?"

"ಊ ಸಣ್ಣುಡುಗ, ಹೈಯಿಸ್ಕೂಲಿಗೋಯ್ತಿದ್ದ. ಅವುರಜ್ಜಿ ಸತ್ತಾಗ ಪ್ರೈಮರಿ ಓತ್ತಿದ್ದ."

"ಧೈರ್ಯವಂತ ಬುಡ್ರ" ಎಂದಳು ಜುಮ್ಮಿ.

"ಅದ್ಯಂಗೊತ್ತಾಯ್ತು ನಿನಿಗೆ?"

"ಅವುರಜ್ಜಿಯ ವಡುದು ಸಾಯಿಸಿದ್ರು. ಅವುರಪ್ಪನ್ನ ಬಾಂಬಾಕಿ ಸಾಯಿಸಿದ್ರು. ಅದನ್ಯಲ್ಲ ಕಣ್ಣಲಿ ನೋಡಿ ಹಿಂಗೆ ಬಂದದಲ್ಲಾ ಆ ಹುಡುಗ, ಅದ ನೋಡಿದ್ರೆ ಗೊತ್ತಾಗದಿಲವೇನ್ಲ ಧೈರ್ಯವಂತ ಅಂತ?"

"ಓ, ಆ ಲೆಕ್ಕಚಾರ ಮಾಡಿದೆ ನೀನು. ದೇಸ ಆಳಿದೋರ ಮನೆ ಹುಡಗಲವೇನೆ, ಧೈರ್ಯ ಹುಟ್ಟತಲೆ ಬಂದಿರತದೆ."

"ಅವುನಂಥೋರು ಕಾಂಗ್ರೆಸ್ಸಿಗೆ ಬಂದ್ರೆ ಈ ಕರಗೆ, ಪರಗೆ, ಧ್ರಂಸಿಂಗನಂಥೋರ್ಯಲ್ಲ ಕ್ವಟಗೆ ಸೇರಿಕತ್ತರತ್ತಗೆ" ಎಂದ ಸೀರ.

"ಸೇರ್‍ಲಿ ಸುಮ್ಮನಿರು, ಅವ ನೋಡಿದ್ರೆ ಯಾವನಾರ ಓಟಾಕ್ತನೇನಯ್ಯ?" ಎಂದ ಉಗ್ರಿ.

"ರಾಜೀವಗಾಂಧಿ ಮಗಳಿಗೇನು ರಾಜಕೀಯದ ಇದಿಲ್ವೊ?" ಎಂದ ಕಾಳಮಾವ.

"ಅವುಳಿಗೇನು ಅಂಥಾ ಇದಿದ್ದಂಗೆ ಕಾಣ್ತಾಯಿಲ್ಲವಪ್ಪ, ತಮ್ಮನಿಗೆ ಭಾಳ ಸಪೋರ್ಟ್ ಮಾಡ್ತ ಅವುಳೆ."


"ಅವುಳು ಬಂದಿದ್ರೆ ಚನಾಗಿತ್ತು ಕಂಡ್ರ" ಎಂದಳು ಜುಮ್ಮಿ.

"ಸೋನಿಯಾ ಗಾಂಧಿ ಬಂದಿರದ್ಕೆ ಬಿಜೆಪಿಗಳು ಆಟೊಂತರ ಕೂಗಾಡಿದ್ರು. ಇನ್ನು ಪ್ರಿಯಾಂಕ ಬಂದಿದ್ರೆ ಬಾಯಿಬಾಯಿ ಬಡಕಳರೇನವ್ವ?"

"ಅವುಳು ಬಂದುಬುಟದ್ರೆ ಬಿಜೆಪಿಗಳು ಹಡಿಗೋಗರು ಕಂಡ್ರ" ಎಂದ ಸೀರ.

"ಇಂದ್ರಿಗಾಂಧಿ ಯಂಗಿಟ್ಟಿದ್ಲು ಅವುರ್‍ನ, ಅವುಳಿರೋವರಿಗೂ ಬಾಲ ಅಡಿಕಾಯ್ಕಂಡು ಮನಿಗಿದ್ರು" ಎಂದ ಕಾಳಮಾವ.

"ಈಗ್ಲು ಅವ್ವ, ಮಕ್ಕಳು, ಹ್ವಂಡ್ತಿ ಅವುರೆದ್ರಿಗೆ



ಇವುರೇನು ಮಾಡಿಕಳಕ್ಯಾಗದಿಲ್ಲ" ಎಂದ ಸೀರ.

"ರಾವುಲಗಾಂಧಿ ಪರವಾಗಿಲವೇನ್ಲ?" ಎಂದಳು ಜುಮ್ಮಿ.

"ಪರವಾಗಿಲ್ಲ ಕಣೆ. ತೂಕವಾಗಿ ಮಾತಾಡ್ತನೆ. ಯಾರ ಬಗ್ಗೆನೂ ಅಸಡ್ಡಲಿ ಮಾತಾಡದಿಲ್ಲ, ಹೇಳೊ ಮಾತ ಕೇಳಿಸಿಗತ್ತನೆ. ನಮ್ಮ ಭೈರೇಗೌಡನ ಮಗಂತೂ ಅವುನ ಜ್ವತೆಲೇ ಇದ್ದನಂತೆ."

"ಕಾಡಗೆರೆ ಭೈರೇಗೌಡನ ಮಗನೆ?" ಎಂದ ಕಾಳಮಾವ.

"ಏ, ಕಾಡಗ್ಯರೆ ಭೈರೇಗೌಡನ ಮಗ ಕುಡಕಂಡು ತಿರಗ್ತನೆ. ಅವುನು ರಾವುಲಗಾಂಧಿ ಅತ್ತಕೋಗಕ್ಯಾದತೇ ಮಾವ? ಅವುನಲ್ಲ, ಕೃಷಿ ಮಂತ್ರಿ ಭೈರೇಗೌಡಿದ್ನಲ್ಲ, ಅವುನ ಮಗ ಕೃಷ್ಣ ಭೈರೇಗೌಡ ಅಂತ ಅವುನೆ. ವಳ್ಳೆ ವಿದ್ಯಾವಂತ, ತೂಕವಾಗಿ ಮಾತಾಡ್ತನೆ. ಅವುನ ಮಾತು ನಡವಳಿಕೆ ನೋಡಿ ರಾವುಲಗಾಂಧಿ ಅತ್ತಕೆ ಬುಟಗಂಡಿದ್ದನಂತೆ. ಈಗವುನೆಯಂತೆ ರಾವುಲಗಾಂಧಿಯ ಕರಕಂಡು ತಿರುಗ್ತಯಿರೋನು" ಎಂದ ಉಗ್ರಿ.

"ನಾನು ಹಳ್ಳಿಗೋಗಿ ಬಡುವುರ ಮನೆಲಿ ಮನಗಿದ್ದ ನೋಡಿ ರಾವುಲಗಾಂಧಿನೂ ಸುರು ಮಾಡ್ಯವುನೆ ಅಂತ ಕುಮಾರಸ್ವಾಮಿ ಅಂದಿದ್ದನಂತೆ?" ಎಂದಳು ಜುಮ್ಮಿ. ಆಗ ಬಾಗಿಲಲ್ಲಿ ಸೋಡಾ ಬಾಟ್ಲಿ ಸದ್ದಿನ ನಗು ಕೇಳಿಸಿತು.

"ಯಾರ್‍ಲ ಅಂಗೆ ನಗಾಡಿದೋನು?" ಎಂದಳು ಜುಮ್ಮಿ. ಕೂಡಲೇ ಕಾಣಿಸಿಕೊಂಡ ವಾಟಿಸ್ಸೆ,

"ರಿಯಲಿ ವಳ್ಳೆ ಜೋಕೇಳಿದೆ ಕಣಕ್ಕ" ಎಂದ.

"ಏನೇಳಿದೆ ನಾನು?"

"ರಾವುಲ ಗಾಂಧಿಗೆ ಕುಮಾರಸ್ವಾಮಿನೆ ಮಾಡ್ಲು ಅಂದಲ್ಲ, ಅದು."

"ನಾನಂದಿದ್ದಲ್ಲ, ಯಾರೊ ಅಂಗಂದವುರೆ ಕಂಡ್ರ."

# ತಲಕಾವೇರಿ ತೀರ್ಥೋದ್ಭವ ಸುಳ್ಳು!

ಸುಳ್ಳು ಸುಳ್ಳು

ತಲಕಾವೇರಿಯಲ್ಲಿ ತೀರ್ಥೋದ್ಭವ ಸುಳ್ಳು

ಶಬರಿಮಲೈನಲ್ಲಿ ಮಕರ ವೆಳಕ್ಕು ಸುಳ್ಳು!

ಹಾಗಾದರೆ ಇವೆಲ್ಲ ಏನು?

ಮುಗ್ಧರಿಗೆ ಹಾಕಿರುವ ಮೋಡಿ!

ಇವೆಲ್ಲ ಸಿಡಿದದ್ದು ಎ.ಕೆ. ಸುಬ್ಬಯ್ಯ ಅವರಿಂದ. ಮಡಕೇರಿಯಲ್ಲಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್ ಅವರಿಗೆ ಬಲವಂತವಾಗಿ ತೀರ್ಥ ಎಂಬ ದ್ರಾವಕ ಕುಡಿಸಿ, ಹಣೆಗೆ ಕುಂಕುಮ ಬಳಿದ ಪಾನಮತ್ತ ದುರಹಂಕಾರಿಗಳ ವಿರುದ್ಧ ಪ್ರಜ್ಞಾವಂತರ ಪ್ರತಿಭಟನಾ ಸಭೆಯಲ್ಲಿ.


ಇದರಲ್ಲಿ ಹೊಸದು ಏನೂ ಇರಲಿಲ್ಲ. ಸುಮಾರು ಅರ್ಧ ಶತಕಗಳ ಹಿಂದೆಯೇ ಕೇರಳದ ವಿಚಾರವಾದಿಗಳ ಸಂಘ ಶಬರಿಮಲೈನಲ್ಲಿ 'ವೆಳಕ್ಕು' ಕಾಣಿಸಲು ದೈವಕಾರಣ ಯಾವುದೂ ಇರಲಿಲ್ಲ. ವಂಚಕರು ದೂರದ ಬೆಟ್ಟದಲ್ಲಿ ಕೂಡಿ ಹಾಕಿದ್ದ ಕರ್ಪೂರದ ಗುಡ್ಡೆಗೆ ಬೆಂಕಿ ಹಚ್ಚಿ ಕಾಣಿಸಿಕೊಂಡಿದ್ದ 'ಕರ್ಪೂರ ವೆಳಕ್ಕು' ಮುಗ್ಧರಿಗೆ 'ಮಕರ ವೆಳಕ್ಕು' ಆಯಿತು! ಇದನ್ನು ತನಿಖೆಯ ನಂತರ ಸ್ಪಷ್ಟಪಡಿಸಿತ್ತು ಆ ಸಂಘಟನೆ. ಅನನ್ಯಮಾನವತಾವಾದಿ ಡಾ. ಅಬ್ರಹಾಂ ಟಿ. ಕೋವೂರ್ ಇದನ್ನ ಸ್ಪಷ್ಟವಾಗಿ ಸಾರಿದರು, ತಮ್ಮ ಕೃತಿಯಲ್ಲಿ ದಾಖಲಿಸಿದರು. ಇನ್ನು ತೀರ್ಥೋದ್ಭವದ ವಿಷಯ. ಹಲವು ವರ್ಷಗಳ ಹಿಂದೆಯೇ ಕೊಡಗಿನವರೇ ಆದ ಭಾರತೀಸುತ ಮುಗ್ಧರನ್ನು ಮೋಸಗೊಳಿಸುವಿಕೆಯಿಂದ ಬೇಸತ್ತು ತೀರ್ಥ ಉದ್ಭವಿಸುವುದು ಸುಳ್ಳು ಎಂದು ಸಾರಿದ್ದರು. ಅಂದರೆ ಇವು ವಾಸ್ತವ ಸಂಗತಿ. ಸುಬ್ಬಯ್ಯ ಇದನ್ನೇ ಹೇಳಿದರೆ ಬಾಂಬ್ ಹೇಗೆ ಸಿಡಿಯಿತು? ಅಲ್ಲೇ ಇರುವುದು ಗುಟ್ಟು. ಇಂತಹ ವಿಷಯಗಳನ್ನು ಜನರ ಮನಸ್ಸಿಗೆ ನಾಟುವಂತೆ ಪದೇಪದೇ ಯಾರೂ ಹೇಳುವುದಿಲ್ಲ, ಹಾಗಾಗಿ ಸತ್ಯವೇ ಸುಳ್ಳು ಆಗಿದೆ. ಗೊಬೆಲ್ ಮಂತ್ರದ ಯಶಸ್ವೀ ಪ್ರಯೋಗಕ್ಕೆ ಈ ಭಾರತ ಅಂಬೋದು ಪ್ರಶಸ್ತ ಸ್ಥಳ. ಸುಬ್ಬಯ್ಯ ಸುಳ್ಳನ್ನು ಸುಳ್ಳು ಎಂದಿದ್ದರು. ಇದೇ ಸಂಘ ಪರಿವಾರಕ್ಕೆ 'ಬಾಂಬ್' ಆಗಿತ್ತು!

ಇದಕ್ಕೆ ಸಂಘ ಪರಿವಾರದ ಪ್ರತಿಕ್ರಿಯೆ ಏನು?

'ಇದು ನಂಬಿಕೆಯ ಪ್ರಶ್ನೆ!'

ಹೀಗೆ ಹೇಳಿದಾತ ಮಾಜಿ ಶಾಸಕ ಅಂತೆ.

ವೈಚಾರಿಕತೆ ಇವರಿಗೆ ಆಜನ್ಮ ಶತ್ರು. ಚರ್ಚೆ



ಎಂದರೆ ಮಾರು ದೂರ. ಆವೇಶವೇ ಇವರ ಆಯುಧ. ಕೊಚ್ಚು, ಕಡಿ, ಕೊಲ್ಲು ಇವರ ಭಾಷೆ. ವೈಚಾರಿಕ ದಾಳಿಗೆ ಇವರ ಗುರಾಣಿ- 'ನಂಬಿಕೆ!'

ನಂಬಿಕೆ ಇರಬೇಕು ನಿಜ. ಬಾಳಿನಲ್ಲಿ ಇದು ಮುಖ್ಯ ಕೂಡ. ಆದರೆ ನಂಬಿಕೆ ಆಧಾರರಹಿತ ಅಂದಾಗಲೂ ಯಾವುದನ್ನು ನಂಬುತ್ತೀರಿ? ಸತ್ಯವನ್ನೋ? ನಂಬಿಕೆಯನ್ನೋ? ಸಂಘ ಪರಿವಾರ ಹೇಳುತ್ತೆ, ನಂಬಿಕೆಯನ್ನ! ಸತ್ಯದ ಮೇಲೆ ನಂಬಿಕೆಯ ಸವಾರಿ! ನಂಬಿಕೆಯನ್ನು ಪ್ರಶ್ನಿಸಿದರೆ ಬಹುಜನರ ಭಾವನೆಗಳಿಗೆ ನೋವು! ಇದಕ್ಕೆ ಪರಿಹಾರ? ಸಂಘ ಪರಿವಾರದ ಪುಂಡಾಟ! ಕೈಯಲ್ಲಿ ಹರಿಯದೇ ಹೋದಾಗ....

ಎ.ಕೆ. ಸುಬ್ಬಯ್ಯ ತೀರ್ಥ ಉದ್ಭವಿಸುವುದು ಸುಳ್ಳು ಅಂದರು. ಅದನ್ನು ಸಂಘ ಪರಿವಾರ ನಂಬಿತೇ? ಹೇಗೆ ನಂಬೀತು, ಅದರ ಅಸ್ತಿತ್ವ ಇರುವುದೇ ಸುಳ್ಳಿನ ತಳಪಾಯದ ಮೇಲೆ! ಹಾಗಾದರೆ ನಡೆಯಬೇಕಲ್ಲ ಅವರ ಮೇಲೆ ದಾಳಿ? ನಡೆಯಿತೆ ಅದು? ಅದಕ್ಕೆ ತ್ರಾಣ ಇಲ್ಲ, ತೆಪ್ಪಗಾಯಿತೆ ಸಂಘ ಪರಿವಾರ? ತಪ್ಪನ್ನು ಒಪ್ಪಿಕೊಂಡರೆ ಸಂಘ ಪರಿವಾರ ಹೇಗಾದೀತು. ಹೊರಬಿತ್ತು ಮಾಜಿ ಶಾಸಕ ಮಂತ್ರ- 'ಸುಬ್ಬಯ್ಯ ಹುಚ್ಚ!'

ಆಹಾ, ಭಾರತೀಯ ಜನತಾಪಕ್ಷದ ವರಿಷ್ಠನಿಂದ ಎಂತಹ ಗೌರವಾನ್ವಿತ ನಡವಳಿಕೆ! ಕಾಮಾಲೆ ರೋಗದವರಿಗೆ ಕಂಡದ್ದೆಲ್ಲ ಹಳದಿ!

ಪಾಪ ಈ ಮಾಜಿ ಶಾಸಕನದ್ದೇನೂ ತಪ್ಪಿಲ್ಲ, ಅವರನ್ನು ಬೆಳೆಸಿರುವ ಸಂಸ್ಕೃತಿ ಅಂತಹದ್ದು. ಮೂಲಭೂತವಾದಿಗಳ ಮಂತ್ರ ಒಂದಿದೆ. ಅದು ನಂಬು, ಶರಣಾಗು, ಹೋರಾಡು. ಅದನ್ನೆ ಮಾಡಿದ ಇವ. ಮೇಲಿನವರು ಹೇಳಿದ್ದನ್ನು ನಂಬಿದ. ಅದಕ್ಕೆ ಶರಣಾದ. ಅದಕ್ಕಾಗಿ ಹೋರಾಡುತ್ತಿದ್ದಾನೆ!

* * * *

ಚುನಾವಣೆ ಹತ್ತಿರ ಬರುತ್ತಿದೆ.

ನಾಯಕರ ತರಾತುರಿ.

ಏನು ಮಾಡಿದರು ಅವರು?

ಎಸ್.ಎಂ. ಕೃಷ್ಣ ಚುನಾವಣಾ ಸಮನ್ವಯ ಸಮಿತಿ ಅಧ್ಯಕ್ಷರು. ದೇವರು ದಿಂಡಿರು, ಮಠಾಧಿಪತಿಗಳ ಸೇವೆಗೆ ಪರದಾಡುತ್ತಿದ್ದಾರೆ.

ಜಾತ್ಯತೀತ ಜನತಾದಳ?

ಇಡೀರಾತ್ರಿ ಯಜ್ಞ ಮಾಡಿತಂತೆ! ಹತ್ತಾರು ಪುರೋಹಿತರು ಜಮಾಯಿಸಿ ಇದನ್ನ ಯಶಸ್ವಿಯಾಗಿ ನೆರವೇರಿಸಿದರಂತೆ. ಕೆಲವೇ ಕೆಲವು ಪ್ರಮುಖರನ್ನು ಮಾತ್ರ ಆಹ್ವಾನಿಸಲಾಗಿತ್ತಂತೆ.

ಅಲ್ಲ, ರಾತ್ರಿಯೇ ಏಕೆ ಈ ದೈವಕಾರ್ಯ ಕೈಗೊಂಡರು ಜಾತ್ಯತೀತ ನಾಯಕರು? ಇರುಳು ಕಂಡ ಬಾವಿಯನ್ನೇ ಹಗಲಿನಲ್ಲೂ ಬೀಳ್ತಾರೇನೋ ಅಂತ ಪರೀಕ್ಷಿಸುವುದಕ್ಕಾ!

ಇನ್ನು ಭಾಜಪ. ಸರಿಯೇ ಸರಿ-ಅವರನ್ನು ದೇವರು ಸೃಷ್ಟಿಸಿರೋದೆ ಈ ದೇಶ ಆಳಲು. ಭಾವೀ ಪ್ರಧಾನಿ ಅಭ್ಯರ್ಥಿನೇ ಇದನ್ನ ಸ್ಪಷ್ಟಪಡಿಸಿದ್ದಾರೆ. ಅಂದಮೇಲೆ ಆ ಸೃಷ್ಟಿಕರ್ತನ ನೆನೆಯುವಿಕೆಯಲ್ಲೇ ಅವರ ಜೀವನದ ಸಾರ್ಥಕತೆ!

ಇವರಲ್ಲಿ ಯಾರೋ ಒಬ್ಬರು ಅಧಿಕಾರಕ್ಕೆ ಬರ್ತಾರೆ. ಜನರನ್ನು ಬಿಟ್ಟು ದೇವರು ದಿಂಡಿರು ಅಂತ ಅಲೀತಿರೋ ಇವರನ್ನ ಎಲ್ಲಿ ಅಂತ

## ಅಣಾಕ್

■ ಎಚ್.ಎಲ್. ಕೇಶವಮೂರ್ತಿ

ಹುಡುಕೋದು? ಮಠಮಾನ್ಯಗಳಲ್ಲಾ? ದೇವಮಂದಿರಗಳಲ್ಲಾ? ಆಹಾ, ಏನು ಪ್ರಜಾಪ್ರಭುತ್ವ ಏನು ಕತೆ!

* * * *

ರಾಷ್ಟ್ರಪತಿ ಆಡಳಿತ ಬಂದಿದೆ.

ಜನಪ್ರಿಯ ಸರ್ಕಾರ ಇದ್ದಾಗ ಸರ್ಕಾರಿ ಸಿಬ್ಬಂದಿಗೆ ಒಂದು ರೀತಿ ಕಿರುಕುಳ. ವರ್ಗದ ಹಿಂಸೆ. ಒಂದು ಕಡೆ ತಳ ಊರಿದೆ ಅಂತ ಇನ್ನೇನು ಅನ್ನಬೇಕು ಅನ್ನುವಷ್ಟರಲ್ಲಿ ವರ್ಗ! ಇಂತಿಷ್ಟು ಅಂತ ಸಂಬಂಧಿಸಿದವರಿಗೆ ಪಿಂಡ ಅರ್ಪಿಸಿದರೆ ಎಲ್ಲಾ ಸರಿ ಹೋಗುತ್ತಿತ್ತು.

ರಾಜ್ಯಪಾಲರು ಬಂದರಲ್ಲ, ಸಿಬ್ಬಂದಿಗೆ ಒಂದು ರೀತಿಯ ನೆಮ್ಮದಿ ಆಯಿತು. ಹಾಳಾದ ರಾಜಕಾರಣಿಗಳ ಪಾದ ಹಿಡಿಯೋದು ತಪ್ಪಿತಲ್ಲಾ, ಕಪ್ಪ ಒಪ್ಪಿಸೋದು ತಪ್ಪಿತಲ್ಲಾ ಅಂತಾ.... ಆದರೆ....

ಈಗ ನೋಡಿದರೆ ಪ್ರತಿ ದಿವಸ ಹಲವಾರು ಅಧಿಕಾರಿಗಳ ವರ್ಗಾವಣೆ!

ಯಾರಾರ ಅನ್ನಿ ಕಣಕ್ಕ, ಇಂದ್ರಾಗಾಂಧಿ,
ವಗಾಂಧಿ, ಸೋನಿಯಾಗಾಂಧಿ ಇವುರ್ನಲ್ಲ
ಕಾಡಜನಗಳತ್ರಕೋಗಿ ಕುಣುದು ಬತ್ತಿದ್ರು.
ರಾವುಲ ಗಾಂಧಿನೂ ಮಾಡ್ತವುನೆ.
ಲ್ಲೇನು ವಿಶೇಷ ಇಲ್ಲ. ಆದ್ರೆ
ರಸ್ವಾಮಿನೆ ರಾವುಲ ಗಾಂಧಿಗೆ ಮಾಡ್ಸ
ಗ ನನಿಗೆ ನಗು ಬತ್ತದೆ ಕಣಕ್ಕ. ಈ
ರಸ್ವಾಮಿ ಕಾರ್ಯಕ್ರಮವ ಯಾರಾರ
ಮಾಡಕ್ಕಾದತೇನಕ್ಕ?"

ಅಂಗಂತಿಯಾ?"

ಅಲ್ಲಾ ಕಣಕ್ಕ. ಅವುನು ಬಾಂಡ್
ಯಾದ ಅದ್ನೆ ತರ ಇರೊ ಜಮೀರಮದ್
ಯು ಕಾರಾಸ್ಥಾನ ಮಾಡಿಕಂಡವುನೆ.
ಲ್ಲೆಗಳನ್ನೆಲ್ಲ ಹೊತಗಂಡೋಗಿ ರೆಸಾರ್ಟ್‌ನಲ್ಲಿ
ಕೆ ಮಜಾ ಮಾಡುಸ್ತನೆ. ಓಟು ಮಾಡೊ
ಆ ಬದ್ದೆತ್ತವುನ್ನೆಲ್ಲ ಓಲವ್ಹೊ ಬಸ್ನಲ್ಲಿ
ನಸಭೆಗೆ ಕರಕಂಡು ಬತ್ತನೆ. ಮನೆಲಿ ಅನಿತಕ್ಕ
ಕೊಡದಿಲ್ಲ ಅಂತ ಯಾವನೊ ಈ ಉಗ್ರಿ
ನ ಮನೆಲಿ ಸುಖವಾಗಿ ಮನಿಗಿದ್ದು ವತ್ತರೆ
ಬತ್ತನೆ. ಇದನ್ನ ಯಾರಾರ ಫಾಲೊ
ಕ್ಕಾಯ್ತದಾ? ಈ ಪ್ರೊಗ್ರಾಮಲ್ಲಿ ಯಾವ
ರ್ಶ ಅದಕ್ಕ?"

ಮುಖ್ಯಮಂತ್ರಿಯಾಗಿದ್ರು ಮುರುಕುಲು
ಮನಿಗಿದ್ದಾ ಅನ್ನೊ ಆದರ್ಶ ಅದಂತೆ
ವಾಟಿಸ್ಸೆ."

ಮಿಸ್ಟರ್ ಉಗ್ರಿ, ದ್ಯಾವೇಗೌಡ
ಕಾರಣದಲ್ಲಿ ಕುತಂತ್ರನೆ ಮಾಡದೆಯಿದ್ರೆ ಈ
ರಸ್ವಾಮಿಗೆ ಹರದನಹಳ್ಳಿ ಹಂಚಿನ ಮನೆ
ನೆ ಕಾಯಂ ಆಗದು. ಅದೇ
ಲಗಾಂಧಿಗೆ ಅಂಗಿತ್ತ ಹೇಳು. ತಮಾಸಿ
ತಕ್ಕು ಒಂದಿದು ಬೇಕು ಕಣೊ!"

'!?"

---

ಅಲ್ಲ ಒಂದು ಕಡೆ ನೆಮ್ಮದಿಯಾಗಿ ಒಂದೆರಡು
- ಸೇವೆ ಸಲ್ಲಿಸೋಣ ಅಂತ ಇದ್ದರೆ
ಪಾಲರ ಆಡಳಿತದಲ್ಲೂ 'ಕಪ್ಪ' ನೀಡಬೇಕಾ
ನ್ನೇ ಅನುಮಾನ ಬರೋದಿಲ್ವಾ....

* * * *

ರಾಹುಲ್ ಗಾಂಧಿ ಕರ್ನಾಟಕಕ್ಕೆ ಬಂದದ್ದು
ಕೆ?

'ಡಿಸ್ಕವರ್ ಇಂಡಿಯಾ'- ಕಾಂಗ್ರೆಸ್.

'ಟ್ರೈಬಲ್ ಡ್ಯಾನ್ಸ್ ನೋಡಲು'- ಜೆಡಿಎಸ್‌ನ
ಾಜುದ್ದೀನ್ ಪಟೇಲ್.

'ನಮಗೂ ಅದಕ್ಕೂ ಸಂಬಂಧ ಇಲ್ಲ'-ಹಲ್ಮುಖಿ
ದರು.

ಹೀಗೆ ಒಂದೊಂದು ಪಕ್ಷದ್ದೂ ಒಂದೊಂದು
ರ.

ಚುನಾವಣೆಯ ಮೇಲೆ ಈ ಭೇಟಿ ಪರಿಣಾಮ
ಬಹುದೆ?

'ಬೀರುತ್ತೆ'-ಕಾಂಗ್ರೆಸ್.

'ನಮ್ಮ ಮತದಾರರು ನಮ್ಮ ಹತ್ತಿರ ಭದ್ರ
ವಾರೆ' ಹಲ್ಮುಖಿ ಗೌಡರು.


'ನಮ್ಮ ಪಕ್ಷದ ಮೇಲೆ ಯಾವುದೇ ಪರಿಣಾಮ
' ಜೆಡಿಎಸ್.

ಜೆಡಿಎಸ್, ಭಾಜಪಗಳಿಗೆ ಕೆಲವು ಕ್ಷೇತ್ರಗಳಲ್ಲಿ
ರ್ಥಿಗಳೇ ಇಲ್ಲ! ಅಂದಮೇಲೆ ಪರಿಣಾಮ
ಬೀರಲು ಸಾಧ್ಯ? ಸ್ಪರ್ಧೆ ಇದ್ದರೆ ತಾನೆ ಆ
!

* * * *

'ಭಾಜಪಕ್ಕೆ ಟಿಕೆಟ್ ಆಕಾಂಕ್ಷಿಗಳ ದಾಳಿ'
ಯಾರು ಹೇಳಿದ್ದು ಇದನ್ನ?
ಹಲ್ಮುಖಿ ಗೌಡರು!
ಯಾಕೆ ಇಷ್ಟೊಂದು ಜನ ಮೇಲೆ ಬಿದ್ದು ಬರ್ತಾ
ರೆ ಅಂದರೆ ಅದು ರೇಸ್‌ನಲ್ಲಿ ಮೊದಲು
ತ್ತಿರುವ ಕುದುರೆ ಅಂತೆ! ಇದು ಭಾಜಪದ
ಅಥವಾ ಪಕ್ಷಕ್ಕೆ ಅಭ್ಯರ್ಥಿಗಳನ್ನ
ಲು ಹೂಡಿರುವ ಸಂಚಾ!
ಹೇಗಾದರೂ ಇರಲಿ. ಗೌಡರಿಗೆ
-ಜೊಲ' ಕತೆ ತಿಳಿದಿದ್ದರೆ ಯಾವುದಕ್ಕೂ
ಡು!

# ಮರೆಯುವ ಮುನ್ನ



■ ಪಿ. ಲಂಕೇಶ್

ಜುಲೈ 1, 1990

## ಸತ್ತಾರ್ ಏಧಿ: ಬೆಳ್ಳಿ ಕಿರಣ


ಕರಾಚಿ ಈಗ ಹೇಗಿದೆ ಎಂದು ಬಲ್ಲಿರಿ; ಭಾರತದಿಂದ ಪಾಕಿಸ್ತಾನಕ್ಕೆ ಹೋದ ಮುಸ್ಲಿಮರಿಗೂ ಅಲ್ಲಿಯೇ ಇದ್ದ ಮುಸ್ಲಿಮರಿಗೂ ಬದ್ಧ ವೈರ. ನಿತ್ಯ ರಕ್ತಪಾತವಾಗುತ್ತಿದೆ, ಈ ಜಗಳಕ್ಕೆ ಸಂಬಂಧವಿಲ್ಲದವರೂ ದಿಕ್ಕೆಟ್ಟು ಹೋಗಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಜನ ನಿಟ್ಟುಸಿರಿಟ್ಟು "ಮೇಲುಗಡೆ ಅಲ್ಲಾ, ಕರಾಚಿಯ ರಸ್ತೆಗಳಲ್ಲಿ ಏಧಿ ಇರುವವರೆಗೆ ಭಯವಿಲ್ಲ" ಎಂದು ಹೇಳುವಂತಾಗಿದೆ.

ಅಬ್ದುಲ್ ಸತ್ತಾರ್ ಏಧಿ ಪಾಕಿಸ್ತಾನದ ಮದರ್ ಥೆರೆಸಾ ತರಹ ಇದ್ದಾರೆ. ಮನೆಯಿಂದ ಹೊರನೂಕಲ್ಪಟ್ಟ ಅಬಲೆಯರು, ಬೀದಿಗೆಳೆಯಲ್ಪಟ್ಟ ಮಕ್ಕಳು, ರೋಗಿಗಳು, ಬಡವರು, ಗಾಯಗೊಂಡ ನಾಗರಿಕರು ಎಲ್ಲರಿಗೆ ಏಧಿಯವರ ಆಶ್ರಮದಲ್ಲಿ ಜಾಗವಿದೆ, ಶುಶ್ರೂಷೆ ಇದೆ, ಪ್ರೀತಿ ಇದೆ. ಜಾತಿ, ಬಣ್ಣ, ಹೆಣ್ಣು, ಗಂಡು ಎಂದು ನೋಡದೆ ಈ ಬಿಳಿಗಡ್ಡದ 61 ವರ್ಷದ, ವ್ಯವಹಾರಜ್ಞ, ಅಕ್ಕರೆಯ ವ್ಯಕ್ತಿ ತಮ್ಮ ಅಭಯಹಸ್ತ ಮತ್ತು ಅಪಾರ ವಿಶ್ವಾಸ ನೀಡುತ್ತಾರೆ. ನಾಲ್ಕು ದಶಕದ ಹಿಂದೆ ಆರನೆ ಕ್ಲಾಸಿನಲ್ಲಿ ಫೇಲಾದ, ತನ್ನ ತಾಯಿ ಪಾರ್ಶ್ವವಾಯು ಮತ್ತು ಜ್ವರದಿಂದ ವೈದ್ಯಕೀಯ ನೆರವು ಪಡೆಯಲಾಗದೆ ಸತ್ತಾಗ ಮಾನವ ಕೋಟಿಯ ನೋವು ಕಡಿಮೆ ಮಾಡಲು ನಿರ್ಧರಿಸಿದ ಮನುಷ್ಯನೀತ. ದೇವರಲ್ಲಿ ಅಪಾರ ನಂಬಿಕೆ ಇಲ್ಲದ, ಸರ್ಕಾರದಲ್ಲಿ ವಿಶ್ವಾಸವಿಲ್ಲದ, "ನನ್ನ ಗಡ್ಡದಮಟ್ಟಿಗೆ ಮಾತ್ರ ನಾನು ಮುಸ್ಲಿಂ" ಎಂದು ಹೇಳುವ ಮನುಷ್ಯನೀತ. ಮಸೀದಿಗೆ ಕೂಡ ಹೋಗದಿರುವ ಈತನ ಬಗ್ಗೆ ಮುಲ್ಲಾಗಳಿಗೆ ರೋಷ. ಐದು ರೂಪಾಯಿ ಕೂಪನ್‌ಗಳನ್ನು ಮಾಡಿ ಬಡವರಿಂದ ಹಣ ಸಂಗ್ರಹಿಸಿ ಅಸಹಾಯಕರ ಮೇಲೆ ಖರ್ಚು ಮಾಡುವ ಈ ವ್ಯಕ್ತಿಯನ್ನು ಕಂಡರೆ ಮುಲ್ಲಾಗಳಿಗೆ ಸಿಟ್ಟು; "ತಮಗೆ ಬರಬೇಕಾದ ಕಾಣಿಕೆ ಏಧಿಗೆ ಹೋಗಕೂಡದು" ಎನ್ನುತ್ತಾರೆ ಅವರು. ಆದರೆ ಜನ ಏಧಿಗೆ ಕೋಟ್ಯಂತರ ರೂಪಾಯಿ ಕೊಡುತ್ತಾರೆ. ಏಧಿ ಬೆಳಗ್ಗೆ ಮೂರರಿಂದ ರಾತ್ರಿ ಬಲಿಯುವವರೆಗೆ ಜನರ ನೋವು, ಅಸಹಾಯಕತೆ ನಿವಾರಿಸುತ್ತಾರೆ.



ಎಲ್ಲ ಮೋಡಕ್ಕೂ ಆಶಾಕಿರಣವೊಂದು ಇರುತ್ತದೆ ಎನ್ನುತ್ತಾರೆ; ಹಾಗೆಯೇ ಪಾಕಿಸ್ತಾನದ ದುರಂತಮಯ ಕ್ಷಣದಲ್ಲೂ ಒಬ್ಬ ಏಧಿ ಇದ್ದಾರೆ. ಕೆಲವು ವರ್ಷಗಳ ಹಿಂದೆ ಪಾಕಿಸ್ತಾನದ ಅಧ್ಯಕ್ಷ ಜಿಯಾ ಏಧಿಗೆ ಹತ್ತು ಲಕ್ಷ ಕೊಡಲು ಬಂದರು. ಏಧಿ ತೆಗೆದುಕೊಳ್ಳಲು ನಿರಾಕರಿಸುತ್ತ ಹೇಳಿದರು, "ಧರ್ಮದಿಂದ ಕಳಂಕಿತವಾದ ಹಣ ನಾನು ಮುಟ್ಟುವುದಿಲ್ಲ."

## ಟಿಪ್ಪೂ ಸಾಯುವ ಮುನ್ನ



ಬಹಳ ದಿನದಿಂದ ಒಂದು ಪುಸ್ತಕ ಓದಲು ಪ್ರಯತ್ನಿಸುತ್ತಿದ್ದೇನೆ; ಅದು ದೊಡ್ಡ ಪುಸ್ತಕ. ಇಂದಿಗೆ ಸರಿಯಾಗಿ ಇನ್ನೂರು ವರ್ಷದ ಹಿಂದೆ ಬರೆದ, ಟಿಪ್ಪೂ ಸಾಯುವುದನ್ನು ಕಂಡ, ಫ್ರೆಂಚ್ ಕ್ರಾಂತಿ ನಡೆವ ಸಂದರ್ಭದಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ಅಬೆದುಬಾಯಿ ಎಂಬ ಫ್ರೆಂಚ್ ಪಾದ್ರಿ ಬರೆದ ಪುಸ್ತಕ. 1892ರಲ್ಲಿ ಅಬೆ ದುಬಾಯಿ ಮೈಸೂರು ರಾಜ್ಯಕ್ಕೆ ಬಂದ. ಹಾಸನದ ಹತ್ತಿರದ ಸಾತಹಳ್ಳಿ ಎಂಬಲ್ಲಿ ತನ್ನ ಬೀಡುಬಿಟ್ಟು, ಶ್ರೀರಂಗಪಟ್ಟಣದ ಹತ್ತಿರ ಒಂದು ಪುಟ್ಟ ಚರ್ಚ್ ನಿರ್ಮಿಸಿಕೊಂಡ.

ಅಬೆ ದುಬಾಯಿ ಬಂದದ್ದು ಹಳ್ಳಿಯ ಜನರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಮಾಡಲು. ಇದಕ್ಕಾಗಿ ದುಬಾಯಿ ಕನ್ನಡ ಕಲಿತ. ಹಳ್ಳಿಯ ಜನರೊಂದಿಗೆ ಬೆರೆತು ಅವರ ಕಷ್ಟಸುಖ ವಿಚಾರಿಸತೊಡಗಿದ. ಶ್ರೀರಂಗಪಟ್ಟಣದ ಹತ್ತಿರ ಎಲ್ಲ ಬಡವರೊಂದಿಗೆ ಬದುಕಿ ಅವರ ಜಾತಿ, ಧರ್ಮ, ಆಚರಣೆಗಳನ್ನೆಲ್ಲ ಅಭ್ಯಸಿಸಿದ. ಯಾರಿಗೆ ಕಷ್ಟವಿದ್ದರೂ, ನೆರವು ಬೇಕಿದ್ದರೂ ಈ ಅಬೆ ದುಬಾಯಿ ಹಾಜರಿರುತ್ತಿದ್ದ. ಸರ್ಕಾರಕ್ಕೆ ಪತ್ರ ಬರೆದು ಕೆಲಸ ಮಾಡಿಸಿಕೊಡುತ್ತಿದ್ದ. ಪಂಚಾಯಿತಿ ಮಾಡಿ ಜಗಳ ಬಗೆಹರಿಸುತ್ತಿದ್ದ. ಹಳ್ಳಿಗನ ಬಟ್ಟೆ ಧರಿಸಿ ಜೀವಂತ ಧರ್ಮದಂತೆ ಓಡಾಡುತ್ತಿದ್ದ ದುಬಾಯಿ ಬದುಕಿದ್ದಾಗಲೇ ಮೈಸೂರಿನ ಯುದ್ಧ ನಡೆದು ಟಿಪ್ಪೂ ಹತನಾದ; ಫ್ರಾನ್ಸಿನಲ್ಲಿ ಕ್ರಾಂತಿ ನಡೆದು ರಕ್ತ ಹೊಳೆಯಾಗಿ ಹರಿಯಿತು. ಆದರೆ ದುಬಾಯಿ ತನ್ನ ಕೆಲಸದಲ್ಲಿ ಸಂಪೂರ್ಣ ಮಗ್ನನಾಗಿದ್ದ. ಹಳ್ಳಿಯ ಜನರು ಈ ವಿಚಿತ್ರ ಫ್ರೆಂಚ್ ಪಾದ್ರಿಯನ್ನು ತಮ್ಮ ತಂದೆ, ಗುರು ಎಂದು ತಿಳಿದರು; ದುಬಾಯಿಯನ್ನು ಅವರು "ದೊಡ್ಡ ಸ್ವಾಮ್ಯಾರು" ಎಂದು ಕರೆಯುತ್ತಿದ್ದರು.

ದುಬಾಯಿ ಎಷ್ಟು ಮಾನವೀಯ, ಕುತೂಹಲದ ಮನುಷ್ಯನೆಂದರೆ ಈತ ತನ್ನ ಸೇವೆಯ ನಡುವೆ ಜನರನ್ನು ಮತಾಂತರ ಮಾಡುವುದನ್ನೇ ಮರೆತ.




## ಗೆಳೆಯನೊಬ್ಬನಿಗೆ

ನಾನು ಅವನಿಗೆ ಏನೂ ಹೇಳಿರಲಿಲ್ಲ
ಹೇಳಬೇಕೆಂದು ಅನ್ನಿಸಲೂ ಇಲ್ಲ
ಆಯ್ಕೆಯ ಮಾನದಂಡ ಝಳಪಿಸಿ
ಅವನನ್ನು ನಿರುತ್ತರನನ್ನಾಗಿಸುವುದು
ಸುಲಭವಿತ್ತು.

ಆದರೆ, ಕನಸಿನೊಳಗೆ ಆಯ್ಕೆ
ದಾರಿಸೂಚಿಯ ಬಾಣದಂತಿರುವುದೆಂದೇನು
ಖಚಿತ?
ಮೋಡಗಳು ಒಂದರೊಳಗೊಂದು ಬೆಸೆದು, ಬೆರೆತು,
ಸ್ವೇಚ್ಛಾ ವಿನ್ಯಾಸದಲ್ಲಿ ತೇಲುವುದು
ನಾನು ನೋಡಿದ್ದೇನೆ.

ಅಷ್ಟಕ್ಕೂ ತೇಲುವ ಸ್ವಾತಂತ್ರ್ಯ
ಕನಸೊಳಗೆ ನಡೆದವನಿಗಷ್ಟೇ ಇದೆ
ಅದಕ್ಕೇ ನಾನು ನಿಂತು ವಿದಾಯ ಹೇಳಿದೆ
ಕಣ್ಣಲ್ಲಿ ತುಂಬಿದ ನೀರು ಕಾರಣವಾಗಿ
ಅವನೆಲ್ಲಿ ತೇಲಿ ನಡೆದನೋ ಗೊತ್ತಾಗಲಿಲ್ಲ.

■ ಕೆ.ಪಿ. ಸುರೇಶ



# ಎಲ್ಲಾ ಅಭ್ಯರ್ಥಿಗಳನ್ನೂ ತಿರಸ್ಕರಿಸುವ ಹಕ್ಕು

► 2ನೇ ಪುಟದಿಂದ

**this effect shall be made against the said entry in Form 17A by the presiding officer and the signature or thumb impression of the elector shall be obtained against such remark.**

ಅಂದರೆ ಈ ಸೆಕ್ಷನ್ 49-ಒ ಪ್ರಕಾರ: ಒಂದು ವೇಳೆ ಮತದಾರ ಮತದಾನದ ಪ್ರಕ್ರಿಯೆಯಲ್ಲಿ ಫಾರಂ.17-ಎ ನಲ್ಲಿ ತನ್ನ ಮತದಾರ ಸಂಖ್ಯೆಯನ್ನು ನಮೂದಿಸಿ, 49-ಎಲ್ ರೂಲಿನ ಸಬ್ ರೂಲ್ 1 ರಂತೆ ತನ್ನ ಸಹಿಯನ್ನು ಅಥವಾ ಹೆಬ್ಬೆಟ್ಟಿನ ಗುರುತನ್ನು ಹಾಕಿದ ನಂತರ ತನ್ನ ಮತವನ್ನು ಚಲಾಯಿಸಬಾರದೆಂದು ನಿರ್ಧರಿಸಿದರೆ ಇದಕ್ಕೆ ಸಂಬಂಧಿಸಿದ ಟಿಪ್ಪಣಿಯನ್ನು ಫಾರಂ.17-ಎನಲ್ಲಿ ದಾಖಲಿಸಲಾಗುವುದು ಮತ್ತು ಆ ಟಿಪ್ಪಣಿಯ ಬಗ್ಗೆ ಮತದಾರರ ಹೆಬ್ಬೆಟ್ಟು ಅಥವಾ ಸಹಿಯನ್ನು ಪಡೆಯಲಾಗುವುದು.

ಇದರರ್ಥ ಮತದಾರರಿಗೆ ಇಷ್ಟವಿಲ್ಲದ ಅಭ್ಯರ್ಥಿಯನ್ನು ನಿರಾಕರಿಸುವ ಮತ್ತು ಅದನ್ನು ಅಧಿಕೃತವಾಗಿ ದಾಖಲಿಸುವ ಹಕ್ಕನ್ನು ನಮ್ಮ ದೇಶದ ಕಾನೂನು ನೀಡುತ್ತದೆ. ಆದರೆ ಮತದಾನ ಮಾಡದಿರುವುದು ಪ್ರಜಾತಂತ್ರಕ್ಕೆ ಮಾಡುವ ಅಪಚಾರವೆಂದೂ, ಮತದಾನ ಮಾಡದವರು ಸಂವಿಧಾನ ವಿರೋಧಿಗಳು ಮತ್ತು ಪ್ರಜಾತಂತ್ರ ವಿರೋಧಿಗಳು ಎಂದೂ ಗಳಹುವ, ಪ್ರಜಾತಂತ್ರವನ್ನು ಅಮಲು ಮಾಡಿಕೊಂಡಿರುವ, ಕೇವಲ ಮಾತಿನ ಗೀಳನ್ನಾಗಿ ಮಾಡಿಕೊಂಡಿರುವ ಬುದ್ಧಿಜೀವಿಗಳಾಗಲೀ, ಓಟು ಹಾಕುವುದನ್ನು ಕಡ್ಡಾಯ ಮಾಡಬೇಕೆನ್ನುವ ರಾಜಕೀಯ ಪಕ್ಷಗಳಾಗಲೀ ಈ ಹಕ್ಕನ್ನು ಕುರಿತು ಎಲ್ಲಿಯೂ ಪ್ರಸ್ತಾಪಿಸುವುದೇ ಇಲ್ಲವೇಕೆ?


ಅಷ್ಟೆಲ್ಲಾ ಏಕೆ? 2004ರಲ್ಲಿ ಚುನಾವಣಾ ಸುಧಾರಣೆಯ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಿರುವ ಚುನಾವಣಾ ಆಯೋಗವೂ ಸಹ ಮತದಾರರ ಈ ಹಕ್ಕನ್ನು ಎತ್ತಿ ಹಿಡಿಯಬೇಕೆಂದು ಗುಪ್ತವಾಗಿಯಾದರೂ ಸರ್ಕಾರಕ್ಕೆ ಸಲಹೆ ಮಾಡಿದೆ. ಅಷ್ಟು ಮಾತ್ರವಲ್ಲ, ಈ ಬಗೆಯ ಮತದಾನವೂ ಸಹ ಗುಪ್ತವಾಗಿಯೇ ನಡೆಯುವಂತೆ **Rules 22 and 49B of the Conduct of Election** Rules, 1961 ಅನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ ಬ್ಯಾಲೆಟ್ ಪೇಪರಿನಲ್ಲಿ ಮತ್ತು ಎಲೆಕ್ಟ್ರಾನಿಕ್ ಓಟಿಂಗ್ ಮಷೀನ್‌ನಲ್ಲಿ ಎಲ್ಲಾ ಅಭ್ಯರ್ಥಿಗಳ ಹೆಸರಿನ ನಂತರ ಕೊನೆಯಲ್ಲಿ "None Of The Above-NOTA" ಎಂಬ ಕಾಲಮ್ಮನ್ನು ಸೇರಿಸಬೇಕೆಂದು ಸಲಹೆ ಮಾಡಿದೆ.

ಈಗಾಗಲೇ ಪ್ರಪಂಚದ ಹಲವಾರು ಪ್ರಜಾತಾಂತ್ರಿಕ ದೇಶಗಳಲ್ಲಿ ಈ "None Of The Above-NOTA" ಓಟು ಜಾರಿಯಲ್ಲಿದೆ. 2004ರಲ್ಲಿ ನೆದರ್‌ಲ್ಯಾಂಡ್ ದೇಶದಲ್ಲಿ ನಡೆದ ಚುನಾವಣೆಯಲ್ಲಿ ಈ ನಿರಾಕರಣೆಯ ಆಯ್ಕೆಯನ್ನು ಇಟ್ಟುಕೊಂಡೆ ಚುನಾವಣೆಗೆ ತೆರಳಿತು. ಇದಲ್ಲದೆ ಅಮೆರಿಕ ಸಂಸ್ಥಾನದ ಕೊಲರಾಡೋ, ಮಿಚಿಗನ್, ಓಹೈಯೊ, ಪೆನ್ಸಿಲ್‌ವೇನಿಯಾ, ಆರಿಜೋನ ಪ್ರಾಂತ್ಯಗಳಲ್ಲಿ ಕಳೆದ ದಶಕದಲ್ಲೇ ಮತಪಟ್ಟಿಯಲ್ಲಿ "None Of The Above-NOTA" ಎಂಬ ಕಾಲಮ್ಮನ್ನು ಸೇರಿಸಲಾಗಿದೆ. ನೆವಾಡಾ ಪ್ರಾಂತ್ಯದಲ್ಲಂತೂ 1976ರಿಂದಲೂ ಈ ಅವಕಾಶವನ್ನು ಮತದಾರರಿಗೆ ಕಲ್ಪಿಸಿಕೊಡಲಾಗಿದೆ. 1998ರಲ್ಲಿ ಪೋರ್ಟೋರಿಕೋ ದೇಶದಲ್ಲಿ ನಡೆದ ಜನಮತಗಣನೆಯಲ್ಲಿ "None Of The Above-NOTA" ಎಂಬ ಕಾಲಮ್ಮನ್ನು ಸೇರಿಸಲಾಗಿತ್ತು. ರಷ್ಯಾದಲ್ಲಿ ಇತ್ತೀಚೆಗೆ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಶೇ.3.5ರಷ್ಟು ಜನ "None Of The Above-NOTA" ಚಲಾಯಿಸಿದ್ದರು.

ಭಾರತದಲ್ಲೂ ಮತ್ತು ಇತರ ದೇಶಗಳಲ್ಲೂ ಈ ಅವಕಾಶವನ್ನು ಕೇವಲ ನಕಾರಾತ್ಮಕವಾಗಿ ಮಾತ್ರ ಬಳಸದೆ ಪ್ರಜಾತಂತ್ರವನ್ನು ಗಟ್ಟಿಗೊಳಿಸಲು ಬಳಸುವಂತೆ ಹಲವು ಬೇಡಿಕೆಗಳನ್ನಿಟ್ಟುಕೊಂಡು ಹೋರಾಟ ನಡೆಸುತ್ತಿದ್ದಾರೆ. ಅದರಲ್ಲಿ ಒಂದು: ಯಾವುದಾದರೂ ಒಂದು ಕ್ಷೇತ್ರದಲ್ಲಿ ಈ "None Of The Above-NOTA" ಓಟು ಚಲಾವಣೆಯಾದ ಮತದಾನದ ಶೇ.50ಕ್ಕಿಂತ ಹೆಚ್ಚಿದ್ದರೆ ಆ ಕ್ಷೇತ್ರದ ಚುನಾವಣೆಯನ್ನು ರದ್ದುಗೊಳಿಸಬೇಕು. ಮತ್ತು ನಂತರ ನಡೆಯುವ ಚುನಾವಣೆಯಲ್ಲಿ ಈ ತಿರಸ್ಕರಿಸಲ್ಪಟ್ಟ ಅಭ್ಯರ್ಥಿಗಳು ಸ್ಪರ್ಧಿಸಬಾರದು. ಭಾರತದ ಚುನಾವಣಾ ಆಯೋಗದ ಎದುರೂ ಸಹ ಈ ಪ್ರಸ್ತಾಪವಿದೆ.

ಇವೆಲ್ಲವೂ ಪ್ರಜಾತಂತ್ರವನ್ನು ಮತ್ತಷ್ಟು ಗಟ್ಟಿಗೊಳಿಸುವ ಪ್ರಸ್ತಾಪಗಳೆ ವಿನಃ ಬುಡಮೇಲು ಮಾಡುವ ಪ್ರಸ್ತಾಪಗಳೇನೂ ಅಲ್ಲ. ಬುಡಮೇಲೇನಾದರೂ ಆಗುವುದಿದ್ದರೆ ಅದು ಈಗಾಗಲೇ ಪ್ರಜಾತಂತ್ರದ ಹೆಸರಿನಲ್ಲಿ ವ್ಯವಸ್ಥೆಯಲ್ಲಿ ಆಳವಾಗಿ ಬೇರುಬಿಟ್ಟಿರುವ ಪಟ್ಟಭದ್ರ ಹಿತಾಸಕ್ತಿಗಳು ವಿಚಲಿತವಾಗಬಹುದು. ಆದರೆ ವಾಸ್ತವವೇನೆಂದರೆ ಈ ಪ್ರಜಾಪ್ರಭುತ್ವ ನಿಜಕ್ಕೂ ಪ್ರಜೆಗಳ ಪ್ರಭುತ್ವವಾಗಬೇಕೆಂದರೆ ಸಾರದಲ್ಲಿ ಅಂದರೆ ಮೂಲಭೂತ ಆರ್ಥಿಕ ಸಾಮಾಜಿಕ ಸಂಬಂಧಗಳು ಮತ್ತು ಸಮೀಕರಣಗಳು ಪ್ರಜಾತಾಂತ್ರೀಕರಣಗೊಳ್ಳಬೇಕು. ಒಂದು ಓಟಿಗೆ ಒಂದು ಮೌಲ್ಯ ಬರಬೇಕೆಂದರೆ ಓಟುದಾರರೆಲ್ಲಾ ಆರ್ಥಿಕವಾಗಿ ಸಾಮಾಜಿಕವಾಗಿ ಸಮಾನ ಸ್ಥಾಯಿಯಲ್ಲಿರಬೇಕು. ಆದಾಗಬೇಕೆಂದರೆ ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳಲ್ಲಿ ಮೂಲಭೂತವಾದ ರಾಚನಿಕ ಬದಲಾವಣೆಯೇ ಆಗಬೇಕು. ಅಲ್ಲವೇ? ಆದರೆ ಸಾರದಲ್ಲಿರಲಿ, ರೂಪದಲ್ಲೂ ಈ ಬಗೆಯ ಯಾವುದೇ ಬದಲಾವಣೆಯನ್ನು ನಿರಾಕರಿಸುವ ಪ್ರಜಾಪ್ರಭುತ್ವಗಳು ಸಾರಾಂಶದಲ್ಲಿ ಎಷ್ಟು ನಿರಂಕುಶವಾಗಿವೆ ಎಂಬುದನ್ನೇ ಇದು ಸೂಚಿಸುತ್ತದೆ.

ಮೇಲ್ನೋಟಕ್ಕೆ ಪ್ರಜಾತಾಂತ್ರಿಕವಾಗಿ ಕಾಣುವ ಈ ಪ್ರಭುತ್ವಗಳು ಸಾರದಲ್ಲಿರಲಿ, ರೂಪದಲ್ಲೂ ಈ ಬಗೆಯ ಬದಲಾವಣೆಯನ್ನು ಹೇಗೆ ಹತ್ತಿಕ್ಕುತ್ತವೆ ಎಂಬುದನ್ನು ಪೋರ್ಚುಗೀಸಿನ ನೊಬೆಲ್ ಪ್ರಶಸ್ತಿ ವಿಜೇತ ಜೋಸ್ ಸರ್ಮಾಗೊ ತಮ್ಮ ಇತ್ತೀಚಿನ (2006) ಕಾದಂಬರಿ Seeingನಲ್ಲಿ ಅದ್ಭುತವಾಗಿ ಚಿತ್ರಿಸುತ್ತಾರೆ. ಈ ಪ್ರಜಾತಂತ್ರ ಹುಟ್ಟಿಕೊಂಡ ಹೆಸರಿಲ್ಲದ ಯೂರೋಪ್ ದೇಶದ ಹೆಸರಿಲ್ಲದ ನಗರದಲ್ಲಿ ಆಳ್ವಿಕೆಯಲ್ಲಿದ್ದ ನಿರಂಕುಶ ಪ್ರಭುತ್ವ ಚುನಾವಣೆಯನ್ನು ಘೋಷಿಸುತ್ತದೆ. ಆದರೆ ಚುನಾವಣೆಯ ದಿನ ಸಂಜೆ ನಾಲ್ಕಾದರೂ ಯಾರೊಬ್ಬರೂ ಮತಪೆಟ್ಟಿಗೆಯ ಬಳಿಯೂ ಸುಳಿಯುವುದಿಲ್ಲ. ಆದರೆ ನಂತರ ದೊಡ್ಡ ಸಂಖ್ಯೆಯಲ್ಲಿ ಚುನಾವಣಾ ಕೇಂದ್ರದ ಬಳಿ ತೆರಳುವ ಜನರಲ್ಲಿ ಶೇ.83ರಷ್ಟು ಮತದಾರರು ಖಾಲಿ ಮತಪತ್ರವನ್ನು ಕೊಟ್ಟು ಬರುತ್ತಾರೆ. ಇದನ್ನು ಜನರು ತಮ್ಮ ವಿರುದ್ಧ ಮಾಡುತ್ತಿರುವ ಬಂಡಾಯವೆಂದು ಗ್ರಹಿಸಿದ ಪ್ರಭುತ್ವ ಕೂಡಲೇ ನಗರದಲ್ಲಿ ತುರ್ತುಸ್ಥಿತಿಯನ್ನು ಘೋಷಿಸುವುದಲ್ಲದೆ




ಇಡೀ ನಗರವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುತ್ತಾರೆ. ಈ ರೀತಿ ಬಂಡಾಯಕ್ಕೆ ಕಾರಣರಾದವರನ್ನು ಹಿಡಿದು ಹಾಕಲು ಜನರ ಮೇಲೆ ಹಲವು ಬಗೆಯ ದಮನ ಕ್ರಮಗಳನ್ನು ಪ್ರಯೋಗಿಸುತ್ತಾರೆ. ಲೈ ಡಿಟೆಕ್ಟರನ್ನೂ ಬಳಸುತ್ತಾರೆ. ಅಂತಿಮವಾಗಿ ಈ ಚುನಾವಣಾ ಬಹಿಷ್ಕಾರ ಒಂದು ಟೆರರಿಸ್ಟ್ ಆಕ್ಟ್ ಎಂಬ ತೀರ್ಮಾನಕ್ಕೆ ಬರುತ್ತಾರೆ!

ಇದು ಒಂದು ಕಲ್ಪಿತ ಕಾದಂಬರಿಯೇ ಆಗಿದ್ದರೂ ನಮ್ಮ ಪ್ರಜಾತಂತ್ರಗಳು ರೂಪಮಾತ್ರದ ಬದಲಾವಣೆಯನ್ನು ಹೇಗೆ ಸಹಿಸುವುದಿಲ್ಲ ಎಂಬುದಕ್ಕೆ ಉದಾಹರಣೆಯಾಗಿದೆ. ತಮ್ಮ ಅಸ್ತಿತ್ವಕ್ಕೆ ಧಕ್ಕೆ ಬಂದರೆ ಶೇ.83ರಷ್ಟು ಜನತೆಯನ್ನೇ ಟೆರರಿಸ್ಟರೆನ್ನಬಹುದಾದ ಪ್ರಭುತ್ವಗಳೇ ನಮ್ಮನ್ನೂ ಆಳುತ್ತಿವೆಯಲ್ಲವೇ? ■




# ಸವಾಲಿನಡಿಯಲ್ಲಿ ಬದುಕುತ್ತಿವೆ ಈಗಿನ ಪತ್ರಿಕೆಗಳು

ಇನ್ನು ಕೆಲವೇ ದಿನಗಳಲ್ಲಿ ಈ ರಾಜ್ಯದಲ್ಲಿ ಚುನಾವಣೆ ನಡೆಸಲು ಸಕಲ ರೀತಿಯ ಸಿದ್ಧತೆಗಳು ಸಾಗುತ್ತಿರುವ ಬೆನ್ನಲ್ಲೆ ರಾಜಕೀಯ ಪಕ್ಷಗಳು ಗೆಲ್ಲುವ ಅಭ್ಯರ್ಥಿಗಳ ತಲಾಶಿನಲ್ಲಿವೆ. ಆದರೆ ಯಾವ ಪಕ್ಷಗಳು ಸೈದ್ಧಾಂತಿಕ ನಿಲುವುಗಳನ್ನು ಆಯ್ಕೆ ಮಾಡಿಕೊಳ್ಳದೆ, ಕೇವಲ ಭ್ರಷ್ಟರು, ನೆಲಹಿಡುಕರು, ತಲೆಹಿಡುಕರನ್ನು ಮತ್ತು ಹಣವನ್ನ ನೆಚ್ಚಿಕೊಂಡು ಜನರ ಮುಂದೆ ಬರುತ್ತಿರುವುದನ್ನ ಈ ವಾರದ ಪತ್ರಿಕೆಯಲ್ಲಿ ಸಾಧ್ಯಂತವಾಗಿ ತಿಳಿಸಿದ್ದಕ್ಕೆ ಧನ್ಯವಾದಗಳು. ಇನ್ನು ವಿಚಾರವಂತರು, ಪ್ರಜ್ಞಾವಂತರು, ಜನಸಾಮಾನ್ಯರನ್ನು ಹೇಗೆ ಎಚ್ಚರಗೊಳಿಸಿ ಈ ನಾಡನ್ನ ಇಂತಹ ಸಂಕೋಲೆಗಳಿಂದ ಬಿಡುಗಡೆ ಮಾಡಬಹುದು ಎನ್ನುವುದನ್ನು ಚಿಂತಿಸಬೇಕಾಗಿದೆ. ಕೋಮುವಾದ, ಭ್ರಷ್ಟಾಚಾರ, ಅಕ್ರಮಗಳಿಕೆ, ಮಾಫಿಯಾ ಮತ್ತು ಫ್ಯೂಡಲ್‌ತನಗಳಿಂದ ಇಡೀ ರಾಜ್ಯವನ್ನ ಮುಕ್ತಗೊಳಿಸಲು ಜನಪರ ಸಂಘಟನೆಗಳು, ಸಂಸ್ಥೆಗಳು ಮತ್ತು ಸಾಮಾಜಿಕ ಕಾಳಜಿಯನ್ನು ಹೊತ್ತವರು ಒಂದುಗೂಡುವುದು ಇಂದಿನ ತುರ್ತಿನ ಅಗತ್ಯವಾಗಿದೆ. ಪತ್ರಿಕೆಯಂತೆ ನಾವೆಲ್ಲರೂ ಹೋರಾಟ ಮಾಡುವ ಜವಾಬ್ದಾರಿಯನ್ನ ಹೊರಬೇಕಾಗಿದೆ.

-ಸಿದ್ದರಾಜು ಪಿ. ಅಂಬಾದಹಳ್ಳಿ

ಮಾರ್ಚ್ 19ರ ವಿಶೇಷಾಂಕದಲ್ಲಿ ಮೂಡಿ ಬಂದ 'ಕನ್ನಡ ದಿನ ಪತ್ರಿಕೆಗಳು ಮತ್ತು ಸವಾಲುಗಳು' ಎಂಬ ಲೇಖನ ಪ್ರಸ್ತುತ ದೈನಿಕ ಪತ್ರಿಕೆಗಳ ಸುದ್ದಿ ಪ್ರಕಟಿಸುವ ಬಗೆಗಿನ ಹೀನಾಯ ಸ್ಥಿತಿಯನ್ನು ಹಾಗೂ ಪತ್ರಿಕೋದ್ಯಮ ವಿದ್ಯಾರ್ಥಿಗಳ ನಿರ್ಲಜ್ಜ ನಡವಳಿಕೆಯನ್ನು ಎತ್ತಿ ತೋರಿಸಿದೆ. ಈಗಿರುವ ದೈನಿಕಗಳು(ಕೆಲವು) ಪತ್ರಿಕೋದ್ಯಮದ ನಿಜವಾದ ಧ್ಯೇಯಗಳನ್ನು ಗಾಳಿಗೆ ತೂರಿ, ತಮ್ಮದೇ ಆದ ರೀತಿ- ಸಿದ್ಧಾಂತಗಳನ್ನು ಸೃಷ್ಟಿಸಿ ಈ ಮೂಲಕ ಸುದ್ದಿಯನ್ನು ತಿರುಚಿ ಬರೆಯೋದು ಪತ್ರಿಕೋದ್ಯಮಕ್ಕೆ ವಿರುದ್ಧವೆನಿಸುತ್ತದೆ.


'ಸಮಾಜವನ್ನು ಬೆಂಕಿ ಕೆಂಡಗಳಿಂದ ರಕ್ಷಿಸುವುದೇ ಪತ್ರಿಕೆಗಳು' ಎಂಬ ಮಾತು ಈಗಿನ ಪತ್ರಿಕೆಗಳಿಗೆ ಅನ್ವಯವಾಗಲ್ಲ, ಬದಲು ಹೀಗೆ ಹೇಳಬಹುದು 'ಸಮಾಜದಲ್ಲಿಂದು ಬೆಂಕಿಕೆಂಡಗಳನ್ನು ನಿರ್ಮಿಸುತ್ತಿರುವುದೇ ಪತ್ರಿಕೆಗಳು'. ಇಂತಹ ಸವಾಲುಗಳೆಡೆಯಲ್ಲಿ ಪತ್ರಿಕೋದ್ಯಮ ವಿದ್ಯಾರ್ಥಿಗಳು ಪತ್ರಿಕಾ ಕಚೇರಿಯನ್ನ ಕೇವಲ ಬಸ್‌ಸ್ಟಾಪ್ ಅಂತ ತಿಳಿಯುವುದು ನನ್ನ ಮಟ್ಟಿಗೆ ಸುಳ್ಳು. ಈ ರೀತಿ ಎಲ್ಲಾ ವಿದ್ಯಾರ್ಥಿಗಳು ಮಾಡಲ್ಲ, ಆದರೆ ತಮಗೆ ದೊರಕುತ್ತಿರುವ ವೇತನ/ಸೌಲಭ್ಯ ಮುಂತಾದ ತೊಂದರೆಗಳನ್ನ ಪತ್ರಿಕಾ ಕಚೇರಿಯಲ್ಲಿ ಎದುರಿಸಲಾಗದೇ ಪತ್ರಿಕೋದ್ಯಮ ವಿದ್ಯಾರ್ಥಿಗಳು ಪಿಆರ್/ಜಾಹೀರಾತು; ಚಾನೆಲ್ ಸಂಸ್ಥೆಗೆ ಉದ್ಯೋಗಕ್ಕಾಗಿ ಹೊರಡುವುದು ಸಾಮಾನ್ಯವಾಗಿಬಿಟ್ಟಿದೆ. ಈಗಿರುವ ದೈನಿಕಗಳು ಹವ್ಯಾಸಿ ಬರಹಗಾರರಿಗೆ ಸಂಪೂರ್ಣ ಸಂಭಾವನೆ ನೀಡ್ತಾನೆ ಇಲ್ಲ. ಇದಕ್ಕೆ ಅವರ ಉತ್ತರ ಶೂನ್ಯ ಇದು ಸಹ ಪತ್ರಿಕಾ ಸಂಸ್ಥೆಗೆ ಸವಾಲಾಗಿದೆ. ಒಟ್ಟನಲ್ಲಿ ಬಲಪಂಥೀಯ ಪತ್ರಿಕೆಗಳು ಸುದ್ದಿಯನ್ನು ತಿರುಚಿ ಬರೆಯುತ್ತಿವೆ. ಆದರೆ ಎಡಪಂಥೀಯ ಪತ್ರಿಕೆಗಳು ಸತ್ಯಕ್ಕಾಗಿ ಅನ್ವೇಷಣೆ ನಡೆಸ್ತಾ ಇವೆ ಅನ್ನಬಹುದು.

-ಶಂಶೀರ್, ಬುದೋಳಿ




ಇನ್ನೊಮ್ಮೆ ನಮ್ಮ ಹಿಂದೂ ನಾಯಕರ ಬಗ್ಗೆ, ಹಿಂದೂಗಳ ಬಗ್ಗೆ ಕೆಟ್ಟದಾಗಿ ಬರೆದ್ರೆ ನಿನ್ನ ಮರ್ಡರ್ ನಿಮ್ಮ ಆಫೀಸ್‌ನಲ್ಲೇ ಮಾಡ್ತೇವೆ, ಎಚ್ಚರ, ಎಚ್ಚರ, ಎಚ್ಚರ, ಎಚ್ಚರ. ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್ ಜೊತೆ ನಿನ್ನ ಹೆಣ ಬೀಳುತ್ತದೆ.

-ಜೈ ಹಿಂದೂ, ಜೈ ಶ್ರೀರಾಮ್, ಜೈ ಭಾರತ್ ಮಾತಾ.



ಈ ವಾರದ ತಮ್ಮ ಪತ್ರಿಕೆಯಲ್ಲಿ ಗದಗದಲ್ಲಿ 'ಕರ್ನಾಟಕದ ಗೋಡ್ಸೆ' ಪ್ರಮೋದ ಮುತಾಲಿಕ್ ನಡೆಸಿದ 'ತ್ರಿಶೂಲ ದೀಕ್ಷೆ' ಮತ್ತು ಆ ತ್ರಿಶೂಲ ದೀಕ್ಷೆಯನ್ನು ವಿರೋಧಿಸಿ ನಡೆದ ಜಾತ್ಯತೀತರ ಒಗ್ಗಟ್ಟಿನ ಜೀವಪರ ಹೋರಾಟದ ಕುರಿತ ವರದಿ ಪ್ರಕಟವಾಗಿದೆ. ಕರ್ನಾಟಕದಲ್ಲಿ ನಡೆದಿರುವ ಕೋಮುವಾದ ವಿರೋಧಿ ಹೋರಾಟದಲ್ಲಿ 'ಲಂಕೇಶ್' ವಾರಪತ್ರಿಕೆ ಮಹತ್ವದ ಪಾತ್ರವನ್ನಿಡುತ್ತಿದೆ. ಮೊನ್ನೆ ಗದಗದಲ್ಲಿ ನಡೆದ ತ್ರಿಶೂಲ ದೀಕ್ಷೆ ಎಂಬ ಭಯೋತ್ಪಾದಕ ಚಟುವಟಿಕೆಯನ್ನು ಜಿಲ್ಲಾಡಳಿತವೇ ಖುದ್ದಾಗಿ ನಿಷೇಧಿಸುವಂತೆ ಒತ್ತಾಯ ಹೇರಿ ಬೀದಿಗಿಳಿದಿದ್ದು ಮತ್ತು ಮುತಾಲಿಕನ ತ್ರಿಶೂಲ ದೀಕ್ಷೆಯನ್ನು ಫ್ಲಾಪ್ ಮಾಡಿದ್ದು, ಕರ್ನಾಟಕ ಸೌಹಾರ್ದ ವೇದಿಕೆ. ಆದರೆ ತಮ್ಮ ಪತ್ರಿಕೆಯಲ್ಲಿ ಪ್ರಕಟವಾದ ವರದಿಯಲ್ಲಿ 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ'ಯ ಹೆಸರನ್ನು ದಾಖಲಿಸಲಾಗಿದೆ. ಇದನ್ನು ನಿಮ್ಮ ಗಮನಕ್ಕೆ ತರಲು ಈ ಪತ್ರವನ್ನು ಬರೆಯುತ್ತಿದ್ದೇವೆ.

-ಬಸವರಾಜ ಸೂಳಿಭಾವಿ, ರಾಚಪ್ಪ ಹಡಪದ, ಇರ್ಫಾನ್ ಮುದಗಲ್,
ಕೇಂದ್ರ ಸಮಿತಿ ಸಂಚಾಲಕರು, ಕರ್ನಾಟಕ ಸೌಹಾರ್ದ ವೇದಿಕೆ, ಗದಗ

ಕಳೆದ ವಾರದ ಮುಖಪುಟ ವರದಿ 'ಗಣಿ ರೆಡ್ಡಿಗಳ ಗಾಂಚಾಲಿ' ಎಂಬ ವರದಿಯನ್ನು ಓದಿದೆ. ಇಡೀ ಬಳ್ಳಾರಿ ಜಿಲ್ಲೆ 'ಗಣಿ' ಧೂಳಿನಿಂದ ತತ್ತರಿಸಿ ಹೋಗಿದೆ. ಇಡೀ ಜಿಲ್ಲೆ ಧೂಳೋ ಧೂಳು. ಅಕ್ಕಪಕ್ಕದ ಹಳ್ಳಿಗಳು, ಮನೆ, ಹೊಲಗಳು, ಬೆಳೆಗಳು ಧೂಳುಮಯವಾಗಿವೆ. ಜನರ ಆರೋಗ್ಯಕ್ಕೂ ಹಾನಿಯುಂಟಾಗಿದೆ. ಇವೆಲ್ಲಾ ಈ 'ಗಣಿ' ಧಣಿಗಳಿಗೆ ಅರ್ಥವಾಗುತ್ತಿಲ್ಲ. ಇವರ ಗಣಿ ಲೂಟಿಯಿಂದ ಜನಸಾಮಾನ್ಯರ ಬವಣೆ ಹೇಳತೀರದಾಗಿದೆ.

ಬಳ್ಳಾರಿ ಸೇರಿದಂತೆ ರಾಯಚೂರು, ಗದಗ, ಕೊಪ್ಪಳ, ಚಿತ್ರದುರ್ಗ, ತುಮಕೂರು ಜಿಲ್ಲೆಗಳೂ ಗಣಿ ಲೂಟಿಯಿಂದ ಹೊರತಾಗಿಲ್ಲ. ಇದರಿಂದ ರಾಜ್ಯಕ್ಕೆ, ದೇಶಕ್ಕೆ ಅಪಾರವಾದ ನಷ್ಟವೇ. ಇದರ ಜೊತೆಗೆ ಸರ್ಕಾರದ ಎಲ್ಲ ಇಲಾಖೆಗಳು ಭ್ರಷ್ಟಾಚಾರದ ಕೂಪಗಳಾಗಿವೆ. ಹೊಲಸು ರಾಜಕೀಯದಿಂದ ನಾಡು ಹದಗೆಟ್ಟಿದೆ. ಇನ್ನಾದರೂ ನಾಡಿನ ಪ್ರಜ್ಞಾವಂತರು, ಪ್ರಗತಿಪರರು, ಬುದ್ಧಿಜೀವಿಗಳು, ಸಾಹಿತಿಗಳು ಜನಪರವಾದ ಪಕ್ಷವನ್ನು ಚುನಾಯಿಸಲಿ ಎಂಬುದು ನನ್ನ ಆಶಯ.

-ದಿ.ಎಲ್. ನಾಗರಾಜ್, ಹರಪನಹಳ್ಳಿ

# ಅರಳಿದ ಅಂಗಳದ ಹೂಗಳು

ಕನ್ನಡ ಚಿತ್ರರಂಗದಲ್ಲಿ ಸದ್ಯಕ್ಕೆ ನಮ್ಮ ಅಂಗಳದ ಹೂಗಳೇ ಕಂಗೊಳಿಸುತ್ತಿದ್ದಾವೆ. ಅವರೆಲ್ಲರ ಕಿರು ಪರಿಚಯ ಇಲ್ಲಿದೆ.

## ಶುಭಾ ಎಂಬ ಬಿಂದಾಸ್ ಹುಡುಗಿ



ಹೊಸದಾಗಿ ಬಂದಿರುವ ಕನ್ನಡತಿಯರಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲುವವಳು ಕರಾವಳಿ ತೀರದ ಶುಭಾ ಪೂಂಜಾ. ಈಕೆ ನಟಿಸಿದ ಮೊದಲ ಚಿತ್ರ 'ಚಂದ' ಅಷ್ಟೇನೂ ಯಶಸ್ವಿಯಾಗದಿದ್ದರೂ ಈಗ ಕನಿಷ್ಟವೆಂದರೂ ಹತ್ತು ಚಿತ್ರಗಳಿಗೆ ಬುಕ್ ಆಗಿದ್ದಾಳೆ. ನಟನೆಯಲ್ಲಿ ಈಕೆ ಇನ್ನಷ್ಟು ಪಳಗಬೇಕಾದರೂ ಒಬ್ಬ ನಟಿಗೆ ಬೇಕಾದ ಸೌಂದರ್ಯ ಮತ್ತು ಮೈಕಟ್ಟು ಈಕೆಗಿದೆ. ಮೈಚಳಿ ಬಿಟ್ಟು ನಟಿಸುವ ಧೈರ್ಯವನ್ನೂ ಹೊಂದಿದ್ದಾಳೆ. ಶುಭಾಳ ಪಾಲಿಗೆ ಈ ಚಿತ್ರರಂಗ ಶುಭವಾದರೂ ಆಶ್ಚರ್ಯವಿಲ್ಲ.

## 'ಸಜನಿ'ಯ ಚೆಲುವೆ ಶರ್ಮಿಳಾ



ಕನ್ನಡದ ಮತ್ತೋರ್ವ ಬೆಡಗಿಯೆಂದರೆ ಶರ್ಮಿಳಾ ಮಾಂಡ್ರೆ. ಈಕೆ ಜನಪ್ರಿಯ ಪಂಚಿಕೆದಾರ ಮಾಂಡ್ರೆ ಅವರ ಮೊಮ್ಮಗಳು. ಈಕೆಯನ್ನು ಲಾಂಚ್ ಮಾಡುವ ಉದ್ದೇಶದಿಂದಲೇ 'ಸಜನಿ' ಎಂಬ ಅದ್ದೂರಿ ಚಿತ್ರವನ್ನು ನಿರ್ಮಿಸಿದರು. ಕೋಟ್ಯಂತರ ರೂಪಾಯಿ ಸುರಿದು ಲಂಡನ್‌ನಲ್ಲಿ ಇದರ ಚಿತ್ರೀಕರಣ ಮಾಡಿದರೂ ಈಕೆ ಪ್ರೇಕ್ಷಕರ ಮನಗೆಲ್ಲಲು ಸಾಧ್ಯವಾಗಲಿಲ್ಲ.

ಈಕೆ ಕನ್ನಡತಿಯಾದರೂ ಕನ್ನಡ ಮಾತಾಡಲು ಸ್ವಲ್ಪ ತೊದಲುತ್ತಾಳೆ. ಈಕೆಯ ವೇಶ ಭೂಷಣಗಳೆಲ್ಲವೂ ಬಾಲಿವುಡ್ ನಟಿಯರಿಗಿಂತಲೂ ಸೂಪರ್ ಆಗಿರುತ್ತದೆ. ಈಕೆಯ ಮೈಕಟ್ಟು, ಉಡುಪು ಇವೆಲ್ಲವೂ ಆಕೆಯ ಸೌಂದರ್ಯವನ್ನು ದ್ವಿಗುಣಗೊಳಿಸುತ್ತವೆ. 'ಸಜನಿ' ಬಾಕ್ಸಾಫೀಸಿನಲ್ಲಿ ಗೆಲ್ಲದಿದ್ದರೂ ಈಕೆಗೆ ಗಣೇಶ್ ಜೊತೆ ನಾಯಕಿಯಾಗಿ ನಟಿಸುವ ಸೌಭಾಗ್ಯ 'ಕೃಷ್ಣ'ದಲ್ಲಿ ಒದಗಿಬಂತು. 'ಕೃಷ್ಣ' ಮತ್ತು ಗಣೇಶನ ಕೃಪೆಯಿಂದ ಈಕೆ ಈಗ ಕರ್ನಾಟಕದ ಮನೆಮಾತಾಗಿದ್ದಾಳೆ. ಅದಾದನಂತರ ಬಂದ 'ಈ ಬಂಧನ' ಚಿತ್ರದಲ್ಲೂ ಈಕೆ ಯುವ ನಾಯಕನಟ ತರುಣ್ ಜೊತೆ ಹಾಡೊಂದರಲ್ಲಿ ಮೈಕೈ ಕುಣಿಸಿ ಪಡ್ಡೆ ಹುಡುಗರ ಕಣ್ಮಣಿಯಾಗಿದ್ದಾಳೆ.

ಈಕೆಗೆ ಸದ್ಯಕ್ಕೆ ಅಷ್ಟೊಂದು ಅವಕಾಶಗಳು ಸಿಗದಿದ್ದರೂ ನಿಧಾನವಾಗಿ ಒಂದೊಂದೇ ಮೆಟ್ಟಿಲು ಏರುತ್ತಿರುವ ಈ ಬೆಡಗಿ ಸದ್ಯದಲ್ಲೇ ಸಾಹಸಪ್ರಧಾನವಾದ ಚಿತ್ರವೊಂದರಲ್ಲಿ ನಟಿಸುತ್ತಾಳಂತೆ.

## ಚುಂಬಕ ನಾಯಕಿ ಸ್ಮಿತಾ



ಕೃಷ್ಣವರ್ಣ ಸುಂದರಿ ಸ್ಮಿತಾ ಬಗ್ಗೆ ಉದ್ಯಮದಲ್ಲಿ ವಿಚಿತ್ರವಾದ ಕುತೂಹಲವಿದೆ. ಒಬ್ಬ ನಾಯಕಿಗೆ ಬೇಕಾದ ಸಪೂರ ಮೈಕಟ್ಟಿನ ಬದಲು ಈಕೆ ದಷ್ಟಪುಷ್ಟವಾಗಿದ್ದಾಳೆ. ಇದೇ ಆಕೆಯ ಪಾಲಿಗೆ ಪ್ಲಸ್ ಪಾಯಿಂಟೂ ಆಗಬಹುದು ಅಥವಾ ಮೈನಸ್ಸೂ ಆಗಬಹುದು.

ನಾಗ್ತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಮಾತಾಡ್ ಮಾತಾಡ್ ಮಲ್ಲಿಗೆ'ಯಲ್ಲಿ ಪುಟ್ಟ ಪಾತ್ರದಿಂದ ಗಮನ ಸೆಳೆದ ಈ ಸ್ಮಿತಾ ಈಗ ಕವಿತಾ ಲಂಕೇಶ್ ಅವರ 'ಅವ್ವ' ಚಿತ್ರದಿಂದ ಇಡೀ ಉದ್ಯಮದ ಗಮನ ಸೆಳೆದಿದ್ದಾಳೆ ಮಾತ್ರವಲ್ಲ ತಾರಾವರ್ಚಸ್ಸು ಕೂಡಾ ಸಂಪಾದಿಸಿದ್ದಾಳೆ. ಈ ಚಿತ್ರದಲ್ಲಿ ನಾಯಕನಟ ವಿಜಯ್‌ಗೆ ಎರಡು ಮೂರು ಬಾರಿ ಚುಂಬಿಸುವ ಮೂಲಕ ತನ್ನ ದಿಟ್ಟತನವನ್ನು ಪ್ರದರ್ಶಿಸಿದ ಈಕೆ ನಟನೆಯಲ್ಲೂ ಎತ್ತಿದ ಕೈ. ಸೌಂದರ್ಯ ಮತ್ತು ಭಾವಪೂರ್ಣ ಕಣ್ಣುಗಳನ್ನು ಹೊಂದಿರುವ ಸ್ಮಿತಾ ಮುಂದೊಂದು ದಿನ ಕನ್ನಡದ 'ಜೂನಿಯರ್ ರೇಖಾ' ಎಂದೆನಿಸಿಕೊಂಡರೂ ಆಶ್ಚರ್ಯವಿಲ್ಲ.

## ನಿಂಬೆಹಣ್ಣಿನಂಥ ನೀತು



ನೀತು ಎಂಬ ನಿಂಬೆಹಣ್ಣಿನಂಥಾ ಹುಡುಗಿ ಕೂಡಾ ನಾಯಕಿಯಾಗಿ ಮೆರೆಯುವತ್ತ ದಾಪುಗಾಲು ಹಾಕುತ್ತಿದ್ದಾಳೆ. ಈಕೆ ಮೊದಲು ನಾಯಕಿಯಾಗಿ ಕಾಣಿಸಿಕೊಂಡಿದ್ದು 'ಜೋಕ್ ಫಾಲ್ಸ್' ಚಿತ್ರದಲ್ಲಾದರೂ ಈಕೆ ಸೋಲೋ ನಾಯಕಿಯಾಗಿ ಮೆರೆದಿದ್ದು 'ಪೂಜಾರಿ' ಚಿತ್ರದಲ್ಲಿ. ಆ ಚಿತ್ರದ ಹಾಡೊಂದರಲ್ಲಿ ಬಿಂದಾಸ್ ಆಗಿ ಕುಣಿದು ಕುಪ್ಪಳಿಸಿದ ನಂತರ ಈಕೆಗೆ ಸ್ಟಾರ್ ವ್ಯಾಲ್ಯೂ ಬಂತು. ಆದಾದ ನಂತರ ಯೋಗರಾಜ್ ಭಟ್ ನಿರ್ದೇಶನದ 'ಗಾಳಿಪಟ' ಚಿತ್ರದಲ್ಲಿ ದಿಗಂತ್ ಜೋಡಿಯಾಗಿ ನಟಿಸಿ ಸೈ ಎನಿಸಿಕೊಂಡಳು. ತುಳು ಚಿತ್ರವೊಂದರ ನಟನೆಗಾಗಿ ರಾಜ್ಯಪ್ರಶಸ್ತಿಯನ್ನೂ ಪಡೆದಿರುವ ನೀತು ಮಲಯಾಳಂನಲ್ಲಿ ಮಮ್ಮುಟಿ ಜೊತೆ ಕೂಡಾ ನಟಿಸಿದ್ದಾಳೆ.

## ಬೊಗಸೆ ಕಂಗಳ ತೇಜಸ್ವಿನಿ



ತೇಜಸ್ವಿನಿ ಎಂಬ ಹುಡುಗಿ ಈಗಾಗಲೇ ತನಗೆ ದೊರೆತಿರುವ ಒಂದೆರಡು ಚಿತ್ರಗಳಲ್ಲಿ ತನ್ನ ಪ್ರತಿಭೆಯನ್ನು ಪ್ರದರ್ಶಿಸಿದ್ದಾಳೆ. 'ಮಾತಾಡ್ ಮಾತಾಡು ಮಲ್ಲಿಗೆ'ಯ ಪುಟ್ಟ ಪಾತ್ರದಲ್ಲಿ ಗಮನ ಸೆಳೆದ ಈಕೆ 'ಮಸಣದ ಮಕ್ಕಳು' ಎಂಬ ಕಲಾತ್ಮಕ ಚಿತ್ರದಲ್ಲಿ ತನ್ನ ಪ್ರತಿಭೆಯನ್ನು ಪ್ರದರ್ಶಿಸಿ ವಿಮರ್ಶಕರ ಮೆಚ್ಚುಗೆಗೂ ಪಾತ್ರಳಾಗಿದ್ದಾಳೆ. ಇದೀಗ ಶಿವರಾಜ್ ಕುಮಾರ್‌ರವರ ತಂಗಿಯಾಗಿ 'ಬಂಧು ಬಳಗ' ಚಿತ್ರದಲ್ಲಿ ನಟಿಸಿರುವ ಈಕೆ ಬಹಳ ದೊಡ್ಡ ಬ್ರೇಕ್ ನಿರೀಕ್ಷಿಸುತ್ತಿದ್ದಾಳೆ.

ಈಕೆಯ ಬೊಗಸೆ ಕಣ್ಣುಗಳು, ಫ್ರೆಶ್ ಮುಖ ಮತ್ತು ಗುಲಾಬಿ ದಳಗಳಂಥ ತುಟಿಗಳು ಮತ್ತು ನೀಳವಾದ ಮೈಕಟ್ಟು.... ಇವೆಲ್ಲವೂ ಒಬ್ಬ ನಾಯಕಿಗೆ ಬೇಕಾದವುಗಳು. ಹೀಗಾಗಿ ಈಕೆ ಹೀರೋಯಿನ್ ಮೆಟೀರಿಯಲ್ ಎಂದು ಹೇಳಬಹುದು.

## ರಶ್ಮಿಯ ದುನಿಯಾ



'ದುನಿಯಾ'ಕ್ಕಿಂತ ಮೊದಲು 'ಕಲ್ಲರಳಿ ಹೂವಾಗಿ' ಚಿತ್ರದಲ್ಲಿ ಒಂದು ಪುಟ್ಟ ಪಾತ್ರದಲ್ಲಿ ಈಕೆ ಕಾಣಿಸಿಕೊಂಡಿದ್ದಳು. ಆದರೆ 'ದುನಿಯಾ'ದ ಯಶಸ್ಸು ಈಕೆಯ ದುನಿಯಾವನ್ನೇ ಬದಲಾಯಿಸಿ ಬಿಟ್ಟಿದೆ. ಇದೀಗ ಶೃತಿ ಜೊತೆ 'ಅಕ್ಕ ತಂಗಿ' ಎಂಬ ಚಿತ್ರದಲ್ಲಿ ನಟಿಸಿರುವ ರಶ್ಮಿ ಮತ್ತೊಂದೆಡೆ 'ಮಂದಾಕಿನಿ' ಎಂಬ ಚಿತ್ರದಲ್ಲಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾಳೆ. ರಶ್ಮಿ ಕೂಡಾ ಕನ್ನಡದಲ್ಲೇ ಮೊಕ್ಕಾಂ ಹೂಡುವ ಎಲ್ಲಾ ಲಕ್ಷಣಗಳೂ ಕಾಣಿಸುತ್ತಿದೆ.

## ಹರಿಪ್ರಿಯಾ ಎಂಬ ಭವಿಷ್ಯದ ಸ್ಟಾರ್



ಕಮರ್ಷಿಯಲ್ ಚಿತ್ರದ ನಿರ್ಮಾಪಕ, ನಿರ್ದೇಶಕರ ಕಣ್ಣುಗಳು ಈಗ ಹರಿಪ್ರಿಯಾ ಎಂಬ ಹದಿನೆಂಟರ ಹರೆಯದ ಹುಡುಗಿಯ ಮೇಲಿದೆ. ಈಕೆ ನಟಿಸಿದ ಒಂದೇ ಒಂದು ಚಿತ್ರ 'ಮನಸುಗಳ ಮಾತು ಮಧುರ' ಬಿಡುಗಡೆಯಾಗಿದೆ. ಅದರಲ್ಲಿ ಈಕೆ ಅಂತಹ ಅದ್ಭುತ ನಟನೆಯನ್ನೇನೂ ತೋರಿಸಿಲ್ಲ. ಆದರೂ ಉದ್ಯಮದವರು ಆಕೆಯ ಮೇಲೆ ಬಾಜಿ ಕಟ್ಟಲು ತುದಿಗಾಲ ಮೇಲೆ ನಿಂತಿದ್ದಾರೆ. ಸದ್ಯಕ್ಕೆ ಈಕೆ ಮೂರ್ನಾಲ್ಕು ಚಿತ್ರಗಳಲ್ಲಿ ನಟಿಸುತ್ತಿದ್ದು ಯಾವುದಾದರೂ ಒಂದು ಹಿಟ್ ಆದರೂ ಈಕೆ ಸ್ಟಾರ್ ಆಗುವುದರಲ್ಲಿ ಸಂಶಯವಿಲ್ಲ. ಈಕೆಯನ್ನು ಉದ್ಯಮದ ಜನರೆಲ್ಲಾ ಈಗಾಗಲೇ 'ಜೂನಿಯರ್ ರಾಧಿಕಾ' ಎಂದು ನಾಮಕರಣ ಮಾಡಿದ್ದಾರೆ. ಚೆಲುವು, ವೈಯ್ಯಾರ ಮತ್ತು ಮುಗ್ಧತೆಯನ್ನು ಮೇಳೈಸಿರುವ ಹರಿಪ್ರಿಯಾ ಭವಿಷ್ಯದ ನಟಿ.

## ಅಮೂಲ್ಯ ಎಂಬ ಮುತ್ತು



ಈ ಎಲ್ಲ ನಟಿಯರ ನಡುವೆ ಈಗಾಗಲೇ ಸ್ಟಾರ್ ವ್ಯಾಲ್ಯೂ ಪಡೆದಿರುವ ನಟಿ ಅಮೂಲ್ಯ. ಎಸ್. ನಾರಾಯಣ್ ನಿರ್ದೇಶನದ 'ಚೆಲುವಿನ ಚಿತ್ತಾರ' ಚಿತ್ರವೊಂದರಿಂದಲೇ ಈಕೆ ಸ್ಟಾರ್ ಆದಳು. ಇದೀಗ ಮತ್ತೆ ಅದೇ ನಾರಾಯಣ್ ಜೊತೆ 'ಚೆಲುವಿನ ಚಂದ್ರಮ' ಎಂಬ ಚಿತ್ರದಲ್ಲಿ ನಟಿಸುತ್ತಿದ್ದಾಳೆ. ಅಮೂಲ್ಯಳಿಗೆ ಈಗಾಗಲೇ ಅಪಾರ ಸಂಖ್ಯೆಯ ಅಭಿಮಾನಿಗಳೂ ಇದ್ದಾರೆ. ಇನ್ನೂ ಒಂಭತ್ತನೇ ತರಗತಿ ಓದುತ್ತಿರುವ ಈಕೆ ನಟನೆಯನ್ನು ವೃತ್ತಿಯಾಗಿ ಮತ್ತು ಗಂಭೀರವಾಗಿ ಪರಿಗಣಿಸಿಲ್ಲದ ಕಾರಣ ಬೇಸಿಗೆ ರಜೆಯಲ್ಲಿ ಮಾತ್ರ ನಟಿಸುತ್ತಿದ್ದಾಳೆ. ತನ್ನ ಪ್ರತಿಭೆಯನ್ನು ಮೊದಲ ಚಿತ್ರದಲ್ಲೇ ಪ್ರದರ್ಶಿಸಿರುವ ಅಮೂಲ್ಯ ಚಿತ್ರರಂಗಕ್ಕೆ ಆಸ್ತಿಯಾಗಬಲ್ಲಳೇ? ನೋಡೋಣ.

ಹೀಗೆ ಕನ್ನಡ ಚಿತ್ರರಂಗದಲ್ಲಿ ಕನ್ನಡದ ಹುಡುಗಿಯರೇ ಸಾಲು ಸಾಲಾಗಿ ಬರುತ್ತಿರುವುದು ಸಂತೋಷದ ವಿಷಯ. ಎರಡು ವರ್ಷದ ಹಿಂದೆ ನಮ್ಮ ಪಾಲಿಗೆ ರಮ್ಯಾ-ರಕ್ಷಿತಾ-ರಾಧಿಕಾ ಬಿಟ್ಟರೆ ಬೇರೆ ಯಾರೂ ಕನ್ನಡದ ಹುಡುಗಿಯರೇ ಕಾಣಿಸುತ್ತಿರಲಿಲ್ಲ. ಈಗ ಗಾಂಧಿನಗರದಲ್ಲಿ ಎಲ್ಲಿ ನೋಡಿದರೂ ಕನ್ನಡದ ನಾಯಕಿಯರದೇ ರಾಜ್ಯಭಾರ. ಆದರೆ ದುರದೃಷ್ಟದ ಸಂಗತಿಯೆಂದರೆ ಇವರ್‍ಯಾರಿಗೂ ದೊಡ್ಡ ದೊಡ್ಡ ನಾಯಕರೊಂದಿಗೆ ನಟಿಸಲು ಅವಕಾಶಗಳು ಸಿಗುತ್ತಿಲ್ಲ. ಅವೆಲ್ಲವೂ ಕನ್ನಡತಿ ಎಂದು ಸ್ವಯಂ ಘೋಷಿಸಿಕೊಳ್ಳುತ್ತಿರುವ ಪೂಜಾ ಗಾಂಧಿಯ ಪಾಲಾಗುತ್ತಿವೆ. ಪೂಜಾಳ ಸ್ಥಾನವನ್ನು ನಿಜವಾದ ಕನ್ನಡತಿಯರು ಆಕ್ರಮಿಸಿಕೊಳ್ಳುವರೇ? ನೋಡಬೇಕಿದೆ....

■ ಸದಾಶಿವ ಶೆಣೈ



ತಮಿಳು ಚಿತ್ರರಂಗದವರ


# ವಿಚ್ಛೇದನದ ಹಾದಿ

ತಮಿಳು ಚಿತ್ರರಂಗಕ್ಕೂ ವಿಚ್ಛೇದನಕ್ಕೂ ಬಹಳ ಅನ್ಯೋನ್ಯ ಸಂಬಂಧವಿದ್ದಂತೆ ಕಾಣುತ್ತಿದೆ. ಅಲ್ಲಿನ ಬಹುತೇಕ ತಾರಾ ಜೋಡಿಗಳ ಖಾಸಗಿ ಬದುಕು ಇಂದು ವಿಚ್ಛೇದನದ ಹಂತಕ್ಕೆ ತಲುಪಿದೆ.



ಕಮಲ ಹಾಸನ್‌ನಂಥ ಮಹಾನ್ ನಟ ಮೊದಲಿಗೆ ನಾಟ್ಯ ಕಲಾವಿದೆ ವಾಣಿ ಗಣಪತಿಯನ್ನು ಮದುವೆಯಾಗಿದ್ದ. ಆಕೆಯೊಂದಿಗಿನ ಸಂಬಂಧ ಮುರಿದುಬಿದ್ದ ಮೇಲೆ ನಟಿ ಸಾರಿಕಾಳನ್ನು ವರಿಸಿದ್ದ. ಕೊನೆಗೆ ಸಾರಿಕಾಳಿಗೂ ಕೊಕ್ ನೀಡಿ ಈಗ ಗೌತಮಿ ಎಂಬ ನಟೀಮಣಿಯೊಂದಿಗೆ ಲಿವಿಂಗ್ ಟುಗೆದರ್ ಬದುಕನ್ನು ಸಾಗಿಸುತ್ತಿದ್ದಾನೆ.

ಶರತ್ ಕುಮಾರ್ ಮತ್ತು ರಾಧಿಕಾ ಇಬ್ಬರೂ ತಮ್ಮ ಮೊದಲ ಸಂಬಂಧಗಳನ್ನು ಮುರಿದುಕೊಂಡವರೇ. ರಾಧಿಕಾ ತನ್ನ ಮೊದಲ ಪತಿ ಹಾಗೂ ನಿರ್ದೇಶಕ ಪ್ರತಾಪ್ ಪೋತನ್‌ಗೆ ಡೈವೋರ್ಸ್ ನೀಡಿದಳು. ಶರತ್‌ಕುಮಾರ್ ಸಹ ತನ್ನ ವೈದ್ಯ ಪತ್ನಿಯೊಂದಿಗಿನ ಸಂಬಂಧವನ್ನು ಕಳಚಿ ಹೊರಬಂದಿದ್ದ. ಈಗ ಈ ಇಬ್ಬರೂ ವಿಚ್ಛೇದಿತರು ಒಂದಾಗಿ ಬಾಳ್ವೆ ನಡೆಸುತ್ತಿದ್ದಾರೆ.



ಇನ್ನು ಕಲಾತ್ಮಕ ಚಿತ್ರಗಳ ಮೂಲಕ ಸದಾ ಒಂದಲ್ಲಾ ಒಂದು ಹೊಸ ಪ್ರಯತ್ನಗಳನ್ನು ಮಾಡುವ ಪಾರ್ತಿಬನ್ ಎಂಬ ನಟ ಕಂ ನಿರ್ದೇಶಕ ಕೂಡ ತನ್ನ ಸ್ವಾತಂತ್ರ್ಯಕ್ಕೆ ಅಡ್ಡಿ ಮಾಡುತ್ತಿದ್ದಾಳೆ ಎಂಬ ಪಿಳ್ಳೆ ನೆವವನ್ನು ನೀಡಿ ತನ್ನ ಹೆಂಡತಿ ಮತ್ತು ನಟಿ ಸೀತಾಳಿಗೆ ಡೈವೋರ್ಸ್ ನೀಡಿದ.

ಇತ್ತೀಚೆಗೆ ತೀರಿಕೊಂಡ ರಘುವರನ್ ಕೂಡ ನಟಿ ರೋಹಿಣಿಯನ್ನು ಪ್ರೀತಿಸಿ ಮದುವೆಯಾಗಿದ್ದ. ಆದರೆ ಮದುವೆಗೆ ಮುಂಚೆ ಪ್ರೀತಿಸಿದ್ದ ಈತ ಮದುವೆಯಾದ ನಂತರ ತನ್ನ ಪತ್ನಿಗೆ ಕೊಟ್ಟಿದ್ದ ಹಿಂಸೆಯೇ ಹೆಚ್ಚು. ಮಾದಕ ವ್ಯಸನಿಯಾಗಿದ್ದ ಈತ ಹೊರ ಪ್ರಪಂಚದಲ್ಲಿ ಅದ್ಭುತ ನಟನಾಗಿದ್ದ ಮತ್ತು ಅಂತರ್ಮುಖಿ ವ್ಯಕ್ತಿತ್ವದವನಾಗಿದ್ದ. ಆದರೆ ಮನೆಯಲ್ಲಿ ಮಾತ್ರ ತನ್ನ ಹೆಂಡತಿಯ ಬಳಿ ಕುಡಿದ ಅಮಲಿನಲ್ಲಿ ರಾಕ್ಷಸನಂತೆ ವರ್ತಿಸುತ್ತಿದ್ದ. ಈತನ ಟಾರ್ಚರ್ ತಡೆಯಲಾರದೆ ರೋಹಿಣಿ ಈತನಿಂದ ವಿಚ್ಛೇದನ ಪಡೆದಿದ್ದಳು. ಅತಿಯಾದ ಕುಡಿತದಿಂದ ಆರೋಗ್ಯ ಹಾಳುಮಾಡಿಕೊಂಡ ಈತ ಎರಡು ವಾರಗಳ ಹಿಂದಷ್ಟೇ ಪ್ರಾಣಬಿಟ್ಟ.



ಇವರುಗಳ ಕತೆ ಹೀಗಾದರೆ ಹಿರಿಯ ನಟ ತ್ಯಾಗರಾಜರ ಪುತ್ರ ಪ್ರಶಾಂತ್‌ನದ್ದು ಇನ್ನೊಂದು ಕತೆ. ಹೀರೋ ಆಗಿ ಒಂದೊಳ್ಳೆ ಇಮೇಜ್ ಇರೋ ಪ್ರಶಾಂತ್‌ಗೆ ಆತನ ತಂದೆಯೇ ಗೃಹಲಕ್ಷ್ಮಿ ಎಂಬ ಹುಡುಗಿಯನ್ನು ಮದುವೆ ಮಾಡಿದ್ದರು. ಆದರೆ ಆಕೆ ಪ್ರಶಾಂತ್‌ನ ಮೇಲೆ ಇಲ್ಲಸಲ್ಲದ ಸುಳ್ಳು ಆರೋಪಗಳನ್ನು ಮಾಡಿ ಕೋರ್ಟು, ಕಚೇರಿ ಎಂದು ಅಲೆಯುವಂತೆ ಮಾಡಿದ್ದಾಳೆ. ಇಂದಿಗೂ ಆಕೆ ಪ್ರಶಾಂತ್ ಜೀವನದಲ್ಲಿ ವಿಲನ್‌ಳಂತೆ ಕಾಡುತ್ತಿದ್ದಾಳೆ.



ಈಗ ಪ್ರಕಾಶ್ ರೈ ಸರದಿ.

ಮಾಜಿ ಕ್ಯಾಬರೆ ನಟಿ ಡಿಸ್ಕೋ ಶಾಂತಿಯ ತಂಗಿ ಲಲಿತಾಕುಮಾರಿಯನ್ನು 1993ರಲ್ಲಿ ಪ್ರೇಮಿಸಿಯೇ ಮದುವೆಯಾದ ಪ್ರಕಾಶ್ ರೈ, ಹೆಂಡತಿ ಮತ್ತು ಇಬ್ಬರು ಮಕ್ಕಳೊಂದಿಗೆ ಸುಂದರವಾದ ಜೀವನವನ್ನೇ ನಡೆಸುತ್ತಿದ್ದರು. ಆದರೆ ನಾಲ್ಕು ವರ್ಷಗಳ ಹಿಂದೆ ಪ್ರಕಾಶ್ ರೈನ ಐದು ವರ್ಷದ ಮಗ ಮಹಡಿಯ ಮೇಲೆ ಗಾಳಿಪಟ ಹಾರಿಸಲು ಹೋಗಿ ಆಚಾನಕ್ಕಾಗಿ ಕೆಳಬಿದ್ದು ಜೀವ ಕಳೆದುಕೊಂಡಿದ್ದ. ಆ ಆಘಾತದಿಂದ ಇನ್ನಿಲ್ಲದ ದುಃಖಕ್ಕೆ ಒಳಗಾದರು ರೈ. ಹೇಗೋ ಆ ದುಃಖದಿಂದ ಹೊರಬಂದು ಒಂದಷ್ಟು ಚಿತ್ರಗಳನ್ನು ನಿರ್ಮಿಸುತ್ತಾ ನಟಿಸುತ್ತಾ ಸಾಗುತ್ತಿದ್ದ ರೈ ಜೀವನ ಯಾಕೋ ಹಾದಿ ತಪ್ಪುತ್ತಿರುವ ಹಾಗಿದೆ. ತನ್ನ ಪರ್ಸನಲ್ ಸೆಕ್ರೆಟರಿ ಹಾಗೂ ಕೊರಿಯೋಗ್ರಾಫರ್ ಬೋನಿ ವರ್ಮಾ ಎಂಬಾಕೆಯನ್ನು ಪ್ರೀತಿಸುತ್ತಿರುವ ರೈ ಈಗ ತಮ್ಮ ಹೆಂಡತಿಗೆ ವಿಚ್ಛೇದನ ನೀಡುವ ಹಂತಕ್ಕೆ ಹೋಗಿದ್ದಾರೆ.

ಸದ್ಯಕ್ಕೆ ಅಲ್ಲಿ ಒಟ್ಟಿಗೇ ಬಾಳುತ್ತಿರುವ ತಾರಾ ಜೋಡಿಗಳೆಂದರೆ ಅಜಿತ್-ಶಾಲಿನಿ ಮತ್ತು ಸೂರ್ಯ-ಜ್ಯೋತಿಕಾ ಮಾತ್ರ. ಕನ್ನಡದ ಪ್ರತಿಭೆ ಅರ್ಜುನ್ ಸರ್ಜಾ ಕೂಡಾ ನಮ್ಮ ಹಿರಿಯ ನಟ ರಾಜೇಶ್‌ರವರ ಪುತ್ರಿ ಆಶಾರಾಣಿ ಮತ್ತು ಇಬ್ಬರು ಹೆಣ್ಣು ಮಕ್ಕಳೊಂದಿಗೆ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.

■ ಅರುಣ್.ಬಿ

## 3ನೇ ಪೂಜಾ



ಕನ್ನಡಕ್ಕೆ ಮತ್ತೊಬ್ಬಳು ಪೂಜಾ ಬಂದಿದ್ದಾಳೆ. ಈಕೆಯ ನಿಜವಾದ ಹೆಸರು ಡಿಂಪಲ್ ಚೋಪ್ರಾ. ಪೂನಾ ನಿವಾಸಿಯಾದ ಈಕೆಗೆ ಅಲ್ಲಿನ ರಂಗಭೂಮಿಯಲ್ಲಿ ನಟಿಸಿದ ಅನುಭವವಿದೆ. ಈಕೆಯನ್ನು ಕನ್ನಡಕ್ಕೆ ಕರೆತಂದಿರುವ ನಿರ್ದೇಶಕ ಅಶೋಕ್ ಕಶ್ಯಪ್ ಸಿನಿಮಾಕ್ಕಾಗಿ ಅವಳ ಹೆಸರನ್ನು ಪೂಜಾ ಎಂದು ಮರುನಾಮಕರಣ ಮಾಡಿದ್ದಾರೆ.

ಈಗಾಗಲೇ ಲೋಕೇಶ್-ಗಿರಿಜಾ ಲೋಕೇಶ್ ದಂಪತಿಗಳ ಮಗಳಾದ ಪೂಜಾ ಲೋಕೇಶ್ ಕನ್ನಡದಲ್ಲಿ ಮಿಂಚುತ್ತಿದ್ದಾಳೆ. ಆಕೆಯ ನಂತರ ಬಂದ 'ಮುಂಗಾರು ಮಳೆ'ಯ ಸಂಜನಾ ಗಾಂಧಿ ತನ್ನ ಹೆಸರನ್ನು ಪೂಜಾ ಗಾಂಧಿ ಎಂದು ಬದಲಾಯಿಸಿಕೊಂಡು ಅತ್ಯಂತ ಬೇಡಿಕೆಯಲ್ಲಿದ್ದಾಳೆ. ಈಗ 'ಸಿಹಿಮುತ್ತು'ನ ಮೂಲಕ ಮೂರನೆ ಪೂಜಾ ಸ್ಯಾಂಡಲ್‌ವುಡ್‌ಗೆ ಕಾಲಿಟ್ಟಿದ್ದಾಳೆ.

ಹಿಂದೊಂದು ಕಾಲವಿತ್ತು. ತಮ್ಮ ಹೆಸರಿನ ನಾಯಕಿ ಅದಾಗಲೇ ಚಿತ್ರರಂಗದಲ್ಲಿ ಇದ್ದರೆ ಹೊಸ ನಾಯಕಿಯರು ತಮ್ಮ ಹೆಸರನ್ನು ಬದಲಾಯಿಸಿಕೊಳ್ಳುತ್ತಿದ್ದರು. ಇದಕ್ಕೆ ಕಾರಣ ಪ್ರೇಕ್ಷಕರಿಗೆ ಕನ್‌ಫ್ಯೂಸ್ ಆಗಬಾರದು ಎಂಬುದು. ಆದರೆ ಈಗ ಎಲ್ಲವೂ ಉಲ್ಟಾ ಪಲ್ಟಾ. ಮಾಲಾಶ್ರೀಯ ಜಮಾನಾದಲ್ಲಿ ಬಹುತೇಕ ಹೊಸ ನಾಯಕಿಯರು ತಮ್ಮ ಹೆಸರಿನ ಕೊನೆಯಲ್ಲಿ 'ಶ್ರೀ' ಎಂದು ಸೇರಿಸಿಕೊಳ್ಳುತ್ತಿದ್ದರು. ಪ್ರೇಕ್ಷಕರಿಗೆ ಕನ್‌ಫ್ಯೂಸ್ ಆಗಿ ತಮ್ಮ ಚಿತ್ರವೂ ಹಿಟ್ ಆಗಲಿ ಎಂಬ ಆಸೆಯಿಂದ ಹಾಗೆ ಮಾಡಿದ್ದರೇನೋ. ಅದೇನೇ ಇರಲಿ, ಈಗ ಗಾಂಧಿನಗರದಲ್ಲಿ ಪೂಜಾ ಎಂಬ ಹೆಸರಿಗೆ ಎಲ್ಲಿಲ್ಲದ ಮಹತ್ವ ಬಂದಿರುವಂತೆ ಕಾಣಿಸುತ್ತಿದೆ.

## ಮುಂಬೈಗೆ ಸುದೀಪ್



'ಗೂಳಿ' ಚಿತ್ರ ಬಾಕ್ಸಾಫೀಸಿನಲ್ಲಿ ಉತ್ತಮ ಓಪನಿಂಗ್ ಪಡೆದರೂ ಆನಂತರ ಮುಗ್ಗರಿಸಿದೆ. ಆದರೆ ಅದರ ನಾಯಕ ಸುದೀಪ್ ಮಾತ್ರ ಸದ್ದಿಲ್ಲದೇ ಬಾಲಿವುಡ್ ಹಿಂದಿ ಚಿತ್ರದಲ್ಲಿ ನಟಿಸುತ್ತಿದ್ದಾರಲ್ಲದೆ, ಅದರಲ್ಲೂ ರಾಮ್ ಗೋಪಾಲ್ ವರ್ಮಾ ಅವರ ನಿರ್ದೇಶನದಲ್ಲಿ ನಟಿಸುತ್ತಿದ್ದಾರೆ ಎಂಬ ಗಾಳಿ ಸುದ್ದಿ ಹಬ್ಬಿದೆ.

ಬಹಳ ಸಮಯದಿಂದ ಬಾಲಿವುಡ್‌ನಲ್ಲಿ ನಟಿಸುವ ಬಗ್ಗೆ ಸುದೀಪ್ ಆಶಯವನ್ನು ಹೊಂದಿದ್ದರು. ಕನ್ನಡದ ನಟನೊಬ್ಬ ಬಾಲಿವುಡ್‌ನಲ್ಲಿ ನಟಿಸುತ್ತಿರುವುದು ನಿಜಕ್ಕೂ ಸಂತೋಷದ ವಿಷಯವಾದರೂ ಅದನ್ನು ಯಾಕೆ ಸುದೀಪ್ ಸದ್ದುಗದ್ದಲವಿಲ್ಲದೆ ಮಾಡುತ್ತಿದ್ದಾರೆ ಎಂಬುದು ಅಚ್ಚರಿ ಮೂಡಿಸುತ್ತದೆ.

ಅದೇನೇ ಇರಲಿ, ಪ್ರತಿಭೆ, ಸೌಂದರ್ಯ, ಮೈಕಟ್ಟನ್ನು ಹೊಂದಿರುವ ಆರಡಿ ಎತ್ತರದ ಸುದೀಪ್ ಅಲ್ಲಿಯೂ ಪ್ರೇಕ್ಷಕರ ಮನಸ್ಸನ್ನು ಗೆಲ್ಲುವಂತಾಗಲಿ. ಒಂದೇ ಒಂದು ಸಮಸ್ಯೆ ಎನೆಂದರೆ ಹಿಂದಿಯ ಜನರು ಅದ್ಯಾಕೋ ದಕ್ಷಿಣ ಭಾರತದ ಕಲಾವಿದರ ಬಗ್ಗೆ ತಾರತಮ್ಯ ತೋರಿಸುವಲ್ಲಿ ನಿಸ್ಸೀಮರು. ಅಂತಹ ಪ್ರತಿಭಾನ್ವಿತ ಕಮಲ್ ಮತ್ತು ರಜನೀಕಾಂತ್‌ಗೆ ಹಿಂದಿಯವರು ಚಳ್ಳೆಹಣ್ಣು ತಿನ್ನಿಸಿ ವಾಪಸ್ ಮದ್ರಾಸಿಗೆ ಕಳುಹಿಸಿದ್ದರು. ಹಾಗಾಗಿ ಸುದೀಪ್ ಅಲ್ಲಿ ಎಚ್ಚರದಿಂದ ನಟಿಸಬೇಕಾಗಿದೆ.

## ಸತ್ಯವಲ್ಲ.... ಅರ್ಧಸತ್ಯ!



'ಸತ್ಯ ಇನ್ ಲವ್' ಒಂದು ಕನ್ನಡ ಚಿತ್ರವೆಂದು ಹೇಳಿದರೆ ಅದು ಅರ್ಧ ಸತ್ಯವಾಗುತ್ತದೆ. ಯಾಕೆಂದರೆ ಈ ಚಿತ್ರದ ದ್ವಿತೀಯಾರ್ಧ ಸಂಪೂರ್ಣವಾಗಿ ತೆಲುಗುಮಯವಾಗಿದೆ. ಆದ್ದರಿಂದ ಇದನ್ನು 'ತೆಲುಗನ್ನಡ' ಚಿತ್ರವೆಂದು ಹೇಳಿದರೇ ಸೂಕ್ತ ಅನಿಸುತ್ತದೆ.



ಶಿವರಾಜ್‌ಕುಮಾರ್ ಅಭಿನಯದ ಈ ಚಿತ್ರದಲ್ಲಿ ನಿರ್ದೇಶಕ ರಾಘವ್ ಲೋಕಿ ತಮ್ಮ ಮೊದಲ ಪ್ರಯತ್ನದಲ್ಲೇ ಒಂದು ಹಂತದವರೆಗೆ ಗೆಲುವನ್ನು ಸಾಧಿಸಿದ್ದಾರೆ. ಚಿತ್ರದ ಮೊದಲರ್ಧ ಸಂಪೂರ್ಣವಾಗಿ ಮನರಂಜನಾತ್ಮಕವಾಗಿ ಮೂಡಿಬಂದಿದೆ. ಕುತೂಹಲಕಾರಿ ಮತ್ತು ಬಿಗಿಯಾದ ನಿರೂಪಣೆಯಿಂದ ದೃಶ್ಯಗಳು ಸಾಗುವುದೇ ಗೊತ್ತಾಗುವುದಿಲ್ಲ, ಆದರೆ ದ್ವಿತೀಯಾರ್ಧವನ್ನು ಜೀರ್ಣಿಸಿಕೊಳ್ಳಲು ಕನಿಷ್ಠ ಆರು ಅನಾಸಿನ್‌ಗಳು ಬೇಕಾಗುತ್ತವೆ.

ಚಿತ್ರದ ಹಾಡುಗಳು ಮತ್ತು ಪೀಟರ್ ಹೇಯ್ಸ್ ನಿರ್ದೇಶನದ ಫೈಟಿಂಗ್ ದೃಶ್ಯಗಳು ಅದ್ಭುತವಾಗಿ ಮೂಡಿಬಂದಿರುವುದರಿಂದ ಇದು ಶಿವು ಅಭಿಮಾನಿಗಳಿಗೆ ಕಿಕ್ ನೀಡಬಹುದು. ಜೆನಿಲಿಯಾ ಎಂಬ ತೆಲುಗು ಸುಂದರಿಯ ಮೋಹಕ ನಗು ಇಷ್ಟವಾಗುತ್ತದೆ. ಗುರುಕಿರಣ್ ಸಂಗೀತ ನಿರ್ದೇಶನದ ಐವತ್ತನೇ ಚಿತ್ರ ಇದಾದರೂ ಅಂತಹ ಅದ್ಭುತವಾದ ಟ್ಯೂನ್‌ಗಳು ಮೂಡಿಬಂದಿಲ್ಲ, ಬಹುತೇಕ ಟ್ಯೂನ್‌ಗಳು ಎಲ್ಲೋ ಹಿಂದಿಯಲ್ಲಿ ಕೇಳಿದಂತೆ ಭಾಸವಾಗುತ್ತದೆ.

ಒಂದು ಸಾಮಾನ್ಯ ಪ್ರೇಮಕತೆಗೆ ಭಾಷೆಯ ಲೇಪನ ಮತ್ತು ಶ್ರೀಮಂತಿಕೆಯ ಅದ್ದೂರಿತನ ನೀಡಿದ್ದಾರೆ ರಾಘವ್ ಲೋಕಿ. ಅದುಬಿಟ್ಟರೆ ಈ ಚಿತ್ರದಲ್ಲಿ ಓಹೋ ಎನ್ನುವಂತ ಹೊಸತನವೇನೂ ಇಲ್ಲ.

## ಚಾಕೊಲೇಟ್ ಹೀರೋಗಳ ಸಮಾಗಮ



ಚಾಕೊಲೇಟ್ ಹೀರೋಗಳಾದ ಪ್ರೇಮ್ ಮತ್ತು ಧ್ಯಾನ್ ಮೊದಲ ಬಾರಿಗೆ 'ಸಿಹಿಮುತ್ತು' ಚಿತ್ರದಲ್ಲಿ ಜೊತೆಯಾಗಿ ನಟಿಸುತ್ತಿದ್ದಾರೆ. ಹುಡುಗಿಯರ ಕಣ್ಮಣಿಗಳಾದ ಈ ಚಾಕೊಲೇಟ್ ಹೀರೋಗಳ ವರ್ಚಸ್ಸು ಈಗ ನಿಧಾನವಾಗಿ ಕುಗ್ಗುತ್ತಿದೆ. ಹೀಗಾಗಿ ಇವರಿಬ್ಬರೂ ಜೊತೆಯಲ್ಲಿ ನಟಿಸಲು ಒಪ್ಪಿಕೊಂಡಿದ್ದಾರೆ ಎನ್ನುತ್ತಿದ್ದಾರೆ ಗಾಂಧಿನಗರದ ಪಂಡಿತರು. ಇಬ್ಬರಲ್ಲಿ ಈ ಚಿತ್ರದ ಮುಖಾಂತರ ಯಾರು ಮತ್ತೆ ಲೈಂಲೈಟಿಗೆ ಬರುತ್ತಾರೋ ನೋಡೋಣ.



## ಕಮಲ ವರಿಸಲಿದ್ದಾರೆಯೇ ಅನಂತ್?



ಬರುವ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಪಕ್ಷದಲ್ಲಿ ಬರೀ ರೌಡಿಗಳಲ್ಲದೆ ಸಿನಿಮಾ ತಾರೆಯರೂ ತುಂಬಿ ತುಳುಕುವ ಸಾಧ್ಯತೆಗಳು ಕಂಡುಬರುತ್ತಿದೆ.

"ಹೆಗಡೆ ಹೇಳಿದರೆ ಹಾಳು ಬಾವಿಗೂ ಬೀಳ್ತೀನಿ'' ಎಂಬ ಹೇಳಿಕೆ ನೀಡುವ ಮೂಲಕ ಜನತಾದಳದ ರಾಜಕೀಯದಲ್ಲಿ ಸಕ್ರಿಯರಾಗಿದ್ದ ಅನಂತ್‌ನಾಗ್ ಕೂಡಾ ಬಿಜೆಪಿ ಸೇರುವ ಸಾಧ್ಯತೆಗಳು ಈಗ ದಟ್ಟವಾಗುತ್ತಿವೆ. ಬಹಳ ವರ್ಷಗಳಿಂದ ಬಿಜೆಪಿಯಲ್ಲಿ ಠಿಕಾಣಿ ಹೂಡಿದ್ದ ಮುಖ್ಯಮಂತ್ರಿ ಚಂದ್ರು ಎಂಬ ಸೈಡ್ ಆಕ್ಟರ್‌ನನ್ನು ಮೊನ್ನೆ ಮಾಜಿ ನಾಯಕ ನಟ ಶ್ರೀನಾಥ್ ಓವರ್‌ಟೇಕ್ ಮಾಡಿದ್ದಾರೆ. ಈಗ ಶ್ರೀನಾಥ್ ಆ ಪಕ್ಷದ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಬಿಜೆಪಿ ಪಕ್ಷಕ್ಕೆ ಇತ್ತೀಚೆಗೆ ಕಣ್ಣೀರ ರಾಣಿ ಶೃತಿ, ನಿರ್ದೇಶಕ ಮಹೇಂದರ್, ಡೈಲಾಗ್ ಕಿಂಗ್ ಸಾಯಿಕುಮಾರ್ ಮತ್ತು ರೀಮೇಕ್ ಸರದಾರ ಸಾಯಿಪ್ರಕಾಶ್ ಸೇರಿಕೊಂಡಿದ್ದಾರೆ. ಅಷ್ಟೇ ಅಲ್ಲದೆ ಸುಂದರ್ ರಾಜ್, ಪ್ರಮೀಳಾ ಜೋಷಾಯಿ, ಟೆನ್ನಿಸ್ ಕೃಷ್ಣ ತರಹದ 'ಜನಪ್ರಿಯ' ಕಲಾವಿದರು ಕೂಡಾ ಬಿಜೆಪಿ ಸೇರಿದ್ದಾರೆ. ಇವರೆಲ್ಲ ಸಾಲದೆಂಬಂತೆ ಇನ್ನಷ್ಟು ಸಿನಿಮಾ ತಾರೆಯರನ್ನು ಬಿಜೆಪಿಗೆ ಸೇರಿಸುವ ಜವಾಬ್ದಾರಿಯನ್ನು ನಿರ್ಮಾಪಕ ವಿಜಯ್ ಕುಮಾರ್ ಅವರಿಗೆ ಯಡ್ಯೂರಪ್ಪನವರು ವಹಿಸಿಕೊಟ್ಟಿದ್ದಾರೆ.

ಈ ವಿಜಯ್ ಕುಮಾರ್ ಸಿನಿಮಾ ಲೋಕದ ತಮ್ಮ ಗಾಡ್‌ಫಾದರ್ ವಿಷ್ಣುವರ್ಧನ್ ಮತ್ತು ಅವರ ಪತ್ನಿ ಭಾರತಿ ವಿಷ್ಣುವರ್ಧನ್ ಅವರನ್ನು ಬಿಜೆಪಿಗೆ ಸೇರಿಸಲು ಭಗೀರಥ ಪ್ರಯತ್ನ ಮಾಡುತ್ತಿದ್ದಾರೆ. ಈ ಮಧ್ಯೆ ಕಿರುತೆರೆಯ ಕನಿಷ್ಠ ಒಂದು ಡಜನ್ ಕಲಾವಿದರು ಬಿಜೆಪಿ ಸೇರುವುದು ಬಹುತೇಕ ಖಚಿತವಾಗಿದೆ.

ಆದರೆ ಇವರ್‍ಯಾರೂ ರಾಜಕೀಯವಾಗಲೀ ಸಾಂಸ್ಕೃತಿಕವಾಗಲೀ ಪ್ರಮುಖರಲ್ಲ. ಆದರೆ ಸಿನಿಮಾ ಮತ್ತು ರಾಜಕೀಯ, ಈ ಎರಡೂ ಲೋಕಗಳಲ್ಲಿ ತನ್ನದೇ ಆದ ತೂಕವನ್ನು ಹೊಂದಿರುವ ಅನಂತ್‌ನಾಗ್‌ರಂಥ ಬುದ್ಧಿಜೀವಿ ನಟ ಕೂಡಾ ಇವತ್ತು ಬಿಜೆಪಿಯನ್ನು ಹೊಗಳುತ್ತಿರುವುದು ಆಘಾತಕಾರಿಯಾಗಿದೆ.

ಇತ್ತೀಚೆಗೆ ಮಾಧ್ಯಮದವರ ಮುಂದೆ ತಮ್ಮ ಮೌನವನ್ನು ಮುರಿದ ಅನಂತ್ ನಾಗ್ "ಈಗ ಭಾರತೀಯ ಜನತಾ ಪಕ್ಷದ ಪರ ಜನರ ಒಲವಿದೆ. ಜನತಾದಳದಿಂದ ಮಾಜಿ ಉಪ ಮುಖ್ಯಮಂತ್ರಿಗಳಾದ ಎಂ.ಪಿ. ಪ್ರಕಾಶ್ ಮತ್ತು ಸಿದ್ದರಾಮಯ್ಯ ಕಾಂಗ್ರೆಗೆ ಹಾರಿದ್ದರಿಂದ ಜನತಾದಳ ವೀಕ್ ಆಗಿದೆ. ನಾನು ಆರಂಭದಿಂದಲೂ ಕಾಂಗ್ರೆಸನ್ನು ವಿರೋಧಿಸುತ್ತಾ ಬಂದವನು. 1983ರಲ್ಲಿ ಬಿಜೆಪಿಯ ಬೆಂಬಲದೊಂದಿಗೆ ಜನತಾದಳ ಅಧಿಕಾರಕ್ಕೆ ಬಂದಿತ್ತು, ದೇವೇಗೌಡರು ಮೊನ್ನೆ ಇಪ್ಪತ್ತು ತಿಂಗಳ ನಂತರ ಬಿಜೆಪಿಗೆ ಅಧಿಕಾರ ಬಿಟ್ಟುಕೊಡಬೇಕಾಗಿತ್ತು...'' ಎಂದೆಲ್ಲ ಮಾತನಾಡಿದರು.

"ಇದೆಲ್ಲದರ ಅರ್ಥ ನೀವು ಈ ಬಾರಿ ಬಿಜೆಪಿಯಿಂದ ಸ್ಪರ್ಧಿಸುತ್ತೀರಾ? ಅಥವಾ ಚುನಾವಣೆಯಲ್ಲಿ ಬಿಜೆಪಿ ಪರ ಪ್ರಚಾರ ಮಾಡುತ್ತೀರಾ'' ಎಂದು ಕೇಳಿದಾಗ "ಅಂತಹ ಪರಿಸ್ಥಿತಿ ಉದ್ಭವವಾಗಲಾರದು'' ಎಂದು ನಕ್ಕರು.

ಅಂದರೆ ಅನಂತ್ ನಾಗ್ ಇನ್ನೂ ದಳ ಬಿಟ್ಟಿಲ್ಲ ಅಥವಾ ಬಿಜೆಪಿ ಸೇರಿಲ್ಲ ಎಂದು ಹೇಳಬಹುದು. ಆದರೂ ಮೊದಲ ಬಾರಿಗೆ ಅನಂತ್ ಬಿಜೆಪಿಯ ಪರ ಮಾತನಾಡುತ್ತಿರುವುದನ್ನು ನೋಡಿದರೆ ಅವರು ಸದ್ಯದಲ್ಲೇ ಪಕ್ಷಾಂತರ ಮಾಡಿದರೂ ಆಶ್ಚರ್ಯವಿಲ್ಲ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main...